
# ಸೂಫಿ ಬ್ಯಾರಿಯ ಜಕಾತ್ ಯಾತ್ರೆ



ಹಂಝ ಮಲಾರ್

# ಸೂಫಿ ಬ್ಯಾರಿಯ ಜ಼ಕಾತ್ ಯಾತ್ರೆ

(ಕಥಾ ಸಂಕಲನ)

## ಹಂಝ ಮಲಾರ್

ಪ್ರಕಾಶಕರು:
ಬ್ಯಾರಿ ಕಲಾರಂಗ
ಮಂಗಳೂರು

BEARY
KALA RANGA
MANGALORE

'SOOFEE BEARYIA ZAKATH YATHRE' A collection of short stories by Hamza Malar. Published by Beary Kalaranga, Mangalore.

| | |
|---|---|
| Author | : HAMZA MALAR |
| First Publication | : 2000 |
| Copies | : 1000 |
| Pages | : 11+87 |
| Price | : 20.00 |


@ ಎಲ್ಲಾ ಹಕ್ಕುಗಳು ಲೇಖಕರಿಗೆ ಸೇರಿದೆ.

ವಿಳಾಸ : ಹಂಝ ಮಲಾರ್
(ಪತ್ರಕರ್ತರು)
ಅರಸ್ತಾನ
ಅಂಚೆ : ಪಾವೂರು - 574182
ಮಂಗಳೂರು ತಾಲೂಕು.

# ಮುನ್ನುಡಿ

ಬಹುಕಾಲದ ಹಿಂದೆಯೇ ಕರಾವಳಿ ಜಿಲ್ಲೆಯಲ್ಲಿ ಬ್ಯಾರಿ ಭಾಷೆ ಚಿಗುರೊಡೆದು ಇಲ್ಲಿನ ಬಹುಭಾಷಾ ಸಂಸ್ಕೃತಿಯ ವೈಶಿಷ್ಟ್ಯಕ್ಕೆ ತನ್ನದೇ ಆದ ಕೊಡುಗೆಯನ್ನಿತ್ತಿದೆ. ಅನನ್ಯ ಪರಂಪರೆಯ ಹೊಸ ಬ್ಯಾರಿ ಸಮುದಾಯವನ್ನು ಇಸ್ಲಾಮ್ ತುಳುನಾಡಿಗೆ ನೀಡಿರುವುದು ಹೌದು. ಹಾಗೆ ನೋಡಿದರೆ ಈ ಪರಿಸರದ ಪ್ರಾದೇಶಿಕ ಭಾಷೆ-ಸಂಸ್ಕೃತಿ-ಪರಂಪರೆಗಳ ಸತ್ವಸಾರ ಹೀರಿ ಹೆಪ್ಪುಗಟ್ಟಿದ ಬ್ಯಾರಿ ಭಾಷೆ ತನ್ನ ಸಾಚಾತನವನ್ನು ಉಳಿಸಿಕೊಂಡು ಗಟ್ಟಿಗೊಳ್ಳುತ್ತಿದೆ. ಅಂತಹ ಸಂಸ್ಕೃತಿಯೊಂದು ಇದೀಗ ಹೊಸ ಚಿಗುರುಗಳ ನಿರೀಕ್ಷೆಯಲ್ಲೇ ತನ್ನ ಹಳೆಯ ಬೇರುಗಳ ಶೋಧನೆಯ ಪ್ರಕ್ರಿಯೆಯಲ್ಲಿ ತೊಡಗಿರುವುದು ಒಂದು ಆರೋಗ್ಯಕರ ಬೆಳವಣಿಗೆ. ಈಗಾಗಲೇ ಬ್ಯಾರಿ ಜನಾಂಗ ಕನ್ನಡದ ಬೌದ್ಧಿಕ ಜಗತ್ತಿಗೆ ಹಲವು ಪ್ರತಿಭೆಗಳನ್ನು ನೀಡಿದ್ದಿದೆ. ಹಾಗೆಯೇ ಈ ಪರಿಸರದ ಇತರ ಸಂಸ್ಕೃತಿಗಳ ಜೊತೆಗೆ ಮುಖಾಮುಖಿಯಾಗುವ ಸಾಧ್ಯತೆಯ ಪ್ರಯತ್ನಗಳತ್ತ ಸಾಗುತ್ತಲೂ ಇದೆ.

ಈ ನಿಟ್ಟಿನಲ್ಲಿ ಪದವೀಧರ, ಪತ್ರಕರ್ತ, ತರುಣ ಲೇಖಕ ಹಂಝು ಮಲಾರ್ ಅಂತಹ ಹೊಸ ಪೀಳಿಗೆಯ ಆಶಾಕಿರಣವಾಗಿ ಅಭಿವ್ಯಕ್ತವಾಗುತ್ತಿದ್ದಾರೆ. ಕನ್ನಡ, ಬ್ಯಾರಿ ಮತ್ತು ತುಳು ಭಾಷೆಗಳಲ್ಲಿ ಬರೆಯುವ ಸಾಮರ್ಥ್ಯದ ಈ ಲೇಖಕ ಈಗಾಗಲೇ ಬ್ಯಾರಿ ಸಂಸ್ಕೃತಿಯ ಮದರಂಗಿ ಅನುಭವಗಳನ್ನು ನೆನಪಿಸುವ ಮ್ಯೊಲಾಂಜಿ ಎನ್ನುವ ಮಾಸಿಕವನ್ನು ಹುಟ್ಟು ಹಾಕಿ ಅದರ ಸಂಪಾದಕರಾಗಿ ಕೆಲಸ ಮಾಡಿರುವುದುಂಟು. ಅಂತಹ ಸಂಸ್ಕೃತಿಯನ್ನೇ ಪರಿಚಯಿಸುವ ಪ್ರಯತ್ನದ ಮ್ಯೊಲಾಂಜಿ ಜಾನಪದ ಅಧ್ಯಯನ ಕೃತಿಯನ್ನು ಪ್ರಕಟಿಸಿರುವುದುಂಟು. ಅದಾಗಲೇ ಅದು ದ್ವಿತೀಯ ಮುದ್ರಣವನ್ನು ಕಂಡದ್ದೂ ಇದೆ. 'ಅರಬಿ ಕಡಲಿಗೆ ಪರದೆ' ಎನ್ನುವ ಇವರ ಕನ್ನಡ ಕಾದಂಬರಿ ಮತ್ತು '..................' ಎನ್ನುವ ತುಳು ಕಾದಂಬರಿ ಪ್ರಕಟಣೆಗಾಗಿ ಸಿದ್ಧವಾಗಿರುವುದೂ ಹೌದು.

'ಸೂಫಿ ಬ್ಯಾರಿಯ ಝಿಕಾತ್ ಯಾತ್ರೆ' ಕಥಾಸಂಕಲನ ಹಂಝು ಮಲಾರ್‌ರ ಹದಿಹರೆಯದಂಚಿನ ಹತ್ತೊಂಬತ್ತರಿಂದ ಇಪ್ಪತ್ತೈದು ವರ್ಷಗಳ ಅವಧಿಯ ಅನುಭವ ಕಥನಗಳು. ವಿವಿಧ ಬಗೆಯ ತುಡಿತ ಮಿಡಿತಗಳ ಬಚ್ಚಿಸಲಾಗದ ನೇರ ಅಭಿವ್ಯಕ್ತಿಯ

ಪ್ರವಾಹಗಳು. ಅವು ಮತ್ತೆ ಮದರಂಗಿಯ ಕಲಾತ್ಮಕತೆಯನ್ನು ಓದುಗರಿಗೆ ಮುದ ನೀಡುತ್ತಲೇ ವಾಸ್ತವ ಜಗತ್ತಿನ ನಿಷ್ಠುರ ಸತ್ಯಗಳನ್ನು ಅನಾವರಣಗೊಳಿಸುತ್ತವೆ. ಗಂಭೀರ ಚಿಂತನೆಗೆ ಹಚ್ಚುತ್ತವೆ. ಅವು ಕರೆನಾಡಿನ ಒಂದಿಷ್ಟು ಅನುಭವಗಳ ಆಯ್ಕೆಯಲ್ಲಿ ಬರಹಗಾರನ ಬೊಗಸೆಗೆ ಸಿಕ್ಕಿದ ಹತ್ತು ಹರಳುಗಳಾಗಿ ಹೊಸ ಹೊಳಹಿನ ಮುತ್ತುಗಳಾಗಿ ತಮ್ಮದೇ ಆದ ಸ್ವಂತಿಕೆ ಜೀವಂತಿಕೆಯ ಮೆರುಗು ನೀಡುತ್ತಿವೆ.

ಸಣ್ಣ ಕಥೆಯಲ್ಲೊಂದು ಸೂಕ್ತ ವಸ್ತುವಿನ ಆಯ್ಕೆಯಿರುತ್ತದೆ. ಹಾಗೆಯೇ ಅದನ್ನು ಪರಿಣಾಮಕಾರಿಯಾದ ಭಾಷಾ ಶೈಲಿಯಲ್ಲಿ ಕಟ್ಟಿಕೊಡುವ ಕೌಶಲವಿರುತ್ತದೆ. ಸೃಜನಶೀಲತೆ ಮತ್ತು ತಂತ್ರಗಾರಿಕೆಯ ಕೆಲಸ ಅಲ್ಲಿ ನಡೆದಿರುತ್ತದೆ. ಕಥೆಗಾರ ಓದುಗರಿಗೆ ಕಟ್ಟಿ ಕೊಡಬೇಕಾದ ಪೊಟ್ಟಣವಿದು. ಅದು ಓದುಗಾರನ ಒಡಲಲ್ಲಿ ಅದರಷ್ಟಕ್ಕೆ ಬಿಚ್ಚಿಕೊಳ್ಳುತ್ತ ಹೊಸ ಅನುಭವದ ರುಚಿಯನ್ನು ಕೊಡಬಹುದು. ಸಣ್ಣ ಕಥೆಯೊಂದು ಇಷ್ಟು ಮಾಡಿದರೆ ಸಾಕೆನಿಸುತ್ತದೆ. ಇಲ್ಲಿನ ಎಲ್ಲ ಕಥೆಗಳೂ ಇಂತಹ ಕೆಲಸವನ್ನು ನಿರ್ವಹಿಸುತ್ತವೆ. ಅವು ಒಂದಕ್ಕೊಂದು ಭಿನ್ನ ಅನುಭವ ಆಲೋಚನೆ ಕೊಡುತ್ತಲೂ ಇವೆ. ಈ ಅರ್ಥದಲ್ಲಿ ಹಂಝ ಮಲಾರ್ ಭರವಸೆ ಹುಟ್ಟಿಸುವ ಬರಹಗಾರನಾಗಿ ನಮಗೆ ಮುಖ್ಯವಾಗುತ್ತಾರೆ. ಸಮಾಜವನ್ನು ನೋಡುವ ಪರಿಶೀಲಿಸುವ ಅವರ ಸೂಕ್ಷ್ಮ ವೀಕ್ಷಣೆಗಳು ಮಹತ್ವದ್ದಾಗುತ್ತವೆ.

ಬದುಕಿನಲ್ಲಿ ಬಹುಬಗೆಯ ಅನುಭವಗಳನ್ನು ಪಡೆದ ಸೂಫಿ ಬ್ಯಾರಿಯಂತಹ ಜಾನಪದ ತಜ್ಞಪೊನ್ನಾನಿಗೆ ಪಯಣಿಸಿ ಪ್ರಥಮ ಝಿಕಾತ್ ಯಾತ್ರೆಯಲ್ಲೇ ಬದುಕಿನ ಅಂತಿಮ ಯಾತ್ರೆಯನ್ನು ಕಂಡ ಘಟನೆಯನ್ನು ನಿರೂಪಿಸುವ 'ಸೂಫಿ ಬ್ಯಾರಿಯ ಝಿಕಾತ್ ಯಾತ್ರೆ' ಕಥೆಯಲ್ಲಿ ಮಾನವೀಯತೆಯ ಸ್ಪರ್ಶವಿದೆ. ರಾಬಿಯಾದ ಮತ್ತು ಪಾರ್ವತಿಯರ ನಡುವೆ ರಂಜಾನ್, ಬಕ್ರೀದ್, ಈದ್‌ಮಿಲಾದ್, ಮೊಹರಂ, ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ದೀಪಾವಳಿ ಹಬ್ಬಗಳ ತಿಂಡಿ ತಿನಸು ಪದಾರ್ಥಗಳು ವಿನಿಮಯಗೊಳ್ಳುವ ಸಂಪ್ರದಾಯವಾಗಲೀ, ಕಲ್ಲಿನ ಕೋರೆಯಲ್ಲಿನ ಪೊಡಿಯ ಬ್ಯಾರಿಯ ಬದುಕಾಗಲೀ, ರೋಗಪೀಡಿತ ಗಂಡನ ನರಳಾಟದ ಹೊತ್ತಿನಲ್ಲಿ ಮಗಳ ಹೆರಿಗೆಯ ತಪಪಡಿಸುವಿಕೆಯಾಗಲೀ, ಎಲ್ಲವೂ ಅಂತಕರಣ ಹಿಂಡುವ ಕ್ಷಣಗಳಾಗಿ 'ಆಯಿಶಾಳ ನೋವಿನ ಸೆಲೆಗಳು' ಕಥೆಯಲ್ಲಿ ಚಿತ್ರಣಗೊಂಡಿವೆ.

ಫಾತಿಮಾ ಅಮೀನಾಳಂತಹ ಹೆಣ್ಣುಗಳು ಸಿದ್ದೀಖನಂತಹ ಢೋಂಗಿ ಪವಾಡ ಪುರುಷರ ಮೋಸದ ಬಲೆಗೆ ಸಿಲುಕಿ ಹೇಗೆ ಬಲಿಯಾಗುತ್ತಾರೆ ಮತ್ತು ಹೋದಲ್ಲಿ

ಬಂದಲ್ಲಿ ಹೇಗೆ ಇಂತಹವರು ಹುಡುಗಿಯರನ್ನು ವಂಚಿಸಿ ಮದುವೆಯಾಗಿ ಭೋಗಿಸಿ ಸಿಪ್ಪೆಗಳನ್ನು ಎಸೆದಂತೆ ವರ್ತಿಸುತ್ತಾರೆ ಎನ್ನುವ ವಾಸ್ತವ ನಿಷ್ಠುರ ಸತ್ಯದ ಪ್ರತಿಬಿಂಬವನ್ನು 'ಫಾತಿಮ' ಕಥೆ ತೆರೆದು ತೋರಿಸುತ್ತದೆ. 'ಕನಸು' ಕಥೆಯಲ್ಲಿ ರಶೀದ್ ಆಮೀನಾಳ ಬಾಲ್ಯದ ಮದುವೆ ಆಟಗಳು ಒಂದೆಡೆ ಮುದ ನೀಡಿದರೆ ವೀಸ ದೊರಕಿಸಿ ಕೊಡುವ ನಾಟಕವಾಡಿ ಸೌದಿ ರಾಷ್ಟ್ರಗಳಿಗೆ ಹಾರಿಸುವ ಏಜೆಂಟರುಗಳು ಯಾರೋ ಬೆವರಿಳಿಸಿ ದುಡಿದ ಇಲ್ಲವೇ ಸಾಲ ಮಾಡಿ ಪಡೆದ ಲಕ್ಷಾಂತರ ರೂಪಾಯಿಗಳನ್ನು ಲಪಟಾಯಿಸಿ ಪರಾರಿಯಾಗುವ ಕ್ರೂರ ವಂಚನೆಯು ರೋಷ ಹುಟ್ಟಿಸುತ್ತದೆ.

ಕಟ್ಟಿಕೊಂಡ ಹೆಂಡತಿಯಿದ್ದಾಗಲೇ ಅರಸ್ಥಾನದಿಂದ ದೂರದ ಕೇರಳದ ಕೋಯಿಕೋಡಿಗೆ ಹೋಗಿ ಮತ್ತೊಂದು ಮದುವೆಯಾಗುವ ಹೈಡ್ರೋಸ್ ತನ್ನ ಮೊದಲ ಹೆಂಡತಿಯನ್ನು ಆಕೆ ರಂಪ ಮಾಡಿದ್ದಕ್ಕಾಗಿ ಸಾಯಿಸಿ ಹಲಸಿನ ಮರಕ್ಕೆ ನೇತು ಹಾಕಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನುವ ಸುಳ್ಳು ಸುದ್ದಿ ಹಬ್ಬಿಸಿ ಸಿಕ್ಕಿಬಿದ್ದು ಜೈಲುವಾಸಿಯಾಗುವ ಕಥೆಯನ್ನು 'ಪೋಸ್ಟ್ ಮಾರ್ಟಂ' ಸುಂದರವಾಗಿ ನಿರೂಪಿಸುತ್ತದೆ. ತನ್ನ ಅಬ್ಬ ಎಲ್ಲಿ ಎಂದು ಕೇಳಿದ ಮಗನಿಗೆ ಖತೀಜಾ ಏನೋ ಹೇಳಿ ಸಮಾಧಾನಪಡಿಸಿದರೆ ಮಗ ಜಲೀಲ್ ನೋಂಬು ಹಿಡಿಯುತ್ತಲೇ ಊರೂರು ಸುತ್ತಿ ಹಾಸನ ಸೇರಿದ ಸಂದರ್ಭ ತನ್ನನ್ನು ಹಿಂಬಾಲಿಸುತ್ತಿದ್ದ ಫಕೀರನೇ ತನ್ನ ಅಬ್ಬನಾದರೂ ಆ ಅರಿವಿಲ್ಲದೆಯೇ ಆತನ ಜೊತೆಯಲ್ಲಿ ಊರಿಗೆ ಬರುತ್ತಾನೆ. ಆದರೆ ಜಲೀಲನ ಉಮ್ಮ ಅದಾಗಲೇ ಇಹಲೋಕ ಬಿಟ್ಟು ಹೋದ ಕ್ಷಣದಲ್ಲೂ ಜಲೀಲ್-ಫಕೀರನ ಸಂಬಂಧ ಅವ್ಯಕ್ತವಾಗಿಯೇ ಉಳಿದು ಹೋಗುವ ವಿಶಿಷ್ಟ ಅನುಭವವನ್ನು 'ಫಕೀರ್' ಕಥೆ ಕೊಡುತ್ತದೆ.

'ಯಾರಿಗೆ ಯಾರುಂಟು?' ಕಥೆ ಒಂದಲ್ಲ ಎರಡು ಮದುವೆಯಾಗಿ ಮಂಚದ ಸುಖ ನೀಡಿ ಕೊನೆಗೆ ಅನಾಥೆಯೆನಿಸಿಕೊಂಡ ಪಾತುವಿನ ವ್ಯಥೆಯೇ ಕಥೆ. ಆಕೆ ಹೇಗೋ ಗೀತಮ್ಮನ ಮನೆ ಸೇರಿ ಸುಬ್ಬು ಆದ ಕಥೆ. ಆಕೆ ಮಣ್ಣು ಪಾಲಾದಾಗಲೂ ದಫನವೋ ದಹನವೋ ಎಂಬ ಬಗೆಗೆ ನಡೆದ ಗುಂಪು ಗಲಭೆಯ ರಗಳೆಯ ಕಥೆ. ಕೊನೆಗೂ ಪೊಲೀಸರ ಪ್ರವೇಶವಾಗಿ ಅಂಬುಲೆನ್ಸ್ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸಾಗಿದಾಗ ಎರಡು ಗುಂಪುಗಳಿಗೂ ಏನನ್ನೋ ಕಳಕೊಂಡಂತೆ ಆದ ಸೂಕ್ಷ್ಮ ಸಂವೇದನೆಯ ಕಥೆ.

ಕೇರಿಯ ಓಣಿಯಲ್ಲೆಲ್ಲ ಸುತ್ತು ಬಳಸಿ ಓಡಾಡುತ್ತಿದ್ದ ಹುಡುಗಿಯನ್ನು ತಮ್ಮ

ಮನೆಗಳ ಅಂಗಳಗಳಲ್ಲೇ ನಿಂತು ಮುಖಕ್ಕೆ ಕೈ ಹೊತ್ತು ಹೈರಾಣಾಗಿ ನೋಡುತ್ತಿದ್ದ ಬುರ್ಕಾಗಳಿಗೆಲ್ಲ ಆಕೆಯ ಪ್ರತಿಯೊಂದು ಹೆಜ್ಜೆಯ ಸಪ್ಪಳವೂ ದಜ್ಜಾಲಿಯ ಹೆಜ್ಜೆ ಸಪ್ಪಳದಂತೆ ಭಾಸವಾದ ಕಥೆ 'ಮದರಂಗಿ'. ಮದುವೆಯಾಗಿ ನಾಲ್ಕೇ ದಿನದಲ್ಲಿ ದೂರದ ಸೌದಿಗೆ ಹೋದ ಗಂಡನಿಗೆ ತನ್ನ ತಂಗಿಯ ಮೂಲಕ 'ನೀವೆಷ್ಟು ವರ್ಷದ ನಂತರ ಬೇಕಾದ್ರೂ ಬನ್ನಿ ನನಗೊಂದು ಮಗು ಕೊಟ್ಮೇಲೆ, ಆ ಮಗುವಿನೊಡನೆ ಆಟವಾಡಿ ದಿನ ಕಳೆಯುತ್ತೇನೆ' ಎಂದು ಪತ್ರ ಬರೆಸಿದ ತಾಹಿರಳ ಆತಂಕದ ಮತ್ತು ಅಷ್ಟೇ ಆತುರದ ಕ್ಷಣಗಳು ಸೂಕ್ಷ್ಮವಾಗಿ ಮೂಡಿ ಬಂದ ಕಥೆ 'ತೌಬಾ'. ಆದರೆ ಅನಿವಾರ್ಯವಾಗಿ ಆಕೆ ಮಾಬ್ಲ ಪಂಡಿತರ ಬಳಿ ಮದ್ದಿಗಾಗಿ ಪರಪುರುಷ ಹಬೀಬನ ಜೊತೆ ಹೋಗಬೇಕಾಗಿ ಬಂದಾಗ ಹಬೀಬನನ್ನೇ ಕೂಡಿ ಹೊಟ್ಟೆ ಊದಿಸಿಕೊಂಡು ತಬ್ಬಿಬ್ಬಾದಾಗ ಅತ್ತೆ ಜುಲೇಖಾಳಿಂದ ಬೈಸಿಕೊಂಡು ಹೊರದೂಡಲ್ಪಟ್ಟ ಕಥೆ. ತಾಹಿರಳ ಗಂಡನಿಗೂ ವಿಷಯ ತಿಳಿದಾಗ ಆತ ನೇರವಾಗಿ ಬಂದು ಟ್ರಂಕ್ ತುಂಬಾ ಹಣ ನೀಡಿ 'ನೀನು ಬಯಸಿದಂತೆ ನಿನ್ನ ಹೊಟ್ಟೆಯ ಕೂಸಿಗಾಗಿ ಈ ದುಡ್ಡು' ಎಂದು ಮತ್ತೆ ತಲಾಖ್ ಹೇಳಿಸಿಕೊಂಡು ಹೊರ ನಡೆದ ಘಟನೆಯ ಕಥೆ ಅಷ್ಟೇ ಸೂಕ್ಷ್ಮವಾಗಿ ಮನೋಜ್ಞವಾಗಿ ಮೂಡಿ ಬಂದ ಕಥೆ. 'ಗ್ರಹಣ' ದಾನದರ್ಮಗಳಿಂದ ಸರಳಸಜ್ಜನಿಕೆ ಯಿಂದ ಜನರ ಮನ ಗೆದ್ದಿದ್ದ ಗುಡಾನ್ ಸಾಹೇಬರಿಗೆ ಅರ್ಪಿಸಿದ ಕಥೆ.

ಈ ಎಲ್ಲಾ ಕಥೆಗಳಲ್ಲೂ ಅವುಗಳ ಅಭಿವ್ಯಕ್ತಿಗಳಲ್ಲಿ ಸ್ಫೋಟಗೊಳ್ಳುವ ಮಾದ, ಮುಖಾಮು, ಮಿಸ್ಕೀನ್, ಚತ್ತೆ, ವಲು, ಮಯ್ಯತ್, ಪೊರ್ತ, ನೇರ್ಚ, ಮುಸಾಫ್, ಜಕಾತ್, ಮಂಜಲಾಟ, ಝಿಯಾರತ್, ಪೊಂಜಿರಿ, ತಕ್‌ದೀರ್, ಅತ್ತಾಳ, ಸಲಾತ್, ಸದಕ, ತಸ್ಬೀಬ್, ಮಗ್ರೀಬ್, ಮೌತ್, ದುವಾ ಮೊದಲಾದ ಅಪ್ಪಟ ಬ್ಯಾರಿ ಸಂಸ್ಕೃತಿಯ ಪದಗಳು ಸೂಫಿ, ಅದ್ರುಂಞ, ಫಕೀರ್, ಅದ್ರಾಮ, ಅವುಂಞ, ಆಯಿಶಾ, ಅಕ್ಬರ್, ಪೊಡಿಯ, ಬೀಪಾತು, ಸಿದ್ದೀಕ್, ಉಸ್ಮಾನ್, ಮಾಮದಾಕ, ಅಜ್ಮೀರ್ ಬಾಬಾ, ಇದ್ರಿಸ್ ಬ್ಯಾರಿ, ನೂರ್‌ಜಹಾನ್, ಖತೀಜ, ಜಮಾಲ್, ತಾಹಿರ, ಉಮ್ಮಾಬಿ, ಜುಲೇಖಾ, ಹಬೀಬ್, ಮಹಮದಾಲಿ, ಇಸ್ಮಾಯಿಲ್, ಪುತ್ತಾಕ, ಮೈಮುನಾ, ಪಾತುಮ ಮೊದಲಾದ ಅಂಕಿತ ನಾಮಗಳು ಒಂದು ಸಂಸ್ಕೃತಿಯೊಳಗಿನ ಆಲೋಚನೆಗಳ ಹೆಸರುಗಳಾಗಿ ಮುಖ್ಯವಾಗುತ್ತವೆ. ಅವು ತಾಜಾ ಬ್ಯಾರಿ ಸಂಸ್ಕೃತಿಯ ಸೊಗಡಿನ ಹೆಸರುಗಳಾಗಿ ಅಲ್ಲಲ್ಲಿ ಓದುಗರ ಗಮನ ಸೆಳೆದು ತಡೆದು ನಲಿಸುವುದುಂಟು. ಮುಖಾಮುಖಿಯಾಗಲು ಬಯಸುತ್ತಲೇ ಸಂವಾದ ನಡೆಸುವ ಪ್ರಯತ್ನದಲ್ಲಿ ಮುಂದೆ ದಾಟಿಸುತ್ತವೆ. ಹಾಗೆ ನೋಡಿದರೆ ಅವುಗಳೇ ಈ ಎಲ್ಲ ಕಥೆಗಳ

ಒಟ್ಟು ಹಂದರಗಳೂ ಆಗಿರುತ್ತವೆ. ಕಥೆಗಳಿಗೆ ಸ್ವಂತಿಕೆ, ಜೀವಂತಿಕೆ, ಅನನ್ಯತೆಗಳಂತಹ ಮೌಲ್ಯಗಳನ್ನು ತಂದು ಕೊಡುತ್ತವೆ. ಇಂತಹ ವಿಶಿಷ್ಟ ಅನುಭವಕ್ಕಾದರೂ 'ಸೂಫಿ ಬ್ಯಾರಿಯ ಝುಕಾತ್ ಯಾತ್ರೆ'ಯ ಓದು ಮುಖ್ಯವಾಗುತ್ತದೆ. ಮಹತ್ವದ್ದಾಗುತ್ತದೆ.

ಇಂತಹ ವೈವಿಧ್ಯಮಯ ದಟ್ಟ ಅನುಭವಗಳ ಕಥೆಗಳ ಕಲಾಕೃತಿಯೊಂದು ಇಪ್ಪತ್ತೈದರ ಎಳೆ ತರುಣ ಹಂಝ ಮಲಾರ್ ಅವರಿಂದ ಸಾಧ್ಯವಾದುದರ ಬಗೆಗೆ ಅಚ್ಚರಿಯಾಗುತ್ತದೆ. ಕುಶಿಯೂ ಆಗುತ್ತದೆ. ಹೇಗೆ ಸಾಧ್ಯವಾಯಿತು ಎನ್ನುವ ಪ್ರಶ್ನೆಗೆ ಬಹುಶಃ ಪಾವೂರಿನ ಅರಸ್ಥಾನದ ಭೌಗೋಳಿಕ ಹಾಗೂ ಸಾಮಾಜಿಕ ಪರಿಸರ ಅಷ್ಟೇ ಸಾಂದ್ರ ಸಾಂಸ್ಕೃತಿಕ ಪರಿಸರವೆನ್ನುವುದು ಉತ್ತರವಾಗಬಹುದು. ಹಂಝ ಮಲಾರ್‌ರಂತಹ ಸೃಜನಶೀಲ ಮನಸ್ಸುಗಳನ್ನು ಇಂತಹ ಪರಿಸರ ಯಾವತ್ತೂ ಕಾಡುತ್ತಿರುತ್ತವೆ. ಇಲ್ಲಿನ ಎಲ್ಲ ಕಥೆಗಳೂ ಬಿಡಿಬಿಡಿಯಾಗಿ ಹೀಗೆ ಬೇರೆ ಬೇರಾಗಿ ಕಂಡರೂ ಅವು ಇಡಿಯಾಗಿ ಒಂದು ಬೃಹತ್ ಕಾದಂಬರಿಗೆ ಸಾಕಾಗುವಷ್ಟು ಮೂಲದ್ರವ್ಯವವನ್ನು ಪಡೆದಿವೆ. ಈ ಅರ್ಥದಲ್ಲಿ ಹಂಝ ಮಲಾರ್ ಭರವಸೆ ಹುಟ್ಟಿಸುವ ಓರ್ವ ಬರಹಗಾರನಾಗಿ ರೂಪುಗೊಳ್ಳುತ್ತಿದ್ದಾರೆ ಎನ್ನುವುದು ಅಭಿಮಾನದ ಸಂಗತಿ. ಅವರಿಂದ ಇಂತಹ ಕೃತಿಗಳು ಬರಬೇಕು ಎಂದು ಆಶಿಸುತ್ತೇನೆ.

ಡಾ. ವಾಮನ ನಂದಾವರ

ಮಂಗಳೂರು

16-12-2000

# ನನ್ನುಡಿ

ಹದಿನೆಂಟರ ಹರೆಯದಲ್ಲೇ ಪೆನ್ನನ್ನು ಕೈಗೆತ್ತಿಕೊಂಡು ಕಥೆ ಬರೆಯತೊಡಗಿದೆ. ಬರೆದವುಗಳು ಪತ್ರಿಕೆಗಳಲ್ಲಿ ಪ್ರಕಟವಾದವು. ಅದರಿಂದ ಆಯ್ದ 10 ಕಥೆಗಳನ್ನು ಒಳಗೊಂಡ 'ಸೂಫಿ ಬ್ಯಾರಿಯ ಜಕಾತ್ ಯಾತ್ರೆ' ಎಂಬ ಕಥಾ ಸಂಕಲನ ಈಗ ನಿಮ್ಮ ಕೈಯಲ್ಲಿದೆ. ನಾನು ಕಂಡು ಕೊಂಡ ಸತ್ಯ ಘಟನೆಗಳು, ಅನುಭವಗಳು ಈ ಕಥೆಗಳಲ್ಲಿ ಹಾಸು ಹೊಕ್ಕಿವೆ.

ಇದು ನನ್ನ ಮೊತ್ತ ಮೊದಲ ಕಥಾ ಸಂಕಲನ. ವಿದ್ಯಾರ್ಥಿ ದೆಸೆಯಲ್ಲೇ ಬೊಳುವಾರು ಮುಹಮ್ಮದ್ ಕುಂಞ ಅವರ ಕಥಾಸಂಕಲನಗಳನ್ನು ಓದಿ 'ಕಥೆ' ಬರೆಯಬೇಕೆಂದು ಮನಸ್ಸು ಮಾಡಿ ಗೀಚಿಕೊಂಡವ. ಆ ಗೀಳು ಕಾಲೇಜು ಬಿಟ್ಟ ಮೇಲೂ ಉಳಿದಿರುವುದು ಸಮಾಧಾನಕರ.

ನನ್ನ ಕಥೆಗಳನ್ನು ಪ್ರಕಟಿಸಿದ ಕನ್ನಡ ಜನಾಂತರಂಗ, ಮುಂಗಾರು, ಪಟ್ಟಾಂಗ, ಅಲ್-ಅನ್ಸಾರ್, ಉದಯವಾಣಿ, ಮ್ಯೊಲಾಂಜಿ, ಜನ ಈ ದಿನ ಪತ್ರಿಕೆಗಳ ಸಂಪಾದಕರುಗಳಿಗೆ ನಾನು ಅಭಾರಿ.

ಕಥೆ ಬರೆಯುವುದು ಸುಲಭ. ಬರೆದದ್ದನ್ನು ಪುಸ್ತಕ ರೂಪಕ್ಕಿಳಿಸುವುದು ಒಂದು ಸಾಹಸ. ನನ್ನ ಈ ಸಾಹಸಕ್ಕೆ ಬೆನ್ನು ತಟ್ಟಿ ಧೈರ್ಯ ತುಂಬಿದ ಕವಿ ಮುಹಮ್ಮದ್ ಬಡ್ಡೂರ್ ಅವರನ್ನು ನಾನಿಲ್ಲಿ ನೆನೆಯಲೇ ಬೇಕಾಗಿದೆ. ಅವರು ಈ ಪುಸ್ತಕ ಹೊರತರುವುದಕ್ಕಾಗಿ ಅಪಾರ ಶ್ರಮ ವಹಿಸಿದ್ದಾರೆ. ಅದೇ ರೀತಿ ತನು-ಮನ-ಧನ ಸಹಾಯವಿತ್ತು ಸಹಕರಿಸಿದ ದ.ಕ. ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ, ಧರ್ಮದರ್ಶಿ ಹರಿಕೃಷ್ಣ ಪುನರೂರು, ಕೊಡಾಜೆ ಹುಸೈನ್ ಹಾಜಿ, ಗೋಳ್ತಮಜಲು ಹಾಜಿ ಜಿ. ಅಬ್ದುಲ್ ಖಾದರ್, ಹಾಜಿ ಅಬ್ದುಲ್ ಅಝೀಝ್ ಬೈಕಂಪಾಡಿ, ರಾಜಲಕ್ಷ್ಮಿ ಮೋಟರ್ಸ್‌ನ ಮಾಲಕ ಬಿ. ಚಿತ್ತರಂಜನ್ ರೈ ಬೊಂಡಂತಿಲ, ಮುಸ್ಲಿಂ ಲೀಗ್‌ನ ನಾಯಕ ಸಿ. ಅಹ್ಮದ್ ಜಮಾಲ್, ಅಡ್ಡೂರ್ ಮುಸ್ಲಿಮ್ಸ್ ವೆಲ್‌ಫೇರ್ ಎಸೋಸಿಯೇಶನ್ ಅಧ್ಯಕ್ಷ ಟಿ. ಹಸನ್ ಅಡ್ಡೂರ್, ಸಂಗೀತಕಾರ ಕೆ.ಕೆ. ನೌಷಾದ್, ಉಳ್ಳಾಲ ದರ್ಗಾ ಅಧ್ಯಕ್ಷ ಹಾಜಿ ಯು.ಕೆ. ಇಬ್ರಾಹಿಂ, ಗುರುಪುರ ಗ್ರಾಮ ಪಂಚಾಯತ್ ಸದಸ್ಯರೂ, ಜಿಲ್ಲಾ ಜಾತ್ಯಾತೀತ (ಯುವ) ಜನತಾದಳದ ಪ್ರಧಾನ ಕಾರ್ಯದರ್ಶಿಯೂ ಆದ ಯು.ಪಿ.

ಇಬ್ರಾಹಿಂ, ಸಾಗರ್ ಟೆಕ್ಸ್‌ಟೈಲ್ ಮಂಗಳೂರು ಇದರ ಪ್ರವರ್ತಕರಾದ ಮೊಹಮ್ಮದ್ ಹನೀಫ್ ಮತ್ತು ಎ.ಎಸ್. ಅಬೂಬಕರ್, ಮಂಗಳೂರು ತಾ. ಪಂ.ನ ಮಾಜಿ ಸದಸ್ಯ ಎನ್. ಇ. ಮುಹಮ್ಮದ್ ಮಲ್ಲೂರ್, ಹಿತೈಷಿಗಳಾದ ಹಾಜಿ ಹಂಝ ಹುಸೈನ್ ಮೆಕ್ಕ, ಅಬ್ದುಲ್ ಖಾದರ್ ಇನವಳ್ಳಿ ಇವರಿಗೆಲ್ಲಾ ನಾನು ಚಿರಋಣಿ.

ನನ್ನ ಈ ಕೃತಿಗೆ ಮುನ್ನುಡಿ ಬರೆದು ಕೊಟ್ಟ ಸಾಹಿತಿ ಡಾ. ವಾಮನ ನಂದಾವರ, ಬದುಕಿಗೊಂದು ನೆಲೆ ಕಲ್ಪಿಸಿ ಕೊಟ್ಟ 'ಕೆನರಾ ಟೈಮ್ಸ್' ಬಳಗದ ವ್ಯವಸ್ಥಾಪಕ ಸಂಪಾದಕ ಬಿ.ವಿ. ಸೀತಾರಾಂ ಮತ್ತು ನನ್ನ ಎಲ್ಲಾ ಪತ್ರಕರ್ತ ಮಿತ್ರರಿಗೆ, ಮುದ್ರಣದ ಹೊಣೆ ಹೊತ್ತ ಮೋಡರ್ನ್ ಕಂಪ್ಯೂಟರ್ಸ್ ಆ್ಯಂಡ್ ಪ್ರಿಂಟರ್ಸ್ ಮಂಗಳೂರು ಮತ್ತು ಎಲ್ಲಾ ಓದುಗ, ಹಿತೈಷಿ ಬಳಗಕ್ಕೆ ನಾನು ಕೃತಜ್ಞ.

ಮತ್ತೊಂದು ಮಾತು, ಅಲ್-ಅನ್ಸಾರ್ ಪತ್ರಿಕೆಯಲ್ಲಿ ಪ್ರಕಟವಾದ ಫಕೀರ್ ಎಂಬ ಕಥೆಯನ್ನು, ಸೌದಿ ಅರೇಬಿಯಾದಲ್ಲಿ ದುಡಿಯುತ್ತಿರುವ ಇಡ್ಯಾ ಮೂಲದ ವ್ಯಕ್ತಿಯೊಬ್ಬರು ಮಡಿಕೇರಿಯಿಂದ ಪ್ರಕಾಶನಗೊಳ್ಳುವ ಫಿರ್ದೌಸ್ ಎಂಬ ಪತ್ರಿಕೆಯಲ್ಲಿ 'ಚೆದುರಿದ ಸಂಸಾರ' ಎಂಬ ಹೆಸರಲ್ಲಿ ಕೃತಿ ಚೌರ್ಯ ಮಾಡಿ ನನಗೆ ಅನ್ಯಾಯ ಉಂಟು ಮಾಡಿದ್ದಾರೆ. ಆದರೂ ಇನ್ನು ಅವರಿಗೆ ಅಂತಹ ಬುದ್ಧಿ ಬಾರದಿರಲಿ ಎಂದು ಆಶಿಸುತ್ತೇನೆ.

22.12.2000

ಹಂಝ ಮಲಾರ್

# ಕಥೆಗಳು


| | | |
|---|---|---|
| | | ಪುಟಗಳು |
| 1. | ಸೂಫಿ ಬ್ಯಾರಿಯ ಝುಕಾತ್ ಯಾತ್ರೆ | 1 |
| 2. | ಆಯಿಶಾಳ ನೋವಿನ ಸೆಲೆಗಳು | 8 |
| 3. | ಫಾತಿಮಾ | 20 |
| 4. | ಕನಸು | 28 |
| 5. | ಪೋಸ್ಟ್ ಮಾರ್ಟಂ | 36 |
| 6. | ಫಕೀರ್ | 47 |
| 7. | ಯಾರಿಗೆ ಯಾರುಂಟು? | 57 |
| 8. | ಮದರಂಗಿ | 63 |
| 9. | ತೌಬಾ | 75 |
| 10. | ಗ್ರಹಣ | 82 |

# ಸೂಫಿ ಬ್ಯಾರಿಯ ಝಿಕಾತ್ ಯಾತ್ರೆ

ಸೂಫಿ ಬ್ಯಾರಿ.. ಹೌದು! ಸುಂದರ ಹೆಸರು. ನೋಡಲು ಚಂದ ಇಲ್ಲದಿದ್ದರೂ 'ಅರಸ್ಥಾನ' ಎಂಬ ನಮ್ಮ ಪುಟ್ಟ ಹಳ್ಳಿಗೆ ಬ್ಯಾರಿ ಜಾನಪದ ಕಥೆ-ಹಾಡುಗಳನ್ನು ಹಾಡಿ ಕೀರ್ತಿ ತಂದವರು. ಸುಮಾರು 80ರ ಹರೆಯದಲ್ಲಿ ಒದ್ದಾಡುತ್ತಿರುವ ಈ ಸೂಫಿ ಬ್ಯಾರಿಯ ಮೈಬಣ್ಣ ಪಾದೆಕಲ್ಲಿನಂತೆ ಕಪ್ಪು. ಒಂದಿಷ್ಟು ಬಿಳಿ ಬೆಳ್ಳಿಗಡ್ಡ, ಕೋಲು ಮುಖ, ಮೈದಾನದಂತೆ ಬೋಳಾದ ತಲೆ! ಅತ್ತಿತ್ತ ನಡೆಯಲು ಬೆತ್ತದ ಊರುಗೋಲು. ದಿನವಿಡೀ ತಾಂಬೂಲ ಜಗಿಯುವ ಗಲ್ಲ. ಆ ಕಪ್ಪು ಮೈಗೆ ಬಟ್ಟೆ ತಾಗಿಸುವುದೇ ಅಪರೂಪ. ಒಂದು ಕನ್ನಡಕ ಕಣ್ಣಿಗಡ್ಡವಿಟ್ಟರೆ ಥೇಟ್ ನಮ್ಮ ಗಾಂಧೀಜಿ ತರಹ. ತತ್ವ ಕೂಡ ಗಾಂಧೀಜಿಯದ್ದೆ.

ಬಡತನ ಎಂಬ ದರಿದ್ರದ ಈ ಸೂಫಿ ಬ್ಯಾರಿಗೆ ಉಳಕೊಳ್ಳಲು ಕೂಡಾ ಸರಿಯಾದ ಮನೆ ಅಂಥ ಇಲ್ಲ. ಪುಟ್ಟದಾದ ಸೋಗೆ ಗುಡಿಸಲು ಅವರನ್ನು ಮಳೆ, ಗಾಳಿ, ಚಳಿ, ಬಿಸಿಲಿನಿಂದ ರಕ್ಷಿಸುತ್ತದೆ. ನೆರೆಯ ಪಂಡಿತ್ ಫಕೀರ್ ಹಾಜಿಯವರು ತನ್ನ ಬಾಲ್ಯದ ಗೆಳೆಯ ಎಂಬ ನಿಟ್ಟಿನಲ್ಲಿ ಕೆಲಸದ ಹುಡುಗ ಅದ್ರುಂಞ ಎಂಬವನಲ್ಲಿ ಹೊತ್ತು ಹೊತ್ತಿಗೆ ಒಂದಿಷ್ಟು ತಿಳಿ ಗಂಜಿಯನ್ನು ಸೂಫಿ ಬ್ಯಾರಿಗೆ ಕಳುಹಿಸಿಕೊಟ್ಟು 'ಪುಣ್ಯ' ಸಂಪಾದಿಸುತ್ತಾರೆ.

ಕಳೆದ ನಾಲ್ಕು ದಶಕಗಳ ಹಿಂದೆ ಇದೇ ಈ ಸೂಫಿ ಬ್ಯಾರಿ ಎಂಬ ಪಾದೆಕಲ್ಲಿನಂಥ ಮನುಷ್ಯ ಜೀವಿಯನ್ನು ಹೊರ ಊರಿನವರು ಮದುವೆ-ಮುಂಜಿ ಸಮಾರಂಭಗಳಿಗೆ ಬ್ಯಾರಿ ಕಥೆ, ಹಾಡುಗಳನ್ನು ಹಾಡಿಸುವುದಕ್ಕೋಸ್ಕರ ಕರೆದೊಯ್ಯುತ್ತಿದ್ದರೂ, ಈಗ ಅವರನ್ನು ಮೂಸಿ ನೋಡುವವರೇ ಇಲ್ಲ ಎನ್ನಬಹುದು. ಅವರ ಬಾಯಿಯಿಂದ ಇಂಥ ಹಾಡುಗಳು ಈಗ ಹೊರಡುವುದಿಲ್ಲ.

ಇತ್ತೀಚೆಗೆ ಅವರನ್ನು ಕಂಡು ಮಾತನಾಡುವ ಸಲುವಾಗಿ ಅವರ ಪುಟ್ಟ ಗುಡಿಸಲಿಗೆ ಕಾಲಿಟ್ಟೆ. ಚಾಪೆಯಲ್ಲಿ ಬಿದ್ದಿದ್ದ ಆ ಕಪ್ಪು ಜೀವ ನನ್ನನ್ನು ಕಾಣುತ್ತಲೇ ಎದ್ದು ಕೂರಲು ಪ್ರಯತ್ನಿಸಿತು.

ನಾನು ನನ್ನ ಪರಿಚಯ ತಿಳಿಸಿದೆ. ಆದರೆ ಅವರಿಗೆ ಅದು ಅರ್ಥವಾಗಲಿಲ್ಲ. ಮತ್ತೊಮ್ಮೆ ಕಣ್ಣಗಲಿಸಿ ಯಾರು ಅಂತ ಕೇಳಿ ಬಾಯ್ಬಿಟ್ಟರು. ನಾನು ಮತ್ತೊಮ್ಮೆ ನನ್ನ ಪರಿಚಯ ಹೇಳಿದೆ. "ಓ... ನೀನಾ? ಏನು ಬಂದೆ ? ಬಾರೀ ಕಥೆ ಬರೆಯುತ್ತೀಯಂತೆ. ಹೌದಾ?" ಎಂದು ಮಾತನಾಡತೊಡಗಿದರು.

'ನಿಮ್ಮ ನಾಲ್ಕೈದು ಭಂಗಿಯ ಫೋಟೋ ತೆಗೆಯಬೇಕಾಗಿತ್ತು' ಎಂದೆ. 'ಹೂಂ' ಎನ್ನಲೂ ಕೂಡಾ ಅವರಿಗೆ ಕೆಪ್ಪಮುಪ್ಪ ಆಗಿತ್ತು. ಅವರು ಅವರ ಬಾಲ್ಯದ ದಿನಗಳ ಬಗ್ಗೆ ಕೆಲಸದ

ಬಗ್ಗೆ, ಸುಖ-ದುಃಖಗಳನ್ನು ಆಸ್ವಾದಿಸಿದ ದಿನಗಳ ಬಗ್ಗೆ ಉಸಿರಾಡುತ್ತಾ ತೊದಲಿದರು. ತೊದಲುತ್ತಿದ್ದಂತೆ ಕುತೂಹಲದಿಂದ ಆಲಿಸುತ್ತಾ, ಫೋಟೋ ಕ್ಲಿಕ್ ಮಾಡಿದೆ.

ಹಾಗೇ ಸಂತನಂತೆ ಕಾಣುವ ಈ ಬ್ಯಾರಿ ಜಾನಪದ ತಜ್ಞನ ಬದುಕನ್ನು ಲೇಖನಿಯ ಮೂಲಕ ಒಂದೆಡೆ ಕಲೆ ಹಾಕಲು ಪ್ರಯತ್ನಿಸಿದೆ. ಅದನ್ನೇ ನಿಮ್ಮ ಮುಂದೆ ಇಡುತ್ತಿದ್ದೇನೆ.

ಸೂಫಿ ಬ್ಯಾರಿ ಹುಟ್ಟಿದ್ದು 1917ನೇ ಇಸವಿಯಲ್ಲಿ ಅಂತ ಕಾಣುತ್ತದೆ. ಆದರೆ ಯಾವ ತಿಂಗಳ, ಯಾವ ದಿನದ, ಯಾವ ಗಳಿಗೆಯಲ್ಲಿ ಹುಟ್ಟಿದರು ಅಂತ ನಿಖರವಾಗಿ ಹೇಳಲು ಬರುವುದಿಲ್ಲ. ಹಾಗೇ ಬರೆದಿಡುವ ಕಾಲವೂ ಅದಲ್ಲ. ಸೂಫಿ ಬ್ಯಾರಿಗೆ ಸ್ವತಃ ತನ್ನ ತಾಯಿಯ ಹೆಸರೇ ಮರೆತಿದೆ. ಹಾಗೇ ಮರೆಯಲೂ ಒಂದು ಕಾರಣವಿದೆ. ಈ ಸೂಫಿ ಬ್ಯಾರಿ 3 ವರ್ಷದ ಮಗುವಾಗಿದ್ದಾಗಲೇ ಅವರ ತಂದೆ-ತಾಯಿ ಮಣ್ಣಲ್ಲಿ ಮಣ್ಣಾಗಿ ಹೋದರು. ನಂತರ ಅವರು ಎದೆಹಾಲು ಕುಡಿದದ್ದು ಅವರ ತಾಯಿಯ ತಂಗಿ ಅಂದರೆ ಚಿಕ್ಕಮ್ಮಳದ್ದು. ಈ ಚಿಕ್ಕಮ್ಮ ಕುರಾನ್ ಗ್ರಂಥದ ಕಾಗದದ ನಡುವೆ ಒಂದು ಕಾಗದದ ಚೂರಲ್ಲಿ 'ನಮ್ಮ ಸೂಫಿ ಬ್ಯಾರಿಗೆ ಬರುವ ಮಾದ 12ಕ್ಕೆ 9 ತುಂಬುತ್ತದೆ' ಅಂತ ಅರಬಿ ಲಿಪಿಯಲ್ಲಿ ಬರೆಸಿದ್ದರು. ಈ ಮಾದ 12 ಬಹುಷ ರಬೀವುಲ್ ಅವ್ವಲ್ ತಿಂಗಳ 12 ಅಥವಾ ಪ್ರವಾದಿ ಮಹಮ್ಮದ್‌ರ ಜನ್ಮದಿನ ಆಗಿರಬಹುದು. ಹೀಗೆ ಬರೆದುದರ ಕೆಳಗೆ 1926ರ ಇಸವಿ ಸಂಖ್ಯೆಯನ್ನು ಬರೆದದ್ದರಿಂದ ಸೂಫಿ ಬ್ಯಾರಿ 1917ರಲ್ಲಿ ಹುಟ್ಟಿದರು ಎನ್ನಬಹುದು.

ಮಾಯಾಲೋಕದಲ್ಲಿ ಮಾಯವಾಗಿ ಬಿಡುವಂಥ ಶರೀರವುಳ್ಳ ಈ ಸೂಫಿ ಬ್ಯಾರಿ ಹುಟ್ಟಿದಾಗ ಬರಗಾಲ ಬಂದಿತ್ತಂತೆ. ಆ ಬರಗಾಲ ಎಂದರೆ ಕುಡಿಯಲಿಕ್ಕೂ ಒಂದು ತೊಟ್ಟು ನೀರಿಗೆ ಬರ! ಆ ಬರಗಾಲದಲ್ಲಿ ಬಾಯಿ ಬಾರದ ಜಾನುವಾರುಗಳೂ ಪ್ರಾಣ ಕಳಕೊಂಡಿದ್ದವು. ಸೂಫಿ ಬ್ಯಾರಿಯ ತಂದೆ ಅದ್ರಾಮ ಬ್ಯಾರಿ ಸಾಕಿದ್ದ ಒಂದು ಜರ್ಸಿ ಹಸು ಸತ್ತಾಗ ಅವರು ಸಹನೆ ಕಳಕೊಂಡು, "ನಿನಗೆ ಕರುಣೆ ಇಲ್ಲವಾ... ಪಡೆದವನೇ?" ಎಂದು ಪ್ರಶ್ನಿಸಿದ್ದರಂತೆ.

ಇದೇ ಕಾರಣಕ್ಕೋ ಏನೋ, ಸೃಷ್ಟಿಯ ಸೃಷ್ಟಿಕರ್ತನಾದ, ಸಕಲ ಸಂಪತ್ತಿನ ಒಡೆಯನಾದ, ಮಣ್ಣಲ್ಲಿ ಮಣ್ಣಾಗಿಸುವ ಶಕ್ತಿ ಪಡೆದ ಆ 'ಅಲ್ಲಾಹು' ಎಂಬ ಪಡೆದವ ಸೂಫಿ ಬ್ಯಾರಿಯ ತಂದೆ ಅದ್ರಾಮ ಬ್ಯಾರಿಯ ಪ್ರಾಣವನ್ನು ಮೂರೇ ಮೂರು ದಿನದೊಳಗೆ ಅಝ್ರಾ ಈಲ್ ಎಂಬ ದೇವದೂತನ ಮೂಲಕ ಹಿಡಿಸಿದ್ದನಂತೆ.

ಮೋಡಗಳ ಎಡೆಯಲ್ಲಿ ನಡೆದಾಡುವ ದೇವದೂತರು ಈ ಸೂಫಿ ಬ್ಯಾರಿಯ ಚಲನವಲನಗಳನ್ನು ಗಮನಿಸಿ, 'ನೀನು ಬಾಳು' ಎಂದು ಬಗೆದಿದ್ದರಿಂದಲೋ ಏನೋ, ಈ ನಮ್ಮ ಸೂಫಿ ಬ್ಯಾರಿ ಮಣ್ಣಲ್ಲಿ ಕರಗಿ ಹೋಗದೆ, ಬರಗಾಲವ ನೆನೆದು ಹಾಡು ಕಟ್ಟಿ, ಕಥೆ ಹೆಣೆದು ಬಾಯಿಯಿಂದ ಬಾಯಿಗೆ ಹಂಚಿ, ಹಾಗೇ ಹಂಚುತ್ತಾ ಅದನ್ನೇ ತನ್ನ ಜೀವದ

ಉಸಿರಾಗಿ ಉಳಿಸಿಕೊಂಡು 'ಬ್ಯಾರಿ ಜಾನಪದ ತಜ್ಞ'ನಾಗಿ ಜನತೆಯಿಂದ ಗುರುತಿಸಲ್ಪಟ್ಟಿರು ಅಂತ ಅವರ ಮಾತಿನಿಂದಲೇ ಅರ್ಥೈಸಲು ಸಾಧ್ಯವಾಗುತ್ತದೆ.

ಸೂಫಿ ಬ್ಯಾರಿಗೆ ಎಳೆಯ ವಯಸ್ಸಿನಲ್ಲೇ ಮದುವೆಯಾಗಿತ್ತಂತೆ. ಬಾಲ್ಯ ವಿವಾಹ ನಡೆಯುತ್ತಿದ್ದ ಕಾಲವದು. ಈ ಬ್ಯಾರಿಗೆ 19ನೇ ವಯಸ್ಸಿನಲ್ಲಿ ನೆರೆಯ ಕುಂಞ ಅಲೀಮಮ್ಮ ಎಂಬವರ ಮಗಳಾದ 'ಅವುಂಞ' ಎಂಬ ಕನ್ಯೆಯೊಡನೆ ಮದುವೆಯಾಗಿತ್ತಂತೆ. ಇನ್ನೂ ಪ್ರೌಢಾವಸ್ಥೆಗೇರದ ಸೂಫಿ ಬ್ಯಾರಿ ಆ ಕಾಲದ ಒಂದನೇ ಕ್ಲಾಸು ಕಲಿತಿದ್ದರಿಂದಲೋ ಏನೋ ಗಾಂಧೀಜಿಯು ಬಾಲ್ಯ ವಿವಾಹ ವಿರೋಧದ ಹೇಳಿಕೆಯನ್ನು ಅರ್ಥೈಸಿ ನೋವುಂಡಿದ್ದರಂತೆ."ನನಗೆ ಇಷ್ಟು ಬೇಗ ಮದುವೆ ಬೇಡವಿತ್ತು" ಎಂದು ಪದೇ ಪದೇ ಸೂಫಿ ಬ್ಯಾರಿ ಹೇಳುತ್ತಿದ್ದಾಗ ನೆರೆಯವರು "ಹಾಗಾದರೆ ಪಾದ್ರಿಯೋ, ಸನ್ಯಾಸಿಯೋ ಆಗಿ ಬಿಡು" ಎನ್ನುತ್ತಿದ್ದರಂತೆ.

ಸೂಫಿ ಬ್ಯಾರಿಯ 'ಅವುಂಞ' ಎಂಬ 'ಮಣ್ಣಿನ ಕಣದ ಹೆಣ್ಣು' ನೋಡಲು ತುಂಬಾ ಚೆಂದ. ಅಷ್ಟೇ ಅಲ್ಲ ಬುದ್ಧಿವಂತೆ ಕೂಡಾ. ಹಾಗಾಗಿಯೇ ಅವರೊಳಗೆ ಎಲ್ಲಿಲ್ಲದ ಪ್ರೀತಿ! ಆದರೆ ಏನು ಮಾಡುವುದು? ಅವರು ಏಳೆಂಟು ವರ್ಷಗಳ ಕಾಲ ಹತ್ತಿರ ಬಲು ಹತ್ತಿರವಾದರೂ ಅವರಿಗೆ ಮಕ್ಕಳನ್ನೇ ಪಡೆದವ ಕರುಣಿಸಲಿಲ್ಲ. ಮಕ್ಕಳಿಗಾಗಿ ಹಂಬಲಿಸಿದ, ಮಕ್ಕಳಿಲ್ಲದ ನೋವಿನಿಂದ ತೊದಲಿದ ಈ ಸೂಫಿ ಬ್ಯಾರಿಯ ಮನಕ್ಕೆ ಶಾಂತಿ ತುಂಬಲು 'ಅವುಂಞ'ಗೆ ಸಾಧ್ಯವಾಗಲಿಲ್ಲ. ಹಾಗಾಗಿಯೇ ಅವರೊಳಗೆ ನಾಲ್ಕು ತಿಂಗಳ ಕಾಲ ಮಾತುಕತೆಯೇ ಇರಲಿಲ್ಲ.

ಅದರೆ ಏಕ ಇಲಾಹಿಯಾದ ಪಡೆದವನು ಅನುಗ್ರಹಿಸಿದರೆ ತಾನೆ, ಮಕ್ಕಳು! ಆ ಸೃಷ್ಟಿಕರ್ತ ಎಂಬ ಅಲ್ಲಾಹು ಸೃಷ್ಟಿಗಳ ಹಣೆಯಲ್ಲಿ ಬರೆದಂತೆ ಅಲ್ಲವೇ ಆಗುವುದು. ಸೂಫಿ ಬ್ಯಾರಿಯ ನೋವನ್ನು ಅರ್ಥೈಸಿದ, ಹತ್ತಿರದಲ್ಲೇ ಧರ್ಮ ಪ್ರಚಾರ ಮತ್ತು ಜಾತಿ ಮತವಿಲ್ಲದೆ ಜನಸೇವೆಯಲ್ಲಿ ನಿರತರಾದ ಶೈಖ್ ಅರಸ್ತಾನ್ ವಲಿಯವರು ಅಲ್ಲಾಹನ ಅದ್ಭುತ ಮಹಿಮೆಯನ್ನು ವಿವರಿಸಿ, 'ಕೊರಗಬೇಡ, ಸಂತೋಷಪಡು! ಸಂತೋಷ ಪಡಬೇಡ, ಕೊರಗು' ಎಂದಿದ್ದರಂತೆ. ಅವರು ಹೇಳಿದ ಮೂರೇ ದಿನದಲ್ಲಿ ಈ ಸೂಫಿಬ್ಯಾರಿಗೆ ತಂದೆ ಇಲ್ಲದ ನೆರೆಯ ಹೆಣ್ಣು ಮಗುವನ್ನು ಸಾಕುವ ಸೌಭಾಗ್ಯ ಒದಗಿತ್ತು. ಇದರಿಂದ ಸಂತಸಗೊಂಡ ಸೂಫಿ ಬ್ಯಾರಿ ಮತ್ತೆ ಮುಂದಿನ ಶುಕ್ರವಾರದ ಜುಮಾ ನಮಾಜಿಗೆ ಹಾಜರಾಗುವ ಮುನ್ನವೇ ಎಳತು ದೇಹದ ತನ್ನ 'ಅವುಂಞ' ಇಹಲೋಕ ತ್ಯಜಿಸಿದ್ದನ್ನು ಕಣ್ಣಾರೆ ನೋಡಲಾಗದೆ ಸಂತೋಷ ಪಡುತ್ತಿದ್ದ ಕಾಲದಲ್ಲಿ ಕೂಗಿ ಕರೆದಿದ್ದರಂತೆ. ನಂತರ ಅರಸ್ತಾನ ವಲಿಯವರ ಮಾತನ್ನು ಅರ್ಥೈಸಿ ಅವರ ಮೇಲೆ ಅಭಿಮಾನ ಪಟ್ಟಿದ್ದರಂತೆ.

ಸೂಫಿ ಬ್ಯಾರಿ ಮತ್ತೆ ಮದುವೆ ಮಾಡಿಕೊಳ್ಳಲಿಲ್ಲ. ಅನಾಥ ಮಗುವನ್ನು ಸಾಕಲು ಮನಸ್ಸು

ಮಾಡಿಕೊಂಡರು. ತನ್ನದಲ್ಲದ ಮಗುವಿಗೆ `ಐಸಾಉಮ್ಮಾ'ಎಂಬ ಮುದ್ದು ಹೆಸರಿನಿಂದ ಸಾಕಿ ಕಾಲಕಾಲಕ್ಕೆ ಅನ್ನಾಹಾರ ಕೊಟ್ಟು ದೇಹಕ್ಕೆ ಯಾವುದೇ ಬಾಧೆ ಬಾರದಂತೆ ನೋಡಿಕೊಂಡು ಆ ಮಗು ಅಂಬೆಗಾಲಿನಿಂದ ನಡೆಯಲು ಹೆಜ್ಜೆ ಹಾಕುವುದನ್ನು ನೋಡುತ್ತ ಕುಶಿ ಪಟ್ಟಿದ್ದರಂತೆ.

ಆಸ್ತಿ ಬೇಡ, ಉಳಕೊಳ್ಳಲು ಒಂದು ಮನೆಗೆ ಸಾಕಾಗುವಷ್ಟು ಜಾಗ ಸಾಕು ಎಂದು ಬಗೆದಿದ್ದ ಸೂಫಿ ಬ್ಯಾರಿ ಸ್ವತಃ ತನ್ನದಲ್ಲದ 'ಐಸ ಉಮ್ಮಾ' ಎಂಬ ಮಗಳ ಮದುವೆಗಾಗಿ ಭೂಮಿ ಮಾರಲು ಮಾತುಕತೆ ನಡೆಸಿದ್ದರಂತೆ. ಅವರ ಪುಟ್ಟ ಒಂದೆಕ್ರೆ ಜಾಗವನ್ನು ಖರೀದಿಸಲು ಕಾರಲ್ಲಿ ಒಬ್ಬ ಸಾಹುಕಾರ ವಾರಕ್ಕೊಂದೆರಡು ಬಾರಿ ಬಂದು ಮಾತನಾಡಿ ಹೋಗುತ್ತಿದ್ದನಂತೆ. ಆ ಕಾರಲ್ಲಿ ಸಾಹುಕಾರನ ಬೆಳ್ಳಗಿನ ಕಿರಿಯ ಮಗನೂ ಬರುತ್ತಿದ್ದನಂತೆ. ಬರುತ್ತಾ ಆತ ಸೂಫಿ ಬ್ಯಾರಿಯ ಸ್ವಂತದವಳಲ್ಲದ 'ಐಸಾಉಮ್ಮ' ಎಂಬ ಮಗಳ ಮೇಲೆ ಕಣ್ಣು ಹಾಕಿ ನಂತರ ಮಾತನಾಡಿ ಕೊನೆಗೆ ಮದುವೆಯ ಪ್ರಸ್ತಾಪವೂ ಬಂದಿತ್ತಂತೆ.

ಐಸಾ ಉಮ್ಮ ಎಂಬ ಆ ಹೆಣ್ಣು ಸೂಫಿಬ್ಯಾರಿ ತನ್ನ ಹುಟ್ಟಿಸಿದ ತಂದೆ ಅಲ್ಲ ಎಂದು ತಿಳಿದು ಒಂದಿಷ್ಟು ಕರುಣೆ ತೋರದೆ ಕಾರಲ್ಲಿ ಬರುವ ಬಿಳಿ ಹುಡುಗನ ಜತೆಗೆ ಯಾರಲ್ಲೂ ಹೇಳದೆ ಹೊರಟು ಹೋಗಿದ್ದಳಂತೆ. ಅಂದಿನಿಂದ ಈ ಸೂಫಿ ಬ್ಯಾರಿಯ ಬದುಕೇ ಒಂಟಿ.ತನ್ನದಲ್ಲದ ಸಾಕುಮಗಳ ಮದುವೆಗೆಂದು ಒಂದೆಕ್ರೆ ಭೂಮಿಯನ್ನೂ ಮಾರಿದ್ದಾಯಿತು. ಎಳತು ದೇಹದ ಹೆಂಡತಿ ಎಂಬ ಹೆಂಗಸಾದ ಅವ್ವುಂಞ ಅಕಾಲ ಮರಣಕ್ಕೆ ತುತ್ತಾದರೆ, ಸಾಕು ಮಗಳಾದ ಐಸಾ ಉಮ್ಮ ಪ್ರೇಮಕ್ಕೆ ಬಲಿಬಿದ್ದು, ಬಿಸಿಲ್ಗುದುರೆಯಂತೆ ಓಡಿ ಹೋಗಿದ್ದಳು.

ಸೂಫಿ ಬ್ಯಾರಿ ಬಾಲ್ಯದ ದಿನದಿಂದ ಹಿಡಿದು ಚಾಪೆ ಹಿಡಿಯುವರೆಗೆ ಮಾಡಿದ ಕೆಲಸವನ್ನು ನೋಡಿದರೆ ಪಡಬಾರದ ಕಷ್ಟಪಟ್ಟಿದ್ದರು ಎನ್ನಬಹುದು.

ಸೂಫಿ ಬ್ಯಾರಿ ಶಾಲೆಗೆ ಹೋಗುತ್ತಿದ್ದ ಬಾಲ್ಯದ ದಿನವದು. ಬಡತನದ ಬೇಗೆ ಬೇರೆ. ಚಿಕ್ಕಮ್ಮ ಬೀಡಿ ತಿರುವುತ್ತಿದ್ದರೂ ಗಂಜಿ ಉಣ್ಣಲೂ ಸಾಧ್ಯವಾಗದೆ, ಒಂದು ದಿನ ಮಧ್ಯಾಹ್ನ ಶಾಲೆ ಬಿಟ್ಟು ಗಂಜಿಗಾಗಿ ಓಡೋಡಿ ಬಂದು ಗಂಜಿಯ ಮಡಕೆಗೆ ಕೈ ಹಾಕಿದಾಗ ಖಾಲಿ ಮಡಕೆಯನ್ನು ಕಂಡು ಅಲ್ಲೇ ಚೆನ್ನಾಗಿ ತುಂಡರಿಸಿದ್ದ ನೀರುಳ್ಳಿ ಬೆಲ್ಲವನ್ನು ಜಗಿದು ತಿಂದು ಹೊಟ್ಟೆ ತುಂಬಿಸುವಾಗ ಯಾರಿಗೆ ಬೇಕು ಶಾಲೆ ಅನಿಸಿತು. ಅಂದು ಕೊನೆ. ಮತ್ತೆ ಶಾಲೆಯ ಮುಖ ನೋಡಿದ್ದಿಲ್ಲ.

ಊರ 'ಗೇರುಬೀಜ ಹಾಜಿ'ಯಾರರ ಮನೆಯಲ್ಲಿ ಚಾಕರಿ ಮಾಡಲು ಶುರು ಮಾಡಿದ ಸೂಫಿ ಬ್ಯಾರಿ ದಿನಗಳೆದಂತೆ ಗೇರುಬೀಜವನ್ನು ಪಾಡಿಗೆ ತೆಗೆದು, ಊರಿಡೀ ಕುಪ್ಪಿಯನ್ನು

ಹೆಕ್ಕಿ ತಂದು ಮನೆಯಲ್ಲಿ ರಾಶಿ ಹಾಕಿ ಚೆನ್ನಾಗಿ ತೊಳೆದು ಪಟ್ಟಣಕ್ಕೆ ಹೊತ್ತು ಕೊಂಡೊಯ್ದು, ಮಾರಾಟ ಮಾಡಿ ಮಾರಿ ಬಂದ ಹಣದಿಂದ ತರಕಾರಿಯನ್ನು ಹೊತ್ತು ತಂದು ಮತ್ತೆ ಗಲ್ಲಿ ಗಲ್ಲಿ ಸುತ್ತಿ ಮಾರಾಟ ಮಾಡಿದ್ದುಂಟು. ಜವುಳಿಯನ್ನು ಊರಿಡೀ ತಿರುಗಿ ಮಾರಿ ಕಂತಿನ ಮೂಲಕ ವಸೂಲಿ ಮಾಡುವ ಕಾಯಕ ನಡೆಸಿದ್ದುಂಟು. ಮಾಂಸದ ಮಾರಾಟಕ್ಕೆ ಕೈ ಹಾಕಿದ್ದುಂಟು. ಕೊನೆಗೆ ಊರಲ್ಲಿ ಕೆಲಸವೇ ಸಿಗದಿದ್ದಾಗ ಸಿಕ್ಕ ಕೆಲಸದಲ್ಲಿ ಫಾಯಿದೆ ಕಾಣದಿದ್ದಾಗ, ಮೂಡಿಗೆರೆಯಿಂದ ಮರದ ಮೇಪನ್ನು ತುಂಬಿಕೊಂಡು ಬರುವ ಲಾರಿಯಲ್ಲಿ ಕ್ಲೀನರ್ ಆಗಿ ಓಡಾಡಿದ್ದು ಉಂಟು.

ಕೊನೆಗೆ ಯಾವುದರಲ್ಲೂ ಸುಖ ಕಾಣದೆ ತಾನು ಬಾಲ್ಯದ ದಿನದಲ್ಲಿ ಕಟ್ಟಿದ ಹಾಡು, ಕಥೆಯನ್ನು ಹಾಡುವ ಕಾಯಕವನ್ನಾಗಿ ಮಾಡಿ ತುಸು ಸಂಪಾದನೆ ಗಳಿಸತೊಡಗಿದರು. ಬ್ಯಾರಿ ಹಾಡಿನ, ಜಾನಪದ ಕಥೆಯನ್ನು, ಮದುವೆ, ಮುಂಜಿ, ಬಯಕೆ ಮುಂತಾದ ಔತಣ ಕೂಟ ಸಮಾರಂಭಗಳಿಗೆ ಹೋಗಿ ಹಾಡಿ, ಹೇಳಿ ಸಭಿಕರಿಂದ ಮೆಚ್ಚುಗೆ ಪಡೆಯುತ್ತಿದ್ದರು.

ದೂರದ ಹಲವು ಊರವರೂ ಕೂಡಾ ಅವರನ್ನು ಕರೆದೊಯ್ಯುತ್ತಿದ್ದರು. 'ಸೂಫಿ ಬ್ಯಾರಿ -ಬ್ಯಾರಿ ಜನಪದ ತಜ್ಞ' ಎಂಬ ಹೆಗ್ಗಳಿಕೆಗೆ ಪಾತ್ರರಾದಾಗ ಅವರಿಗೆ ಆದ ಹರ್ಷ ಬಾನಿನಷ್ಟು. ಬ್ಯಾರಿ ಸಮುದಾಯದವರೆಲ್ಲರೂ ಸೂಫಿ ಬ್ಯಾರಿ ಓರ್ವ ಉತ್ತಮ 'ಬ್ಯಾರಿ ಜನಪದ ಸಾಹಿತ್ಯ ಶಿಲ್ಪಿ' ಎಂದೂ ಕೂಡಾ ಬಣ್ಣಿಸಿದ್ದರು. ಹಾಗಾಗಿಯೇ ಅವರ ಮೇಲಿನ ಮಮತೆಯಿಂದ ಕೆಲವು ಅಭಿಮಾನಿಗಳು ಮಾಸಾಶನವಿಲ್ಲದೆ ಸಂಕಷ್ಟದಲ್ಲಿದ್ದ ಸೂಫಿ ಬ್ಯಾರಿಗೆ ಪ್ರತಿ ತಿಂಗಳು ಒಂದಿಷ್ಟು ಗೌರವಧನ ಕಳುಹಿಸಿಕೊಡುತ್ತಿದ್ದರು. ದಿನಗಳೆದಂತೆ ಅಭಿಮಾನಿ ವೃಂದ ಮರೆಯಾಗತೊಡಗಿದ್ದು ದುರದೃಷ್ಟಕರ!

ಇಂಥ ಓರ್ವ ದಾರ್ಶನಿಕ ಮೇರು ವ್ಯಕ್ತಿಯನ್ನು ನಾನು ಕಂಡು ಮಾತನಾಡಿದ್ದರಿಂದ ಇವಿಷ್ಟನ್ನು ಬರೆಯಲು ಸಾಧ್ಯವಾಯಿತು. ಇಲ್ಲದಿದ್ದರೆ ಅವರ ಕತೆ ಅವರ ಜತೆ ಮಣ್ಣಲ್ಲಿ ಮಣ್ಣಾಗಿ ಹೋಗುತ್ತಿತ್ತು.

ನಾನು ಸಂದರ್ಶಿಸಿ ಬರೆದವುಗಳನ್ನು ಓದಿ ತಿಳಿಸುವಂತೆ ಸೂಚಿಸಿದರು. ನಾನು ಓದಿದೆ. ತನ್ನ ಫೊಟೋವನ್ನು ಬದುಕಿನುದ್ದಕ್ಕೂ ಕಂಡಿರದ ಅವರು 'ಇದನ್ನೊಮ್ಮೆ ಚಂದ ಮಾಡಿಕೊಡು. ನೋಡಿ ಬಿಡುವೆ' ಎಂದೂ ಕೂಡಾ ಆಸೆಯಿಂದ ನುಡಿದರು.

ನಾನು ಹೊರಡಲನುವಾದೆ. "ಈಗ ನೀನು ಇಷ್ಟು ಬರೆದೆಯಲ್ಲ. ಅದನ್ನು ಏನು ಮಾಡುವೆ?" ಅಂತ ಬಲು ಉತ್ಸಾಹದಿಂದ ಕಣ್ಣಗಲಿಸಿ ಯಾಚಿಸಿದರು. 'ಪತ್ರಿಕೆಯಲ್ಲಿ ಪ್ರಕಟಿಸುವೆ' ಎಂದೆ. "ಹಾಗಾದರೆ, ನನಗೊಂದು ಕಳುಹಿಸಿ ಕೊಡು" ಎಂದರು.

'ಹಾಂ... ಇವನೇ, ಬರುವ ತಿಂಗಳು ರಂಜಾನ್ ತಾನೆ. ನನಗೆ 'ಪೊನ್ನಾನಿ'ಗೆ ಝಕಾತ್

ಯಾತ್ರೆಗೆ ಹೊರಡಲಿಕ್ಕಿದೆ' ಎಂದರು. 'ಯಾರು ಒಬ್ಬರೇ ಹೋಗುವುದಾ?" ನಾನು ಕೇಳಿದೆ.

'ಹೌದು! ಝಿಕಾತ್ ಯಾತ್ರೆಗೆ ಅಲ್ವಾ? ಹಲವು ವರ್ಷಗಳ ಹಿಂದೆಯೇ ಅಲ್ಲಿಗೆ ಹೋಗಲು 'ನಿಯ್ಯತ್' ಮಾಡಿದ್ದೆ ಎಂದರು.

ಹಾಗೇ ಅವರು ತನ್ನ ಸೊಂಟಕ್ಕೆ ಸುತ್ತಿದ್ದ ಚರ್ಮದ ಬೆಲ್ಟನ್ನು ಬಿಚ್ಚುತ್ತಾ.. 'ನೋಡು, ಇದರಲ್ಲಿ ತುಂಬಾ ಚೀಟಿ ಉಂಟು. ಬೇಡವಾದದ್ದನ್ನು ತೆಗೆದು ಬಿಸಾಡು. ಪೊನ್ನಾನಿಗೆ ಹೋಗುವುದಲ್ಲಾ? ಪುಣ್ಯ ಸ್ಥಳಕ್ಕೆ ಹೋಗುವಾಗ ಇದೆಲ್ಲ ಯಾಕೆ... ?" ಎಂದರು.

ನಾನು ಚೀಟಿಗಳನ್ನು ಪರಿಶೀಲಿಸಿ ಅನಾವಶ್ಯಕವಾದದ್ದನ್ನೆಲ್ಲ ಬಿಸಾಡಿದೆ. ಹಾಗೇ ಅವರ ಸ್ವವಿಳಾಸ ಇಲ್ಲದ್ದನ್ನು ಕಂಡು ಒಂದು ಚೀಟಿಯಲ್ಲಿ ಸ್ವವಿಳಾಸ ಬರೆದು ಆ ಬೆಲ್ಟಿನ ಪುಟ್ಟ ಕಿಸೆಯಲ್ಲಿಟ್ಟೆ.

'ದಕ್ಷಿಣ ಭಾರತದ ಮೆಕ್ಕಾ' ಎಂದು ಪ್ರಸಿದ್ಧಿ ಪಡೆದ 'ಪೊನ್ನಾನಿ'ಗೆ ಸೂಫಿ ಬ್ಯಾರಿ ಪ್ರಪ್ರಥಮ ಬಾರಿಗೆ ಝಿಕಾತ್ ಯಾತ್ರೆ ಕೈಗೊಂಡರು. ಯಾತ್ರೆಯ ಉದ್ದೇಶ ಸೂಫಿವರ್ಯರ 'ಮುಖಾಮು' ಸಂದರ್ಶನ, ಆಶೀರ್ವಾದದೊಂದಿಗೆ ಅಲ್ಲೇ ವಲಿಯುವರು ಇಚ್ಛಿಸಿದ ದಿನದವರೆಗೆ ಝಿಕಾತ್ ಹಣದಿಂದ ದಿನದೂಡುವುದಾಗಿತ್ತು. ಅಲ್ಲಿಗೆ ದೂರದಿಂದ ಅದೆಷ್ಟೋ 'ಮಿಸ್ಕೀನ್'ಗಳು ಬಂದು ಹೀಗೆ ಜೀವನ ಸಾಗಿಸುತ್ತಿದ್ದರು. ಇಂಥ ಮಿಸ್ಕೀನ್ ವರ್ಗದವರಿಗೆ ಮುಖಾಮು ಸಂದರ್ಶಕರು ಝಿಕಾತ್ ಕೊಡುತ್ತಿದ್ದರು.

ಎರಡು ತಿಂಗಳು ಕಳೆಯಿತು. ಜಿಲ್ಲೆಯ ಹಿರಿಯ ಬ್ಯಾರಿ ಜನಪದ ತಜ್ಞ ಸೂಫಿ ಬ್ಯಾರಿಯವರ ವ್ಯಕ್ತಿ ಪರಿಚಯವು ನಮ್ಮ ಪತ್ರಿಕೆಯಲ್ಲಿ ಅಚ್ಚಾಗಿದ್ದರಿಂದ ಅದನ್ನು ಗೂಡುಗಟ್ಟಿದ ಎದೆಯುಳ್ಳ ಸೂಫಿ ಬ್ಯಾರಿಗೆ ತೋರಿಸಬೇಕೆಂಬ ಆಸೆಯಿಂದ ಅವರು ಪೊನ್ನಾನಿಯಿಂದ ಬಂದಿರಹುದೆಂಬ ನಿರೀಕ್ಷೆಯಿಂದ ಅವರ ಮನೆಗೆ ಕಾಲೆಳೆದೆ.

ಅವರ ಆ ಸೋಗೆ ಗುಡಿಸಲು ಬಿಕೋ ಎನ್ನುವಂತಿತ್ತು. ಮಡಲು ತಟ್ಟಿಯ ಬಾಗಿಲು ತಟ್ಟಿದಾಗಲೇ ಅವರು ಬಂದಿಲ್ಲವೆಂದು ಸೂಚಿಸಿತ್ತು. ಆದರೂ ಹತ್ತಿರ ಕಾಲೆಳೆದು ಸುತ್ತಲೂ ಕಣ್ಣು ಹಾಯಿಸಿದೆ. ಒಂದೆರಡು ಬಾರಿ ಕೂಗಿ ಕರೆದೆ.

ಮನುಷ್ಯ ವರ್ಗ ವಾಸಿಸಿದ ಲಕ್ಷಣವಾದರೂ ಕಾಣುತ್ತದೆಯಾ ಅಂತೆ ಚತ್ತೆಯನ್ನು ಓರೆ ಮಾಡಿ ನೋಡಿದೆ. ಇಲ್ಲ! ಯಾರೂ ಇಲ್ಲ! ಆದರೂ ಮಡಲು ತಟ್ಟಿಯ ಬಾಗಿಲಲ್ಲಿ ಒಂದು ಕಾಗದ ಕಂಡು ಬಂತು. ತೆಗೆದು ನೋಡಿದೆ. ಟೆಲಿಗ್ರಾಂ! ಒಡೆದು ಓದಿದೆ.

'ಕಳೆದ ಒಂದು ತಿಂಗಳಿನಿಂದೀಚೆಗೆ ನಮ್ಮ ದರ್ಗಾದ ಬಳಿ ಕಾಡಿ-ಬೇಡಿ ಜೀವಿಸುತ್ತಿದ್ದ ಸೂಫಿ ಬ್ಯಾರಿ ಎಂಬ ವ್ಯಕ್ತಿ ಕಳೆದ ವಾರ ದರ್ಗಾದ ಎಡಬದಿಯ ಕೊಳದಲ್ಲಿ ವಲು ಮಾಡಲು ಹೋದವರು ಆಕಸ್ಮಿಕವಾಗಿ ಕಾಲುಜಾರಿ ಬಿದ್ದು ಪಡೆದವನ ಅನುಗ್ರಹದಂತೆ

ಸ್ವರ್ಗಸ್ಥರಾಗಿದ್ದಾರೆ. ಇನ್ನು ಮೂರು ದಿನದೊಳಗೆ ಬಂದು ಮಯ್ಯಿತನ್ನು ಕೊಂಡೊಯ್ಯುವರೇ ಕೋರಲಾಗಿದೆ. ಇಲ್ಲವೇ ಇಲ್ಲೇ ದಫನ್‌ಗೈಯಲಾಗುವುದು' ಎಂದಿತ್ತು.

ಪತ್ರ ಬಂದು ಆಗಲೇ ಹತ್ತು ದಿನಗಳಾಗಿವೆ ಎಂದು ಅಂಚೆ ಮೊಹರಿನಿಂದ ತಿಳಿದುಕೊಂಡೆ. ನನಗೆ ದುಃಖ ಉಮ್ಮಳಿಸಿತು. ಸೂಫಿ ಬ್ಯಾರಿಯ ಪ್ರಥಮ ಝುಕಾತ್ ಯಾತ್ರೆಯೇ ಅಂತಿಮ ಯಾತ್ರೆಯಾಗಿ ಮಾರ್ಪಟ್ಟಿತ್ತು. ನಾನು ಬರೆದಿಟ್ಟಿದ್ದ ಅವರ ವಿಳಾಸದ ಮೂಲಕ ಅವರ ಮನೆಗೆ ಬಂದ ಮೊದಲನೆ ಪತ್ರ ಅದು. ಮನೆಗೆ ಬಂದ ಸುದ್ದಿ!! ಪಡೆದವನ ವಿಧಿಯ ಮುಂದೆ ನಾನು ಕುಬ್ಜನಾದೆ. ಫೋಟೋ ನೋಡಿದೆ. ಕೋಲು ಮುಖದ ಬೆಳ್ಳಿ ಗಡ್ಡವುಳ್ಳ ಆ ಸೂಫಿ ಬ್ಯಾರಿ ನಗುತ್ತಿದ್ದರು, ನನ್ನನ್ನೇ ನೋಡಿ!!

❖ ❖ ❖

ಕನ್ನಡ ಜನ ಅಂತರಂಗ ದೈನಿಕ **5-10-1997** .

# ಆಯಿಶಾಳ ನೋವಿನ ಸೆಲೆಗಳು

ಗೆಳೆಯ ಅಕ್ಬರ್‌ನ ಮನೆಯಂಗಳದಲ್ಲಿ ಅಬೂಸಾಲಿಹ್ ಆಟವಾಡುವುದರಲ್ಲಿ ತಲ್ಲೀನನಾಗಿದ್ದ. ಬೆಳಗ್ಗಿನ ಚಾ ಹೀರಿ ಆಡಲೊರಟರೆ ಲುಹರ್‌ಬಾಂಗ್ ಆಗುವವರೆಗೂ ಅಲ್ಲಿಂದ ಕದಲುವವನಲ್ಲ. ಮೋನೇ ಬಾ... ಬೇಗ ಎಂದು ರಾಬಿಯಾದ ಐದಾರು ಬಾರಿ ಕೂಗಿ ಕರೆದರೂ, ಅಬೂಸಾಲಿಹ್‌ಗೆ ಉಮ್ಮನ ಕೂಗು ಕೇಳಿಸಲಿಲ್ಲ. ಮಗನನ್ನು ಕೂಗಿ ಕರೆದು ಸುಸ್ತಾದ ರಾಬಿಯಾದ ಎಲ್ಲಿ ಹಾಳಾದ ಇವ? ಬಾ... ಆಡಿಸ್ತೇನೆ. ಬರುವ ವರ್ಷ ಪದವು ಶಾಲೆಗೆ ಸೇರಿಸಿ ನಿನ್ನ ಅಹಂಕಾರವನ್ನೆಲ್ಲಾ ಇಳಿಸ್ತೇನೆ ಎಂದು ಗೊಣಗುತ್ತಾ ಮನೆಯೊಳ ಹೊಕ್ಕಳು... ಸೀದಿ ಮುಕ್ರಿಯವರಿಂದ ಲುಹರ್‌ಬಾಂಗ್ ಮೊಳಗಿದಾಗ ಅಬೂಸಾಲಿಹ್ ಚಡಪಡಿಸಿ ರಾಜಣ್ಣನ ಬ್ರಾಂಚಿಗೆ ಬೀಡಿ ಕೊಂಡೊಯ್ಯಲಿದೆ. ಇನ್ನಿಲ್ಲಿ ನಿಂತ್ರೆ ಉಮ್ಮ ಬೈಯುತ್ತಾರೆ... ಎಂದು ಅಕ್ಬರ್‌ನಲ್ಲಿ ಹೇಳುತ್ತಾ ಮನೆ ಕಡೆ ಓಡೋಡುತ್ತಾ ಬಂದ. ಸೋಗೆ ಮಾಡಿನ ಮನೆಯಂಗಳದಲ್ಲಿ ಕೋಳಿಮರಿಗಳು ಚಿಲಿಪಿಲಿ ಮಾಡುತ್ತಾ ನೆಲವನ್ನು ಕುಕ್ಕುತ್ತಾ, ಪಿಳಿಪಿಳಿ ಕಣ್ಣುಗಳನ್ನು ಬಿಡುತ್ತಾ, ನಡೆದಾಡುತ್ತಿದ್ದವು. ಮಧ್ಯಾಹ್ನದ ಉರಿಬಿಸಿಲಿನಿಂದಾಗಿ ಸೋಗೆಗಳು ಕರಿದು (ಚಿಟಿ ಚಿಟಿ ಶಬ್ದದೊಂದಿಗೆ ಪುಡಿಪುಡಿಯಾಗಿ) ಕೆಳಗುದುರುತ್ತಿದ್ದವು... ಅಲ್ಲೇ ಅಂಗಳದಲ್ಲಿ ರಾಬಿಯಾದ ಬೀಡಿ ಚೀಲಗಳನ್ನು ಕೈಯಲ್ಲಿಡಿದು ನಿಂತು ಮಗನನ್ನೇ ಎದುರು ನೋಡುತ್ತಿದ್ದಳು... ಅಬೂಸಾಲಿಹ್ ಅಂಗಳ ತುಳಿದು ಬೀಡಿ ಚೀಲವನ್ನು ಕೈಯಲ್ಲಿ ಸಿಕ್ಕಿಸಿ, ಹರಿದ ನೀಲಿ ಚೆಡ್ಡಿಯನ್ನು ಸೊಂಟಕ್ಕೆ ಸುತ್ತಿದ್ದ ಕಪ್ಪು ಅರುನೂಲಿಗೆ ತುರುಕಿಸಿ, ರಾಜಣ್ಣನ ಬ್ರಾಂಚು ಕಡೆಗೆ ನಾಗಲೋಟಕ್ಕಿಳಿದಾಗ, ಮೋನೇ... ಆ ಚೀಟಿಯಲ್ಲಿದ್ದ ಸಾಮಾನು ತಾ ಎನ್ನಲು ರಾಬಿಯಾದ ಮರೆಯಲಿಲ್ಲ.

ಎಲ್ಲೋ ಹೋಗಿದ್ದ ರಾಬಿಯಾದಳ ಗಂಡ ಪೊಡಿಯ ಬ್ಯಾರಿ ಮಟ ಮಟ ಮಧ್ಯಾಹ್ನ ಮನೆಗೆ ಬಂದು ಸೇರಿದ. ಊಟಕ್ಕೆ ಅಕ್ಕಿ ಹಾಕ್ಲಿಲ್ಲ... ಎಂದು ಖಚಿತ ಪಡಿಸಿದ ಅವ ಗುಡಿಸಲೊಳಗಿನ ಬಿದಿರುಕಂಬಕ್ಕೆ ಒರಗಿ ಕೂತು ಯಾ.. ರಬ್ಬೇ ಎಂದು ಆಯಾಸ ನೀಗಿಸತೊಡಗಿದ. ಹಣೆಯ ಮೇಲಿಂದ ಬೆವರು ಧಾರಾಕಾರವಾಗಿ ಇಳಿಯುತ್ತಿತ್ತು. ಗಂಡ ತೀರಾ ಬಳಲಿ ಬೆಂಡಾದುದನ್ನು ಕಂಡು ರಾಬಿಯಾದ ಮನದಲ್ಲಿಯೇ ನೋವುಣ್ಣ ತೊಡಗಿದಳು...

"ಕರಿಬಂಡೆಗೆ ಹೋದದ್ದು ಏನಾಯಿತು?" ಆಗ್ಬಹುದು... ಹುಡುಗ ಬಂದರಿನಲ್ಲಿ ಗೋಣಿಚೀಲ ಹೊಲಿಯುತ್ತಾನೆ. ತಂದೆ-ತಾಯಿಗಳೆಲ್ಲಾ ಇದ್ದಾರೆ... ಸ್ವಲ್ಪ ಕಾಸಿ, ಬಂಗಾರ ಕೂಡಾ ಜಾಸ್ತಿ ಕೇಳ್ತಾರೆ.. ನೋಡುವಾ.. ನಮಗೆ ಸರಿಗಟ್ಟಾದರೆ ಅವಳನ್ನು ಚಂದದಲ್ಲಿ ಹೊರಕಳಿಸುವಾ..

ಈ ಮಾತನ್ನೆಲ್ಲಾ ಕದ್ದು ಮರೆಯಲ್ಲಿ ನಿಂತು ಆಲಿಸಿದ್ದರೂ ... ಮುಂದೆ ಆಯಿಶಾ

ಪಡೆಶಾಲೆಯಲ್ಲಿ ಕೂತು, ತನಗೇನು ಗೊತ್ತಿಲ್ಲವೆಂಬಂತೆ ಗುಣಗುಟ್ಟುತ್ತಾ ಬೀಡಿಕಟ್ಟುವುದರಲ್ಲಿ ತಲ್ಲೀನಳಾಗಿದ್ದಳು.

ಅಬೂಸಾಲಿಹ್ ಚೀಲದಲ್ಲಿ ಕೆಲವು ಸಾಮಾನುಗಳನ್ನು ಹಿಡಿದು ತಂದು ಉಮ್ಮನ ಕೈಯಲ್ಲಿತ್ತ. ಮೋಳೇ.. ಅಕ್ಕಿ ತೊಳೆದು ನೀರಿಗೆ ಹಾಕು.. ಎಂದು ಉಮ್ಮ ಹೇಳಿದಾಗ ಆಯಿಶಾ ಬೀಡಿ ಸೂಪನ್ನು ಕೆಳಗಿಟ್ಟು ಒಳ ಹೋದಳು. ಉಮ್ಮ... ಇಂದು ಕೋಳಿ ಸಾರು ಮಾಡ್ತೀರಾ..? ಊರಲ್ಲೆಲ್ಲಾ ಕೋಳಿಗೆ ಸೀಕು ಬಂದಿದೆಯಂತೆ. ಮತ್ತೆ ನಾನು ಆ ಹೇಂಟೆಯನ್ನು ಮಸೀದಿಯಲ್ಲಿ ಕೊಯಿಸಿ ತರ್ಲಾ..? ಎಂದು ಅಬೂಸಾಲಿಹ್ ಪ್ರಶ್ನಿಸಿ ಲಾಗ ಹಾಕುತ್ತಾ, ಬಿಳಿ ಗೀಟಿನ ಮುಂಡು, ಟೊಪ್ಪಿಯನ್ನಿಟ್ಟು ನಮಾಜು ಮಾಡಲೆಂದು ಮಸೀದಿ ಕಡೆ ಸಾಗಿದ... ಮೋಳೇ ಒಲೆಯ ಬಳಿಯಲ್ಲೇ ಇರು.. ಸೋಗೆ ಮಾಡು ಎನ್ನುತ್ತಾ ರಾಬಿಯಾದ ಮಗಳಿಗೆ ಜಾಗ್ರತೆಯಾಡಿದಳು. ಮುಂದೆ ಅಲ್ಲೇ ಗಂಡನ ಎದುರಿಗೆ ಮುಖ ಹಾಕಿ ರಾಬಿಯಾದ ಬೀಡಿ ಕಟ್ಟಲು ಕೂತಳು. ಮದ್ದೆಗೆ ಕಾಸಿನ ಏರ್ಪಾಡು ಎಂತದು ಮಾಡುವುದು? ಬೀಡಿಯ ಪಾಸ್ ಬುಕ್ಕಿಗೆ ಅರ್ಜಿ ಇಟ್ಟರೆ ಹೇಗೆ? ನೀನೇನಾದರು ಕೂಡಿಟ್ಟ ಕಾಸು ಇದೆಯಾ? ಎಂದು ಪೊಡಿಯ ಬ್ಯಾರಿ ಪ್ರಶ್ನಿಸುತ್ತಾ ಸಾಗಿದಂತೆಯೇ ನಾನೆಂತದ್ದು ಕೂಡಿಡುವುದು, ಮಣ್ಣಾ...? ಬೀಡಿಯ ಪಾಸ್ ಬುಕ್ಕಿಗೆ ಅರ್ಜಿ ಹಾಕುವ... ನಾಳೆ ಬ್ರಾಂಚು ಕಡೆ ಹೋದರೆ, ಆ ರಾಜಣ್ಣನಲ್ಲಿ ಮಾತ್ನಾಡಿ ಬನ್ನಿ.. ಮತ್ತೆ ಸ್ವಲ್ಪ ನಿಮ್ಮ ತಮ್ಮನಲ್ಲೂ ಕೇಳಿ ನೋಡಿ... ಎನ್ನುತ್ತಾ ರಾಬಿಯಾದ ಗಂಡನಿಗೆ ಸಮಾಧಾನ ನುಡಿದಳು. ಅಷ್ಟೊತ್ತಿಗೆ ಅಬೂಸಾಲಿಹ್ ನಮಾಜು ಮಾಡಿ ಬಂದು ಉಮ್ಮಾ ಊಟ.. ಎಂದು ತನ್ನ ಹಸಿವನ್ನು ತೋರಿಸಿದಾಗ, ಮೋನೇ.. ಒಂದತ್ತು ನಿಮಿಷ ನಿಲ್ಲು... ಮತ್ತೆ ಊಟ ಬಡಿಸ್ತೇನೆ ಎನ್ನುತ್ತಾ ಮಗನನ್ನು ಸಮಾಧಾನ ಪಡಿಸಲು ತನ್ನ ತೊಡೆಯಲ್ಲಿ ಮಲಗಿಸಿ ಬದ್ರ್‌ಹುತಾತ್ಮರ ಕಥೆಗಳನ್ನು ಹೆಣೆಯ ತೊಡಗಿದಳು..

ಅಂತೂ ಎರಡೂವರೆ ಹೊಡೆದಾಗ ಎಲ್ಲರೂ ತಿಂದುಂಡು ತೇಗಿದರು. ತಾಯಿ ಮಗಳಿಬ್ಬರು ತಮ್ಮ ಜೀವನಕ್ಕೆ ಆಧಾರವಾದ ಬೀಡಿಕಟ್ಟುವ ಕೆಲಸವನ್ನು ಪುನಃ ಮುಂದುವರಿಸಿದರು. ಪೊಡಿಯ ಬ್ಯಾರಿ ಅಲ್ಲೇ ಕಣ್ಣು ಕೂರ ತೊಡಗಿದ. ಅಬೂಸಾಲಿಹ್ ಅಕ್ಬರ್‌ನ ಜೊತೆ ಸೇರಲು ಓಡಿ ಹೋದ.

ಪಕ್ಕದ ಮನೆಯ ಪಾರ್ವತಿ ರಾಬಿಯಾದಳ ಬಳಿ ಬಂದು ಮಾತ್ನಾಡಿ ಹೋಗುವುದು ವಾಡಿಕೆಯಾಗಿತ್ತು. ಪ್ರತಿದಿನ ಸಂಜೆ ಪಾರ್ವತಿಯು ತನ್ನ ಟಾಮಿಯೊಂದಿಗೆ ರಾಬಿಯಾದಳ ಮನೆಯೊಳಗೆ ಪ್ರವೇಶಿಸುತ್ತಿದ್ದಳು. ಪಾರ್ವತಿ ಏನಾದರೊಂದು ಸುದ್ದಿಯನ್ನು ರಾಬಿಯಾಳ ಬಳಿ ಕೂತು ಹೇಳುತ್ತಿದ್ದಾಗಲೆಲ್ಲಾ 'ಟಾಮಿ'ಯು ಅಲ್ಲೇ ನಾಲಗೆ ಹೊರ ಹಾಕಿ ಅಂಗಳದಲ್ಲಿ ಕೂರುತ್ತಿತ್ತು. ಅಪರೂಪಕ್ಕೊಮ್ಮೆ ಟಾಮಿಯು ರಾಬಿಯಾದಳ ಮನೆಯೊಳಗೆ ಪ್ರವೇಶಿಸಲು ಹವಣಿಸಿದಾಗ ತುಕ್.. ನಾಯಿ... ಅನ್ನುತ್ತಾ ಅಬೂಸಾಲಿಹ್ ಬೆತ್ತ ಹಿಡಿದು ಜೋರು ಮಾಡು

ತ್ತಿದ್ದ. ಹೊಟ್ಟೆ ತುಂಬಾ ಹಾಕಿದರೆ, ಅದಕ್ಕೂ ಗೊತ್ತಿದೆ. ಅಬೂಸಾಲಿಹ್‌ಯಂತಹವರನ್ನು ಮುಟ್ಟಬಾರದು ಎಂದು ಅದಲ್ಲದೆ ರಾಬಿಯಾದ ಕೂಡ ಪಾರ್ವತಿಯ ಮನೆಗೆ ಹೋಗಿ ಕಾಲಕಳೆಯುತ್ತಿದ್ದುದೂ ಉಂಟು.. ರಂಜಾನ್, ಬಕ್ರೀದ್ ಈದ್ ಮಿಲಾದ್, ಮೊಹರ್‍ರಂನ ಸಮಯದಲ್ಲೆಲ್ಲಾ ರಾಬಿಯಾದಳು ಕೊಟ್ಟ ತಿಂಡಿ ತಿನಿಸುಗಳನ್ನು ಪಾರ್ವತಿಯು ತನ್ನ ಮನೆಗೆ ಕೊಂಡ್ಹೋಗಿ ಪುಟ್ಟ ಮಕ್ಕಳಿಗೆಲ್ಲಾ ಹಂಚುತ್ತಿದ್ದಳು.. ಅದೇ ರೀತಿ ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ಗೋಪೂಜೆ, ದೀಪಾವಳಿಯ ದಿನದಂದು ಪಾರ್ವತಿಯು ಕೊಟ್ಟ ತಿಂಡಿಗಳನ್ನು ರಾಬಿಯಾದ ಕೂಡಾ ತನ್ನ ಮಕ್ಕಳಿಗೆ ಗಂಡನಿಗೆಲ್ಲಾ ಕೊಟ್ಟು ತೃಪ್ತಿಪಟ್ಟುಕೊಳ್ಳುತ್ತಿದ್ದರು.

ಪಾರ್ವತಿ ವೀಳ್ಯದೆಲೆ ಬಾಯಿಗೆ ತುರುಕುತ್ತಾ ಅಂಗಳದಲ್ಲಿ ನೆಲವನ್ನು ಕುಕ್ಕುವ ಕೋಳಿಗಳನ್ನು ಕಂಡು ನೋಡು ರಾಬೀ...ಕೋಳಿಗೆಲ್ಲಾ ಸೀಕು ಬಂದಿದೆಯಂತೆ... ಇನ್ನು ಆ ಕೋಳಿಗಳನ್ನು ಕೊಯ್ದು ಸಾರು ಮಾಡುವುದೊಳ್ಳೆಯದು. ಮತ್ತೆ ನಾಳೆ ಅದು ಸತ್ತರೆ ಹೊಟ್ಟೆ ಉರಿ ನಿಲ್ಲಲಿಕ್ಕಿಲ್ಲ ಎಂದಾಗ ಹೌದಾ... ಎನ್ನುತ್ತಾ ರಾಬಿಯಾದ, ಮಗ ಆಗ ಹೇಳಿದುದನ್ನು ಜ್ಞಾಪಿಸಿ ಇನ್ನು ಕೊಯ್ದು ಸಾರು ಮಾಡುವುದೊಳ್ಳೆಯದು ಎನ್ನುತ್ತಾ ಅಂಗಳದಲ್ಲಿದ್ದ ಕೋಳಿಯೊಂದನ್ನು ಕಳ್ಳ ಹೆಜ್ಜೆಯನ್ನಿಟ್ಟುಕೊಂಡು ಹಗ್ಗದಿಂದ ಬಿಗಿಯಾಗಿ ಕಾಲಿಗೆ ಕಟ್ಟಿಹಾಕಿ ಪಡಸಾಲೆಯಲ್ಲಿಡುವಷ್ಟರಲ್ಲಿ, ಅಬೂಸಾಲಿಹ್ ಓಡೋಡಿ ಬಂದು ಉಮ್ಮಾ... ಆ ಅಕ್ಬರ್‌ನ ಮೂರು ಕೋಳಿ ಕೂಡಾ ಸತ್ತಿದೆಯಂತೆ... ನಮ್ಮದೆಲ್ಲಿದೆ? ಕೊಡಿ...ಕೊಯಿಸಿ ತರ್ತೇನೆ ಅಂದಾಗ ರಾಬಿಯಾದ ಲಗುಬಗನೆ ಚೀಲವೊಂದರಲ್ಲಿ ಹಾಕಿ ಮಗನ ಕೈಗಿತ್ತಳು. ಅಬೂಸಾಲಿಹ್ ಬಲು ಉತ್ಸಾಹದಿಂದ ಪಳ್ಳಿಯ ಮುಕ್ರಿಕರ ಬಳಿ ಓಡಿ ಹೋದ. ಮುಂದೆ ರಾಬಿಯಾದ ಅದರ ಚಿಕಿತ್ಸೆ ಮಾಡಿ ಗಂಡನಿಗೆ ಸ್ವಲ್ಪ ಸುಕ್ಕವನ್ನೂ, ಮಿಕ್ಕವು ಎಲ್ಲವನ್ನೂ ಸಾರು ಮಾಡಿಟ್ಟಳು. ರಾತ್ರಿಯಾದಂತೆಯೇ ಪಾರ್ವತಿಗೂ ಒಂದಿಷ್ಟು ಮಗನಲ್ಲಿ ಕಳಿಸಿಕೊಟ್ಟು ರಾಬಿಯಾದ ಮೊದಲು ತನ್ನ ಗಂಡ ಹಾಗೂ ಮಗನಿಗೆ ಬಡಿಸಿಟ್ಟಳು...

ಪೊಡಿಯ ಬ್ಯಾರಿ ಪದವು ಶಾಲೆಯಿಂದ ತುಸು ದೂರದಲ್ಲಿರುವ ಕಲ್ಲಿನ ಕೋರೆಯಲ್ಲಿ ಕಲ್ಲು ಕಡಿಯುವ ಕೆಲಸಕ್ಕೆ ಕೈ ಹಾಕಿ ಹತ್ತು ವರ್ಷಗಳು ಸಂದಿವೆ. ಅವರು ಎಂದೂ ಆಗಿದ್ದಾಗ್ಗೆ ಬರುವ ಸಣ್ಣ ಪುಟ್ಟ ಸೀಕುಗಳಿಗೆ ಹೆದರಿ ಕೆಲಸಕ್ಕೆ ಗೈರು ಹಾಜರಿಯಾದವರಲ್ಲ. ಬೆಳಿಗ್ಗೆ ಟೀ ಹೀರಿ ಹೊರಟರೆ, ಮಧ್ಯಾಹ್ನಕ್ಕಾಗಿ ತಿಳಿ ಗಂಜಿಯನ್ನು ಬುತ್ತಿಯಲ್ಲಿಡಿದು ಹೋಗುವವರೇ.. ಹತ್ತು ಗಂಟೆಗೆ ಮತ್ತು ಸಂಜೆ ಬಾಂಗ್ ಮೊಳಗಿದಾಗ ಒಂದು ಲೈಟ್ ಚಾ ಮತ್ತು ತಿಂಡಿ ತಿನ್ನಲು ಹತ್ತಿರದಲ್ಲಿರುವ ಅದ್ದು ಬ್ಯಾರಿಯ ಲಕ್ಕಿಸ್ಟಾರ್ ಹೋಟೇಲಿಗೆ ಕಾಲಿಡ್ತಾರೆ. ಪೊಡಿಯ ಬ್ಯಾರಿ ದುಡಿದೂ ದುಡಿದೂ ತನ್ನ ದೇಹವನ್ನು ಊದುಬತ್ತಿಯಾಕಾರಕ್ಕೆ ತಿರುಗಿಸಿದ್ದಾರೆ. ಜೊತೆಗೆ ದಿನಕ್ಕೆರಡು ಕಟ್ಟು ಬೀಡಿ, ನಷ್ಯ, ವೀಳ್ಯದೆಲೆ... ಹೀಗೆ ಎಲ್ಲಾ ಹವ್ಯಾಸಗಳೂ ಇವೆ. ಕಳೆದ ವಾರದಿಂದೀಚೆಗೆ ಪೊಡಿಯ ಬ್ಯಾರಿ ತನ್ನ ದೇಹದಲ್ಲಿ ರಕ್ತವಿಲ್ಲದೆ ನಿತ್ರಾಣಗೊಂಡಿದ್ದರೂ ಬಹಳ ಕಷ್ಟಪಟ್ಟು ಮಧ್ಯಾಹ್ನದವರೆಗೆ ಕೆಲಸ ಮಾಡಿ ಮನೆ ಸೇರುತ್ತಿದ್ದರು... ಮೊದಲು

ಆಗಿದ್ದಾಗ್ಗೆ ಶೀತಜ್ವರ ಬಂದಾಗ ಸ್ವತಃ ರಾಬಿಯಾದ ತನ್ನ ಗಂಡನ ಕೈ ಹಿಡಿದುಕೊಂಡು ಹತ್ತಿರದ ಪಂಡಿತರಿಂದ ಆಯುರ್ವೇದಿಕ್ ಮದ್ದು ತಂದಿದ್ದಳು. ಮುಂದೆ ಸೀಕು ಜೋರಾದಂತೆಯೇ ಹೆದರಿದ ರಾಬಿಯಾದ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಗಂಡನನ್ನು ಎಡ್ಮಿಟ್ ಮಾಡಿದಳು.. ಆದರೆ ಅಲ್ಲಿಯ ಕೊಳಕು ವಾತಾವರಣ, ಸರಿಯಾದ ಉಪಚಾರ ಮತ್ತು ಮದ್ದಿಲ್ಲದೆ ಪೊಡಿಯ ಬ್ಯಾರಿಯ ನರಳುವಿಕೆ ದಿನೇ ದಿನೇ ಜಾಸ್ತಿಯಾಗಿತ್ತು. ಅದಲ್ಲದೆ ಹೆಚ್ಚಿನ ಆದಾಯವನ್ನು ಹೊಂದಿಲ್ಲದ ರಾಬಿಯಾದಳಿಗೆ ಸರ್ಕಾರಿ ಆಸ್ಪತ್ರೆಯಲ್ಲದೆ, ಇತರ ಖಾಸಗಿ ಆಸ್ಪತ್ರೆಯಲ್ಲಿ ಗಂಡನನ್ನು ದಾಖಲು ಮಾಡಲು ಹೆದರಿದ್ದರೂ, ಮುಂದೆ ಯಾರ್‍ಯಾರಿಂದಲೋ ಕಾಡಿ - ಬೇಡಿ ಕಾಸು ಕೂಡಿಸಿ ತುಸು ಧೈರ್ಯ ತಂದು ಸರ್ಕಾರಿ ಆಸ್ಪತ್ರೆಯಿಂದ ಗಂಡನನ್ನು ಡಿಸ್ಚಾರ್ಜ್ ಮಾಡಿ, ಖಾಸಗಿ ಆಸ್ಪತ್ರೆಗೆ ದಾಖಲಿಸಿದ ನಾಲ್ಕೇ ದಿನದಲ್ಲಿ ರಕ್ತ, ಎಕ್ಸ್‌ರೇ, ಮಾತ್ರೆ, ಮದ್ದು, ಮಣ್ಣು ಮಸಿ ಎನ್ನುತ್ತಾ ಕೈಯಲ್ಲಿದ್ದ ಕಾಸು ಖಾಲಿಯಾದಾಗ ರಾಬಿಯಾದ ಸಂಪೂರ್ಣ ಕಂಗಾಲಾಗಿ ಲೆಕ್ಕಕ್ಕಿಂತ ಕೈ ಕಡ ಮಾಡಲು ಹೆದರಿ ಗಂಡನನ್ನು ವಾಪಾಸು ಮನೆಗೆ ಕರೆ ತಂದಳು.

ಪೊಡಿಯ ಬ್ಯಾರಿ ಕೆಲಸಕ್ಕೆ ಹಾಜರಾಗದೆ, ಮನೆಯಲ್ಲಿಯೇ ಬಿದ್ದು ಎರಡು ತಿಂಗಳು ಕಳೆದಿದೆ... ಈಗವರು ದಿನದಲ್ಲಿ ಒಂದು ಕೊಂಡೆಯಾದರೂ ರಕ್ತ ಕಾರದ ದಿನವಿಲ್ಲ... ಅವರು ರಕ್ತ ಕಾರುವುದನ್ನು ನೋಡಿದ ಮೇಲೆ ಬುಖಾರಗಳು ಅವರಿಗೆ ಕ್ಯಾನ್ಸರಂತೆ, ಮಲೇರಿಯಾವಂತೆ, ಎಂದು ಗುಣಗುಟ್ಟಿದ್ದೂ ಉಂಟು.. ಅವರು ಕೆಲಸವಿಲ್ಲದೆ ಮನೆಯ ಹಾಸಿಗೆಯಲ್ಲಿದ್ದು ದಿನ ಎಣಿಸತೊಡಗಿದಾಗ ಕಿತ್ತು ತಿನ್ನುವ ಬಡತನವು ಇಡೀ ಕುಟುಂಬವನ್ನು ಆವರಿಸಿತ್ತು. ಅವರು ಕೆಲಸಕ್ಕೆ ಹೋಗುತ್ತಿದ್ದಾಗ ಹೊತ್ತು ಹೊತ್ತಿಗೆ ಮನೆಯ ಮಾಡಿನಿಂದ ಹೊಗೆ ಏಳುತ್ತಿತ್ತು. ಆದರೆ ಇತ್ತೀಚೆಗೆ ಹಾಗಲ್ಲ..... ಒಂದ್ಹೊತ್ತು ತಿಂದುಂಡು ಕೈ ತೊಳೆದರೆ ಇನ್ನೊಂದ್ಹೊತ್ತು ಉಪವಾಸ ಬಿದ್ದಿರಬೇಕಿತ್ತು. ತಾಯಿ ಮಗಳಿಬ್ಬರು ದುಡಿದದ್ದೆಲ್ಲವೂ ಪೊಡಿಯ ಬ್ಯಾರಿಯ ಮದ್ದಿಗೆ ಸರಿ ತೂಗುತ್ತಿತ್ತು. ಈ ಪುಟ್ಟ ಸಂಸಾರ, ಆರ್ಥಿಕವಾಗಿ, ಮಾನಸಿಕವಾಗಿ ಬಳಲುತ್ತಿರುವಾಗ ನಕ್ಕು ಒಂದಿಷ್ಟು ಮನ ಹಗುರಗೊಳಿಸಲು ಅಬೂಸಾಲಿಹ್ ಎಂಬ ಮುಗ್ಧ ತುಂಟ ಹುಡುಗ... ಇದೇ ಸಮಯಕ್ಕೆ ಗಂಡನ ಮನೆ ಸೇರಲು ನೂರಾರು ಕನಸುಗಳನ್ನು ಹೊತ್ತು ಹರೆಯ ತುಂಬಿ ನಿಂತ ಮಗಳು ಆಯಿಶಾ... ಅವಳ ಮದ್ವೆಗೆಂದು ಕೂಡಿಟ್ಟ ಒಂದಿಷ್ಟು ಕಾಸೆಲ್ಲವೂ ಈಗ ತಂದೆಯ ಮದ್ದಿಗೆಂದು ಬರಿದಾಗುತ್ತಾ ಬಂತು. ಅದಲ್ಲದೆ ತಿಂಗಳು ಸರಿದಾಗ ಮಸೀದಿಗೆ ಪಾವತಿಸಬೇಕಾಗಿರುವ ತಿಂಗಳ ವಂತಿಗೆ, ತಿಂಗಳಿಗೊಮ್ಮೆ ಮಸೀದಿಯ ಮೌಲವಿಗಳಿಗೆ ಕೊಡಬೇಕಾಗಿರುವ ಊಟದ ಖರ್ಚು. ಹೀಗೆ ಒಂದಲ್ಲ ಒಂದು ತೊಂದರೆ ಪೊಡಿಯ ಬ್ಯಾರಿಯ ಸೀಕಿನೊಂದಿಗೆ ಮುತ್ತಿ ಕೂತಿತ್ತು.

ಅಸರ್ ಬಾಂಗ್ ಮೊಳಗುತ್ತಿದ್ದಂತೆಯೇ ಪೊಡಿಯ ಬ್ಯಾರಿ ಕಾರತೊಡಗಿದ. ಕಾರಿ ಕಾರಿ ನೋವು ತಾಳಲಾರದೆ ಎದೆಗೆ ಕೈಯಿಟ್ಟು ಯಾ... ರಬ್ಬೆ... ಎನ್ನುತ್ತಾ ಗುಳಿಬಿದ್ದ ಕಣ್ಣನ್ನು ತೆರೆದು ಆಕಾಶವನ್ನು ದಿಟ್ಟಿಸಿದ. ರಾಬಿಯಾದ ಮನದಲ್ಲೇ ನೋವುಂಡು ಗಂಡನ ಬೆನ್ನು,

ಎದೆಯನ್ನೆಲ್ಲಾ ಸವರುತ್ತಾ ಕಂಬನಿ ಸುರಿಸಿದಾಗ ಅಲ್ಲೇ ಎದುರಿಗೆ ಕುಕ್ಕುರಗಾಲಲ್ಲಿ ಕೂತು ನೋಡುತ್ತಿದ್ದ ಗಲೀಜಿನಂತೆ ಕಾಣುವ ಅಬುಸಾಲಿಹ್ ಹೆದರಿ ಪಿಳಿ ಪಿಳಿ ಕಣ್ಣು ಬಿಟ್ಟ. ಆಯಿಶಾ ತಂದೆಯ ಮುಖಕ್ಕೆ ನೀರು ಚಿಮುಕಿಸತೊಡಗಿದಳು.

ದಿನಗಳು ಉರುಳಿತು. ಎಂದಿನಂತೆ ದೈನಂದಿನ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಲಿದ್ದವು.. ಪೊಡಿಯ ಬ್ಯಾರಿ ಈಗ ಆರೋಗ್ಯದಲ್ಲಿ ಸ್ವಲ್ಪ ಸುಧಾರಿಸಿದ್ದ. ಹಾಗೇ ಕರಿ ಬಂಡೆಗೆ ಎಂಬಲ್ಲಿಗೆ ಹೋಗಿ ಮದ್ದೆಯ ವಿಷಯದ ಬಗ್ಗೆ ಅರಿತುಕೊಂಡು ಬರಲು ತೀರ್ಮಾನಿಸಿ, ಹೆಂಡ್ತಿಯಿಂದ ಐವತ್ತು ರೂಪಾಯಿ ಪಡೆದು ಕೆಮ್ಮುತ್ತಾ ಅಂಗಳ ದಾಟಿದ. ಮೋಳೇ.. ಸ್ವಲ್ಪ ಬೇಗ ಕಟ್ಟು, ಈ ವಾರವಿಡೀ ಬೀಡಿಯೇ ಆಗಿಲ್ಲ.... ಎಂದು ರಾಬಿಯಾದ ಹೇಳಿದಾಗ ಆಯಿಶಾ ತನ್ನ ಕೈಗಳಿಗೆ ಶಕ್ತಿ ನೀಡತೊಡಗಿದಳು.... ಮನೆ ಮನೆ ಬಾಗಿಲಿಗೆ ಜವುಳಿಯನ್ನು ಹೊತ್ಕೊಂಡು ಮಾರಾಟ ಮಾಡುತ್ತಿದ್ದ ಊರವನೇ ಆದ ಸೀನಪ್ಪನನ್ನು ತನ್ನ ಮನೆ ಬಾಗಿಲಿಗೆ ಕರೆದ ರಾಬಿಯಾದ ಆಯಿಶಾಳಿಗೆ ಮೂರು ಮೂರು ಜೋಡಿ ಸೀರೆ, ರವಕೆ, ರೇಶ್ಮೆಯ ಶಿರ ವಸ್ತ್ರ ....., ಮಗನಿಗೆ ಬಿಳಿ ಲುಂಗಿ, ಹಸಿರು ಬಟ್ಟೆ, ತನಗೆ ಹಾಗೂ ತನ್ನ ಗಂಡನಿಗೂ ಒಂದೊಂದು ಜೋಡಿ ಬಟ್ಟೆಬರೆಗಳನ್ನು ಖರೀದಿಸಿದಳು. ಸೀನಪ್ಪನಿಗೆ ವಾರಕ್ಕೊಮ್ಮೆ ಕಂತಿನ ಮೂಲಕ ಇಂತಿಷ್ಟು ರೂಪಾಯಿ ಪಾವತಿಸಬೇಕಿತ್ತು... ಸಂಜೆ ಯಾಗುತ್ತಲೇ ಪೊಡಿಯ ಬ್ಯಾರಿ ಮನೆ ಸೇರಿ ಬೈರಾಸಿನಿಂದ ಮುಖ ಒರೆಸುತ್ತಾ ದಣಿವಾರಿಸಿದರು. ಹಾಗೆ ಹೆಂಡ್ತಿಯ ಬಳಿ ಮಾತ್ನಾಡುತ್ತಾ 'ನಾಳೆ ಹೆಣ್ಣು ನೋಡಲು ಬರ್ತ್ತಾರೆ... ಸ್ವಲ್ಪ ಕಾಸಿ ಜಾಸ್ತಿ ಕೇಳ್ತಾರೆ. ಏನು ಮಾಡುವುದು? ಕೊಡದಿದ್ದರೆ ಆಗ್ತದಾ......?' ಎನ್ನುತ್ತಾ ಅವರು ನಿಟ್ಟುಸಿರು ಬಿಡುವಷ್ಟರಲ್ಲಿ, ಉಮ್ಮ ಖರೀದಿಸಿದ ಬಟ್ಟೆಬರೆಗಳನ್ನೆಲ್ಲಾ ಅಬೂಸಾಲಿಹ್ ತನ್ನ ಬಾಪನಲ್ಲಿ ತೋರಿಸಿ ತೃಪ್ತಿ ಪಟ್ಟುಕೊಂಡ.

ಆಯಿಶಾ ಹಳ್ಳಿಯ ಮುಗ್ಧ ಹುಡುಗಿ..... ಶಾಲೆಯ ಮೆಟ್ಟಲು ಹತ್ತಲಿಲ್ಲ, ಆದರೆ ಅರೆಬಿಕ್ ಶಾಲೆಯ ಐದನೆಯ ಇಯತ್ತೆ ಪಾಸಾಗಿ ಸರ್ಟಿಫಿಕೆಟ್ ಪಡೆದಿರುವಳು. ನೋಡಲು ಆಯಿಶಾಳ ತೋಳೆಲ್ಲಾ ಬಿಳಿ ಬಿಳಿ. ಆದರೆ ಎದುರಿನ ಒಂದೆರಡು ಹಲ್ಲುಗಳು ಒಂದಿಷ್ಟು ಎದುರು ಬಂದಿದ್ದರಿಂದ ಸೌಂದರ್ಯಕ್ಕೂ ಅಡ್ಡಿಯಾಗಿವೆ.

ಆದಲ್ಲದೆ ಆಯಿಶಾ ಊರಿಡೀ ಸರ್ಕೀಟು ಹೊಡೆದವಳಲ್ಲ. ತನ್ನ ಮನೆಯ ನಾಲ್ಕು ಗೋಡೆಯೊಳಗಿದ್ದು ಇದ್ದದರಲ್ಲೇ ತೃಪ್ತಿ ಹೊಂದಿರುವಳು. ಆಯಿಶಾ ಎಂದೂ ಅನ್ಯಪುರುಷರ ಎದುರು ನಿಂತು ಮಾತ್ನಾಡಿದವಳೇ ಅಲ್ಲ. ತನ್ನ ಹದಿನಾರನೆ ವಯಸ್ಸಿನವರೆಗೆ ಹೆಚ್ಚು ಮಾತ್ನಾಡಿದುದೆಂದರೆ ಪಕ್ಕದ್ಮನೆಯ ಅಜೀದ್‌ನೊಂದಿಗೆ ಮಾತ್ರ...

ಅಂದು ಮಧ್ಯಾಹ್ನ ಆಯಿಶಾಳನ್ನು ನೋಡಲೆಂದು ನಾಲ್ಕು ಬೂರ್ಖಾ ಹೆಂಗಸರು, ಇಬ್ಬರು ಗಂಡಾಳುಗಳು ಬಂದು ವಧು ಪರೀಕ್ಷೆ ನಡೆಸಿ ಹಣಕಾಸಿನ ಬಗ್ಗೆ ಚರ್ಚಿಸಿ ತೃಪ್ತಿ ಹೊಂದಿದ ನಂತರ ತಿಂದುಂಡು ಮುಗುಳ್ನಗುತ್ತಾ ತಮ್ಮ ದಾರಿ ಹಿಡಿದರು.

ಎರಡೂ ಕಡೆಯಲ್ಲಿ ಮದ್ವೆಯ ಸಿದ್ಧತೆ ಭರದಿಂದ ಸಾಗುತ್ತಿದೆ. ಪೊಡಿಯ ಬ್ಯಾರಿ ತನ್ನ ಕಲ್ಲಿನ ಧಣಿಯಿಂದ ಸ್ವಲ್ಪ ಸಾಲ ಕೇಳಿ ಆಯಿಶಾಳ ಮೈಗೆ ನಾಲ್ಕು ಪವನಿನ ಬಂಗಾರು ಹಾಕಿದರು.... ಹಾಗೂ - ಹೀಗೂ ಕೂಡಿಸಿ ಒಂದೇಳು ಸಾವಿರ ವರದಕ್ಷಿಣೆ ಅಂತ ಕೊಟ್ಟ. ಬೀಡಿಯ ಪಾಸ್‌ಬುಕ್ಕಿಗೆ ಅರ್ಜಿ ಹಾಕಿದ್ದರಿಂದ ಒಂದಾರು ಸಾವಿರ ಸಿಕ್ಕಿತ್ತಲ್ಲದೆ, ಜೊತೆಗೆ ಪೊಡಿಯ ಬ್ಯಾರಿ ರಾಜಣ್ಣನಿಂದಲೂ ಸ್ವಲ್ಪ ಸಾಲ ಕೇಳಿ ಪಡೆದರು. ತನ್ನ ಖಾಸಾ ತಮ್ಮನಿಂದ ಸ್ವಲ್ಪ ಖಾಸು ಸಿಗಬಹುದೆಂದು ನಿರೀಕ್ಷಿಸಿದ್ದರೂ ಅದು ಕನಸಾಗಿಯೇ ಉಳಿಯಿತು. ಇವೆಲ್ಲವುಗಳ ನಡುವೆ ವಿಧವೆ ಪಾರ್ವತಿಯು ಹತ್ತುಸಾವಿರವನ್ನು ದೀರ್ಘಾವಧಿ ಸಾಲವಾಗಿ ಪೊಡಿಯ ಬ್ಯಾರಿಯ ವೈಯಕ್ತಿಕ ಆಧಾರದ ಮೇಲೆ ರಾಬಿಯಾದಳ ಕೈಗಿತ್ತಳು....

ಅಂತೂ ಆಯಿಶಾಳ ಪುಟ್ಟ ಬಿಳಿ ಕೈಗಳಿಗೆ ಮದರಂಗಿ ಹಚ್ಚಿ, ದುಲ್‌ಹಜ್ ತಿಂಗಳ ಒಂದು ಗುರುವಾರ ರಾತ್ರಿ ಊರವರ ಪ್ರತ್ಯಕ್ಷ ಹಾಗೂ ಪರೋಕ್ಷ ಸಹಾಯ ಸಹಕಾರದಿಂದ 'ಮಸೀದಿಯ ಆವರಣದಲ್ಲಿ 'ನಿಖಾಹ್' ನಡೆಯಿತು. ಆ 'ತಾಲ'ದ ರಾತ್ರಿ ಆಯಿಶಾ ತನ್ನ ಇನಿಯನ ಜತೆ ಕಳೆದಳು.....'

ದಿನಗಳು ಉರುಳಿದವು. ಆಯಿಶಾ ತನ್ನ ಗಂಡನ ಮನೆ ಸೇರಿದ ಮೊದಲ ದಿನಗಳಲ್ಲಿ ಅಲ್ಲಿಯ ವಾತವರಣ, ಸದಾ ಮನೆಯೊಳಗೆ ನೋಡುವ ಹೊಸ ಮುಖಗಳು, ನೆರೆಕರೆಯ ಹತ್ತಾರು, ಅಲಿಖಾತು ಹೆಂಗ್ಸರ ನೂರಾರು ಪ್ರಶ್ನೆಗಳು.... ಎಲ್ಲವೂ ಅವಳಿಗೆ ಇರಿಸು ಮುರಿಸಾಗಿತ್ತು. ರೋಗವಿಡಿದು ಮೂಲೆಗುಂಪಾದ ಹಳಬ ಮಾವ, ಕತ್ತೆಯಂತೆ ಹಗಲಿರುಳೂ ತನ್ನನ್ನು ದುಡಿಸುತ್ತಿರುವ ಜಿದ್ದಿಯಂತಹ ಅತ್ತೆ, ದಿನಾ ಬೆಳಗ್ಗೆ ಎದ್ದು ಬಂದರಿಗೆ ಕೆಲಸಕ್ಕೆ ಹೋಗುವ ಗಂಡ ಇವೆಲ್ಲವೂ ಅವಳಿಗೆ ವಿಚಿತ್ರವಾಗಿ ಕಂಡು ಬಂತು.! ಮಾವನ ಉಪಚಾರ, ಗಂಡನ ಸೇವೆ, ಜೊತೆಗೆ ಅತ್ತೆಯ ತೀಕ್ಷ್ಣ ಚುಚ್ಚುಮಾತು... ಅಯ್ಯೋ... ದಿನಗಳುರುಳುತ್ತಿದ್ದಂತೆಯೇ ಅವಳು ರೋಸಿ ಹೋದಳು. ಗಂಡನ ಮನೆಯಲ್ಲಿ ಕಾಣಬೇಕಾದ ಸುಖಗಳನ್ನು ಹೊತ್ತ ಅಂದಿನ ಆ ಕನಸುಗಳು ಇಂದು ನೀರು ಪಾಲಾದವು... ಓಹ್... ಹುಡುಗಿಯೊಬ್ಬಳ ನೋವಿನ ಸೆಲೆಗಳೇ...? ಈ ಮಧ್ಯೆ ಹೊತ್ತು-ಹೊತ್ತಿಗೆ ಬಾಂಗ್ ಮೊಳಗಿದಾಗ ನಮಾಜು ಮಾಡುತ್ತಾ, ತಿಂಡಿ ತಯಾರಿಸುತ್ತಾಳೆ. ಜೊತೆಗೆ ಕಡ್ಡಾಯವಾಗಿ ದಿನಾ ಐನೂರು ಬೀಡಿಯಾದರೂ ಕಟ್ಟಿ ತನ್ನ ಕೈಯಲ್ಲಿ ಕೊಡಬೇಕೆಂಬ ಅತ್ತೆಯ ಎಚ್ಚರಿಕೆಯ ಮಾತು.... ಈಗ ಅವಳಿಗೆ ಬಿಡುವಿಲ್ಲವಾದ್ದರಿಂದ ಪವಿತ್ರ ಕುರಾನ್ ಓದಲೂ ಪುರುಸೊತ್ತು ಸಿಗುತ್ತಿಲ್ಲ. ನಮಾಜು, ನೋಂಬಿನ ಬಗ್ಗೆ ತೀರಾ ಆಲಸ್ಯ ಪಡುತ್ತಿದ್ದ ಅತ್ತೆಯಿಂದಾಗಿ ಆಯಿಶಾ ಕಂಗಾಲಾಗಿ ನನ್ನ ಬಾಪಾ ನನಗೆಂತಹ ಸಂಬಂಧ ಕೂಡಿಸಿದರು ಎಂದು ಮನದಲ್ಲೇ ಪ್ರಶ್ನಿಸಿ ನೋವುಂಡಿದ್ದಳು. ಆದರೆ ಗಂಡ ಬಂಗಾರಿನಂತಹ ಮನುಷ್ಯ.... ಎಂಬ ಭಾವನೆ. ದಿನಾ ರಾತ್ರಿ ಒಂಬತ್ತು ಹೊಡೆದಾಗ ಆಯಿಶಾಳ ಗಂಡ ಜಬ್ಬಾರ್ ತನ್ನ ಮನೆ ಸೇರುತ್ತಿದ್ದ... ಅವ ಬಂದ ಕೂಡಲೇ ಬಿಸಿ ನೀರಿನಲ್ಲಿ ಸ್ನಾನ, ಊಟ, ಹೆಂಡ್ತಿಯೊಡನೆ

ಮಾತುಕತೆ ನಡೆಸಿ ಸಮಯವನ್ನು ಲೆಕ್ಕಿಸುತ್ತಿರಲಿಲ್ಲ. ಇಷ್ಟರವರೆಗೂ ಒಂದ್ಹೊತ್ತು ನಮಾಜು ಮಾಡದವ, ಈಗ ಹೆಂಡ್ತಿಯ ಒತ್ತಾಯಕ್ಕೆ ಮಣಿದು ತನ್ನ ಪ್ರೀತಿಯನ್ನು ಅವಳಿಗೆ ಧಾರೆಯೆರಲೆಂದು ನಮಾಜು ಮಾಡತೊಡಗಿದ್ದ.

ಮೂರು ತಿಂಗಳು ಸತ್ತಿತ್ತು... ಜಬ್ಬಾರ್ ಒಂದು ಸೋಮವಾರ ತನ್ನ ಹೆಂಡ್ತಿಯನ್ನು ಮಂಗಳೂರಿನ ಜವುಳಿ ಅಂಗಡಿಗೆ ಕರೆದೊಯ್ದು, ಅವಳು ಆರಿಸಿದ ಸೀರೆ, ರವಕೆಯನ್ನೂ, ಹೋಟೆಲಿಗೆ ಕರೆದೊಯ್ದು ಅವಳ ಆಸೆಯಂತೆ ಬಿರಿಯಾನಿಯನ್ನು ತೆಗೆದುಕೊಟ್ಟನು. ಹಾಗೇ ವಾಪಾಸು ಮನೆಯತ್ತ ಬಸ್ಸಲ್ಲಿ ಕೂತು ಪ್ರಯಾಣಿಸುತ್ತಿದ್ದಾಗ ಒಂದು ಕಹಿ ಅನುಭವವೂ ಅವಳಿಗಾಯಿತು,. ಬಸ್ಸಲ್ಲಿ ಕೂತ ಕೆಲವೇ ಕ್ಷಣಗಳಲ್ಲಿ ವಾಂತಿ ಮಾಡಿದಾಗ ಜಬ್ಬಾರ್ ನಾಚಿದ್ದರೂ ತೋರ್ಪಡಿಸದೆ ತನ್ನ ಕಿಸೆಯಿಂದ ಒಂದು ಪಾವಲಿ ತೆಗೆದುಕೊಟ್ಟು ಅವಳ ನಾಲಗೆಯಡಿಯಲ್ಲಿ ಇಡುವಂತೆ ಸೂಚಿಸಿದ..... ಆಯಿಶಾಳಿಗೆ ಬಸ್ಸಲ್ಲಿ ಕೂತು ಅನುಭವವಿಲ್ಲದೆ ಇರುವುದೇ ಇದಕ್ಕೆ ಮೂಲ ಕಾರಣ.

ಕಾಲವನ್ನು ಕಟ್ಟಿಹಾಕಲು ಯಾರಿಂದಲೂ ಅಸಾಧ್ಯ. ಅದು ನಿಂತ ನೀರಿನಂತಲ್ಲ. ಸದಾ ಹರಿಯುತ್ತಿರುವ ಮಹಾನದಿಯಂತೆ... ಜಗದೊಡೆಯನು ಹಗಲಿರುಳಿಗೆ ಮುಕ್ತ ಸ್ವಾತಂತ್ರ್ಯವನ್ನು ನೀಡಿರುವನು.

ಸಂಜೆಯಾಗಿತ್ತು... ಆಯಿಶಾ ಅಂಗಳದಲ್ಲಿ ಕೂತು ಬೀಡಿ ಸುರುಟುತ್ತಿದ್ದಳು. ಕೈಯು ಯಾಂತ್ರಿಕಗೊಳ್ಳುತ್ತಿದ್ದಂತೆಯೇ ಬಾಯಿ ಕೂಡಾ ಯಾವುದೋ ಒಂದು ಹಾಡನ್ನು ಹಾಡುತ್ತಿತ್ತು. ಒಮ್ಮೊಮ್ಮೆ ತಂದೆ ತಾಯಿಗಳ, ಚೋಟಿ ತಮ್ಮ ಅಬೂಸಾಲಿಹ್‌ನ, ತಂದೆ ರಕ್ತ ಕಾರಿದಾಗ ಉಮ್ಮ ಹತ್ತಿರ ಕೂತು ಉಪಚರಿಸುವುದೂ... ಹೀಗೆ ತನ್ನ ಮನೆಯಲ್ಲಿನ ಒಂದೊಂದೇ ದೃಶ್ಯಗಳು ಕಣ್ಣಾಲಿಯಲ್ಲಿ ನಡೆದೋಡುತ್ತಿತ್ತು...

'ನೋಡು... ಆಯಿಶಾ... ನಾನು ಸಂಜೆ ಬೇಗ ಬರ್ತೇನೆ... ಹಾಗೇ ನಿನ್ನ ತಾಯಿ ಮನೆಗೆ ಹೋಗಿ ಬರುವ' ಎಂದು ಹೇಳಿ ಜಬ್ಬಾರ್ ಅಂಗಳ ದಾಟಿದ್ದರಿಂದ, ಆಯಿಶಾ ಗಂಡನನ್ನು ಎದುರು ನೋಡುತ್ತಾ ಕೂತಿದ್ದಳು. ಈಗ ಕ್ಷಣಕ್ಷಣಕ್ಕೂ ಅವಳ ಮನ ತನ್ನ ತವರು ಮನೆಯತ್ತ ಓಡುತ್ತಿತ್ತು. ಮದುವೆಯಾದ ನಂತರ ಕೇವಲ ಎರಡು ಬಾರಿ ಮಾತ್ರ ಅವಳು ತನ್ನ ತವರು ಮನೆಗೆ ಹೋಗಿ ಬಂದಿದ್ದಳು.

ಗಂಡ ದಿನಾಲು ಬರುವ ದಾರಿಯತ್ತ ಆಯಿಶಾ ತನ್ನ ಕಣ್ಣು ತೆರೆದಿದ್ದಾಗ ದೂರದಿಂದ ನಾಲ್ಕೈದು ಮಂದಿ ಒಬ್ಬನನ್ನು ಹೊತ್ಕೊಂಡು ಬಂದಂತೆ ಕಂಡಿತು. ಕಣ್ಣು ಹತ್ತಿರ ಬಲು ಹತ್ತಿರವಾದಂತೆಯೇ, ಸ್ವತ ತನ್ನ ಗಂಡನನ್ನು ಹೊತ್ತು ತಂದುದನ್ನು ಗಮನಿಸಿದ ಆಯಿಶಾ ಎಚ್ಚೆತ್ತು ಯಾ.... ರಬ್ಬೇ.... ಏನಾಯಿತು? ಎಂದು ಪ್ರಶ್ನಿಸಿ ಚೀರಿದಳು. 'ಏನು ಇಲ್ಲ ಮೋಳೇ.... ಇವ ಸ್ವಲ್ಪ ಬಿದ್ದಿದ್ದಾನಷ್ಟೆ, ಹಾಗೇ ಮೂರ್ಚೆ ಹೋಗಿತ್ತು... ಈಗ ಎಚ್ಚೆತ್ತುಕೊಂಡಾನು...' ಎಂದು ನಡುವಯಸ್ಸಿನವರೊಬ್ಬರು ಆಯಿಶಾಳಿಗೆ ಸಮಾಧಾನ ನುಡಿದರು.

ತನ್ನ ಗಂಡನ ಮುಖವನ್ನು ನೋಡಿದಾಗ ಅವಳಿಗೆ ಕಪ್ಪಿಟ್ಟಂತೆ ಕಂಡುಬಂತು. ಜಬ್ಬಾರ್ ತನ್ನ ದಾಡಿಯನ್ನು ಬೋಳಿಸದೆ ನಾಲ್ಕು ದಿನವಾಗಿದ್ದರಿಂದ ಮುಖವು ತನ್ನ ತೇಜಸ್ಸಿಯನ್ನು ಕಳಕೊಂಡಿತ್ತು. ಈಗ ಅವನನ್ನು ಸೇರಿದಾಳುಗಳೆಲ್ಲಾ ಒಳಗಿನ ಹಾಸಿಗೆಯ ಮೇಲೆ ಮಲಗಿಸಿದ್ದರು.ಆಯಿಶಾಳ ಹಳಬ ಮಾವ ಏನಾಯಿತು ನಿನ್ನ ಗಂಡನಿಗೆ? ಎಂದು ಪ್ರಶ್ನಿಸಿ ಮಣಮಣ ಮಾಡುತ್ತಿದ್ದರು. ಮಗನ ಅವಸ್ಥೆಯನ್ನು ಕಂಡು ಬೀಪಾತುಮ್ಮ ಇದೆಲ್ಲಾ ಈ ಮುಂಡೆಯಿಂದ ಎನ್ನುವಂತೆ ಆಯಿಶಾಳನ್ನು ನುಂಗುವಂತೆ ನೋಡಿದಳು. ಆಯಿಶಾ ಅತ್ತೆಯ ಕಡೆ ಗಮನ ಹರಿಸದೆ, ಗಂಡನ ತಲೆ ಪಕ್ಕದಲ್ಲಿ ಕೂತು ಬೀಸಣಿಕೆಯಿಂದ ಗಾಳಿ ಹಾಕತೊಡಗಿದಳು. ಮುಂದೆ ಸುಮಾರು ಒಂದು ಗಂಟೆಯ ನಂತರ ಎಚ್ಚರವಾಗಿ ಎದ್ದು ಕೂತನು. ತನ್ನ ಎದುರಲ್ಲೇ ಹೆಂಡ್ತಿ ಕೂತದ್ದನ್ನು ಕಂಡ ಜಬ್ಬಾರ್ 'ಆಯಿಶಾ ನನಗೇನಾಯಿತು...?' ಎಂದು ಪ್ರಶ್ನಿಸಿ ಪಿಳಿಪಿಳಿ ಕಣ್ಣು ಬಿಟ್ಟಾಗ ಅವಳು ಎಲ್ಲವನ್ನೂ ತಿಳಿಸಿದಳು. ಆಯಿಶಾಳಿಗೆ ತನ್ನ ತವರು ಮನೆಗೆ ಹೋಗುವ ಆಸೆ ಕಮರಿತು... ಹಾಗೆ ಮೌನ ಕ್ರಾಂತಿಯೊಂದಿಗೆ ಜಬ್ಬಾರ್ ನಿದ್ದೆಗೆ ಕಣ್ಣೋಡಿಸಿದ... ನಡುರಾತ್ರಿಯೆಲ್ಲಾ ಆಯಿಶಾ ಎಚ್ಚರಗೊಂಡಾಗಲೆಲ್ಲಾ ದೀಪ ಉರಿಸು ತನ್ನ ಗಂಡನ ಮೈಮುಟ್ಟಿ ನೋಡಿ, ಬೆವರನ್ನು ಬೈರಾಸಿನಿಂದ ಒರೆಸುತ್ತಾ ಗಾಳಿ ಹಾಕುತ್ತಿದ್ದಳು.

ಮರುದಿವಸ ಜಬ್ಬಾರ್ ಕೆಲಸಕ್ಕೆ ಹೋಗಲು ಸಿದ್ಧನಾದರೂ ಆಯಿಶಾಳ ಬಲವಾದ ಒತ್ತಾಯಕ್ಕೆ ಮಣಿದು ಮನೆಯಲ್ಲಿರಲು ತೀರ್ಮಾನಿಸಿದ... ಈ ಒಂದು ದಿನ ಗಂಡ ತನ್ನ ಕಣ್ಣೆದುರಲ್ಲೇ ಇರುತ್ತಾರಲ್ಲ ಎಂದು ಬಗೆದು ಆಯಿಶಾಳು ಸಂತೋಷಗೊಂಡು ಬಗೆ ಬಗೆಯ ತಿಂಡಿ ತಿನಿಸುಗಳನ್ನು ತಯಾರಿಸಿದಳು. ಈಗ ತನ್ನ ಹಳಬ ಮಾವರನ್ನು ಉಪಚರಿಸುವುದರ ಜೊತೆಗೆ ಗಂಡನನ್ನೂ ಉಪಚಾರ ಮಾಡಬೇಕಾಗಿ ಬಂದಿದ್ದರೂ ಅವಳು ದುಃಖಿಸಲಿಲ್ಲ. ವ್ಯಸನಗೊಳ್ಳಲಿಲ್ಲ. ತನ್ನ ಪ್ರೀತಿಯ ಇನಿಯನನ್ನು ಮಮತೆಯಿಂದಲೇ ಕಂಡಳು. ಕ್ಷಣಗಳು ಉದುರುತ್ತಿದ್ದಂತೆಯೆ ಆಯಿಶಾಳು ತನ್ನ ಮನೆಗೆಲಸವನ್ನೆಲ್ಲಾ ಮಾಡಿ ಮುಗಿಸಿ ಅಂಗಳದಲ್ಲಿ ಮಣೆಹಾಕಿ ಕೂತು ಬೀಡಿ ಸುರುಟ ತೊಡಗಿದಳು. ಅವಳು ತನ್ನ ಗಂಡನನ್ನು ತಾನು ಕೂತು ಬೀಡಿ ಕಟ್ಟುವಲ್ಲಿಗೆ ಆಸೆಯಿಂದ ಕರೆದಳು. ಜಬ್ಬಾರ್ ಹೆಂಡ್ತಿಯ ಬಳಿ ಕೂತು ಸುಮಾರು ಅರ್ಧ ತಾಸಿನವರೆಗೂ ಮಾತ್ನಾಡಿ ಕಾಲ ಕಳೆದ. ಆಯಿಶಾ ತನ್ನ ಗಂಡನ ಚಲನವಲನ, ಅಲೆ ಅಲೆಯಾಗಿ ತೇಲಿ ಬರುವಂತಹ ಮುಖವನ್ನು ಮಮತೆಯಿಂದ, ಆಸೆಗಣ್ಣಿನಿಂದ ನೋಡುತ್ತಿದ್ದಂತೆಯೇ.... ಕೂತಲ್ಲಿಂದ ದೊಪ್ಪನೆ ಬಿದ್ದು ಕೈಕಾಲು ಬಡಿಯತೊಡಗಿದನಲ್ಲದೆ ನೆಲದಲ್ಲಿ ಬಿದ್ದು ಒರಳಾಡಿದ... ಕ್ಷಣ ಮಾತ್ರದಲ್ಲಿ ಕೈಕಾಲು ಬಡಿಯುವುದು ನಿಂತಿತಲ್ಲದೆ ಆತ ಸಂಪೂರ್ಣವಾಗಿ ಸ್ಮೃತಿ ಕಳಕೊಂಡ. ಆಯಿಶಾ ತನ್ನ ಗಂಡನ ಅವಸ್ಥೆಯನ್ನು ಹೆದರಿ ಅಸಾಹಾಯಕತೆಯಿಂದ ಕಿರುಚಿದಳು. ಅವಳ ಭೀಕರ ಕಿರುಚಾಟಕ್ಕೆ ಅತ್ತೆ ಓಡೋಡಿ ಹೊರಬದಳು. ಹಳಬ ಮಾವ 'ಏನು?' ಎನ್ನುತ್ತಾ ಹಾಸಿಗೆಯಿಂದ ಏಳಲು ಪ್ರಯತ್ನಿಸಿದರು.... ಅಕ್ಕ ಪಕ್ಕದ ಬುರ್ಖಾ-ಗಂಡಾಳುಗಳೆಲ್ಲಾ ಅಂಗಳದಲ್ಲಿ ಜಮಾಯಿಸಿದ್ದರು. ಈ ಮಧ್ಯೆ

ಜೊಲ್ಲು ರಸ ಇಳಿದಂತೆ ಜಬ್ಬಾರ್ ಬಾಯಿಯಿಂದ ಬಿಳಿನೊರೆ ಇಳಿಯುತ್ತಿತ್ತು. ಆಯಿಶಾ ಹೆದರಿ 'ಏನಾಯಿತು?' ಎಂದು ತನ್ನಲ್ಲೇ ಪ್ರಶ್ನಿಸಿ ತನ್ನ ಸೀರೆಯ ಸೆರಗಿನಿಂದ ಒರೆಸಿ 'ಕೀ'ಯ ಗೊಂಚಲನ್ನು ಅವನ ಕೈಯಲ್ಲಿ ಕೊಟ್ಟಳು.

'ಇವನಿಗೆ ಈ ಬೀಳುವ ಸೀಕು ಯಾವಾಗಿನಿಂದಲೂ ಉಂಟಾಯಿತು?'

'ಹೌದಲ್ಲಾ... ? ಮದುವೆಯ ಮೊದಲು ಇದು ಇವನಿಗಿತ್ತಾ...?'

'ಅದಲ್ಲ... ಇವ ಮೊನ್ನೆ ನಮ್ಮ ಅಂಗಡಿಯಲ್ಲಿ ಕೂತಾಗ ಪ್ರಜ್ಞೆ ತಪ್ಪಿ ಬಿದ್ದು ಹೋದದ್ದರಲ್ಲಾಯಿತು... ಇನ್ನು ಎಲ್ಲೋ ರಸ್ತೆಯಲ್ಲಿ ಬಿದ್ದಿದ್ದರೆ...'

'ಇವನಿಗೆ ಮದ್ವೆಯಾದ್ಮೇಲೆ ಸೋಲೇ... ಹುಷಾರಿಲ್ಲದೆ, ಕೆಲಸ ಮಾಡಲಾಗದೆ ಮನೆಯಲ್ಲಿ ಎಷ್ಟು ದಿನ ಕೂತದ್ದಾಯಿತು? ಒಟ್ಟಾರೆ ಬಾಳಿ ಬಂದ ಹೆಣ್ಣಿಗೆ ನಸೀಬು ಇಲ್ಲ...' ಎಂದು ಸೇರಿದ್ದ ಗಂಡಾಳುಗಳೆಲ್ಲಾ ತನ್ನನ್ನು ಹಳಿಯುತ್ತಿರುವುದನ್ನು ಕಂಡು ಆಯಿಶಾ ಮರುಕಪಟ್ಟಳು.... ಸ್ವಲ್ಪ ಸಮಯದ ನಂತರ ಜಬ್ಬಾರ್ ಎಚ್ಚೆತ್ತು ಎದ್ದು ಕೂತ.... ಮನೆಯಂಗಳದಲ್ಲಿ ತನ್ನ ಸುತ್ತಲೂ ಜನ ನೆರೆದಿರುವುದನ್ನು ಕಂಡು ಅವರು ದಿಗ್ಭ್ರಮೆಗೊಂಡು ನನಗೇನಾಯಿತು...? ನೀವು ಯಾಕಿಲ್ಲಿ? ಎಂದು ಯಾಚಿಸಿದ. ಆಯಿಶಾ ಎಲ್ಲವನ್ನು ಕಂಬನಿ ಸುರಿಸುತ್ತಾ ಸ್ಫುಟವಾಗಿ ವಿವರಿಸಿದಳು.

ದಿನಗಳುರುಳಿದವು. ಜಬ್ಬಾರ್ ಕೆಲಸಕ್ಕೆ ಹೋಗಲಾರದೆ ವಿಶ್ರಾಂತಿಗಾಗಿ ಮನೆಯಲ್ಲೇ ಉಳಿಯುವಂತಾಯಿತು.... ಈ ಮಧ್ಯೆ ಪಕ್ಕದೂರಿನ ಮಂತ್ರಗಾರರೊಬ್ಬರಿಂದ ಜಬ್ಬಾರ್‌ನಿಗೆ ಮದ್ದು ಮೂಡಿಸಲಾಯಿತು. ದಿನಾಲು ಮುಸ್ಸಂಜೆಯಾಗುತ್ತಿದ್ದಂತೆಯೇ ಪಕ್ಕದ್ಮನೆಯ ಹುಡುಗನೊಬ್ಬ ಮಂತ್ರಗಾರನಿಂದ ಪಿಂಗಾಣಿ ಬಟ್ಟಲಲ್ಲಿ 'ಇಸ್ಮ'ನ್ನು ಬರೆಸಿ ತರುತ್ತಿದ್ದ. ಅದನ್ನು ಜಬ್ಬಾರ್ ದಿನಾ ರಾತ್ರಿ ಮಲಗುವ ಹೊತ್ತಿಗೆ ಮಂತ್ರಿಸಿ ಊದಿದ ಕಷಾಯದೊಂದಿಗೆ ಕಲೆಸಿ ಕುಡಿಯುತ್ತಿದ್ದ... ಅದಲ್ಲದೆ ಮದ್ದು ಮಾಡಿಸಲು ಜಬ್ಬಾರ್‌ನಲ್ಲಿ ಚಿಕ್ಕಾಸೂ ಇಲ್ಲದ್ದನ್ನು ತಿಳಿದುಕೊಂಡ ಆಯಿಶಾ ತನ್ನ ಮೈಮೇಲೆ ಕಂಗೊಳಿಸುತ್ತಿದ್ದ ಮೂರು ಪವನಿನ ಬಂಗಾರವನ್ನು ಅಡವಿಟ್ಟು ಹಣವನ್ನು ತನ್ನ ಅತ್ತೆಯ ಕೈಗಿತ್ತಿದ್ದಳು. ತನ್ನ ಇನಿಯನ ಭಯಾನಕ ರೋಗ ವಾಸಿಯಾಗಲೆಂದು ಅವಳು ತನು-ಮನ-ಧನದಿಂದ ಸಹಕರಿಸಿದಳು. ಅದಲ್ಲದೆ ಊರಿನ ಮಸೀದಿಯಲ್ಲಿ ವಾರಕ್ಕೊಮ್ಮೆ 'ಸಲಾತ್ ಮಜ್ಲಿಸ್' ಜರುಗುತ್ತಿತ್ತು. ಹಾಗೂ-ಹೀಗೂ ಪೂರ್ಣ ಚೇತರಿಸಿಕೊಳ್ಳಲಿ ಎಂದು ಬಗೆದ ಅವಳು ಅದಕ್ಕೆ ಹರಕೆಯನ್ನೂ ಸಲ್ಲಿಸುತ್ತಿದ್ದಳು.

ದಿನಗಳು ಹಾರಿಹೋಯ್ತು... ಒಂದು ದಿನ ಬೆಳಿಗ್ಗೆ ಆಯಿಶಾ ಇದ್ದುದರಲ್ಲೇ ಸುಖ ಕಂಡು ಹಾಡಿನ ತುಣುಕೊಂದನ್ನು ಹಿಡಿದು ಮೆಲುಕು ಹಾಕುತ್ತಾ ಮುಸುರೆ ತಿಕ್ಕುತ್ತಿದ್ದಾಗ, ತನ್ನ ಅತ್ತೆ ಬಂದು ಎದುರಲ್ಲಿ ನಿಂತುದನ್ನು ನೋಡಿ ಏನು? ಅನ್ನುತ್ತಾ ಯಾಚಿಸಿದಾಗ 'ಮೋಳೇ... ನಿನಗೆ ನಾನು ಯಾವುದರಲ್ಲಿ ಕಮ್ಮಿ ಮಾಡಿದ್ದೇನೆ? ನೋಡು... ನಿನ್ನನ್ನೂ ನಾನು

ನನ್ನ ಮಗಳ ಹಾಗೆ ನೋಡಿಕೊಂಡಿದ್ದೇನೆ. ನಿನಗೆ ಈ ಮನೆಯ ಪರಿಸ್ಥಿತಿ ಕಾಣ್ತಾದೆಯಲ್ಲಾ... ನೋಡು, ಅಂದು ನಿನ್ನ ಗಂಡನನ್ನು ಉಳಿಸಲು ಕೈಕಡ ಕೊಟ್ಟವರೆಲ್ಲಾ ಇಂದು ತಮ್ಮ ಹಣವನ್ನು ವಾಪಾಸು ಕೇಳಿ ಬರುತ್ತಿದ್ದಾರೆ. ಈ ಮನೆಯಲ್ಲಿ ಮಾರಿ ಕಾಸು ಸಂಪಾದಿಸುವುದಾದರೂ ಏನಿದೆ? ಅದಕ್ಕೆ, ನಿನ್ನ ಮನೆಯಿಂದ ಸ್ವಲ್ಪ ಕಾಸು ತೆಗೆದುಕೊಂಡು ಬಾ....' ಎಂದು ಭೀಪಾತುಮ್ಮ ಹೇಳಿದಾಗ ಆಯಿಶಾ ಸಂಪೂರ್ಣ ಕಂಗಾಲಾಗಿ ಏನು ಅತ್ತೆ, ನೀವು ಹೇಳುವುದು? ನನ್ನ ಮದ್ವೆಗೆಂದು ಮಾಡಿದ ಸಾಲವೇ ಇಂದು ಸಂದಿರಿಲಿಕ್ಕಿಲ್ಲ... ಅಂತಹದರಲ್ಲಿ ನಾನು ಯಾವ ಮುಖ ಹೊತ್ತು ಕಾಸು ಕೇಳಲಿ... ಎನ್ನುತ್ತಾ ಕರಗಿದಳು....

ಒಂದು ವಾರ ಕಳೆಯಿತು. ರಾಬಿಯಾದ ತನ್ನ ಅಳಿಯನ ಮನೆಗೆ ಬಂದಿದ್ದಾಗ ಭೀಪಾತುಮ್ಮ ಎಲ್ಲೋ ಒಂದು ಕಡೆ ಸರ್ಕೀಟು ಹೊರಟಿದ್ದಳು... ಆಯಿಶಾ ಉಮ್ಮ ಬಂದ ಸಂತಸದಲ್ಲಿ ಅತ್ತಿತ್ತ ನಡೆದಾಡಿ ಬಲು ಉಲ್ಲಾಸದಿಂದ ಕೆಲಸವನ್ನು ಚುರುಕುಗೊಳಿಸಿದ್ದಳು.... ಹಾಗೆ ಉಮ್ಮನಿಗೆ ಕುಡಿಯಲು ಕೊಟ್ಟು ತನ್ನ ಅತ್ತೆ ಇಲ್ಲದ್ದರಿಂದ ನಿಟ್ಟುಸಿರು ಬಿಟ್ಟು ಮಾತ್ನಾಡತೊಡಗಿದಳು. ಮನೆಯಲ್ಲಿ ಅಳಿಯ ಇದ್ದುದನ್ನು ಕಂಡ ರಾಬಿಯಾದ ಮಗಳಲ್ಲಿ ವಿಚಾರಿಸಿದಾಗ ಅವಳು ಎಲ್ಲಾ ವಿಷಯವನ್ನು ತಿಳಿಸಿ ಕಣ್ಣೊರೆಸಿದಳು. ತನ್ನ ಮಗಳ ಈ ದುಶ್ತರ ಬದುಕನ್ನು ಕಂಡ ರಾಬಿಯಾದ ಮರುಕಪಟ್ಟು 'ಮೋಳೇ... ನನ್ನಲ್ಲಿ ಒಂದು ವಿಷಯ ತಿಳಿಸಬಾರದಿತ್ತಾ'? ಎಂದು ಪ್ರಶ್ನಿಸಿದಳು. ಮುಂದೆ ಸುದೀರ್ಘ ಹೊತ್ತು ಮಾತ್ನಾಡುತ್ತಾ ತಾನೂ ಬಂದ ವಿಷಯವನ್ನೂ ತಿಳಿಸಿದಳು. ಉಮ್ಮಾ ನನ್ನಲ್ಲಿ ಒಂದೂ ನಯಾ ಪೈಸೈ ಇಲ್ಲ... ಇದ್ದದ್ದೆಲ್ಲವನ್ನು ಮಾರಿ ಬರೀ ಮೈಯಲ್ಲಿ ಬಿದ್ದುಕೊಂಡಿರುವೆ. ಅವರು ಕೆಲಸಕ್ಕೆ ಹೋಗದೆ ನಾಲ್ಕು ತಿಂಗಳು ಸರಿಯಿತು. ಮತ್ತೆ ದುಡಿದದ್ದು ಎಲ್ಲಿ ಉಳಿಯುತ್ತದೆ? ನೋಡಿ.... ಈ ಊರಲ್ಲಿ ಒಂದು ಸಲಾತ್ ಕಮಿಟಿ ಅಂತ ಇದೆ. ಇಂತಹದಕ್ಕೆಲ್ಲಾ ಅವರಿಂದ ಸ್ವಲ್ಪ ಸಹಾಯ ದೊರಕಿತು... ಆದರೆ ಊರಿನ ಮಸೀದಿಯ ಲೆಟರ್‌ಹೆಡ್ ಬೇಕು ಎಂದು ಆಯಿಶಾ ತೊದಲಿದಳು. ಜಬ್ಬಾರ್ ನಿದ್ದೆಯಿಂದ ಎಚ್ಚೆತ್ತಾಗ ರಾಬಿಯಾದ ಅವನಲ್ಲಿ ಮಾತ್ನಾಡಿ ಅಲ್ಲಿಂದ ಕಾಲ್ತೆಗೆದಳು... ತನ್ನ ಅತ್ತೆ ಹೋದ್ಮೇಲೆ ಜಬ್ಬಾರ್ ಹೆಂಡ್ತಿಯನ್ನು ಕರೆದು ನಿನ್ನ ಉಮ್ಮ ಯಾಕೆ ಬಂದದ್ದು ಎಂದು ಪ್ರಶ್ನಿಸಿದಾಗ, ತನ್ನ ತಂದೆಯ ಬಾಳು ಇನ್ನು ಹೆಚ್ಚಿನ ದಿನವಿಲ್ಲ... ಅವರು ಕಣ್ಮುಚ್ಚುವುದರೊಳಗೆ ನಾವೊಮ್ಮೆ ಜೊತೆಯಲ್ಲಿ ಹೋಗಿ ಬರುವಾ... ಎಂದು ಆಯಿಶಾ ಗಂಡನಲ್ಲಿ ಹೇಳಿದಾಗ ಇನ್ನೊಂದೆರಡು ವಾರದಲ್ಲಿ ನಿನ್ನ ಬಯಕೆ ಮಾಡುವಾ.... ಆವಾಗ ಹೋದರಾಯಿತು.... ಎನ್ನುತ್ತಾ ಮುಗುಳ್ನಕ್ಕ...

ಮುಂದಿನ ಕೆಲವೇ ದಿನದಲ್ಲಿ ರಾಬಿಯಾದ ಲೆಟರ್‌ಹೆಡ್ ಹಿಡಿದು ಕೊಂಡು ಅಳಿಯನ ಮನೆಗೆ ಬಂದಳು. ನಾವೆಲ್ಲಿದ್ದ ಹಣದಲ್ಲಿ ಈಗ ಬಯಕೆ ಮಾಡುವುದು, ತೆಗೆದುಕೊಂಡ ಕಡವಿನ್ನೂ ಸಂದಾಯ ಮಾಡಿಲ್ಲ... ಎಂದು ಅತ್ತೆ ತನ್ನ ಅಸಮಾಧಾನ ವ್ಯಕ್ತಪಡಿಸಿದ್ದರಿಂದ

ಆಯಿಶಾ ತನ್ನ ಎಲ್ಲಾ ಆಶೆಯನ್ನು ಬುಗ್ಗನೆ ಇಳಿಸಿದ್ದಳು.... ಇನ್ನು ನನಗೆ ಬಯಕೆ ಮಾಡುವುದಿಲ್ಲ. ಉಮ್ಮ ಯಾವಾಗ ಬಂದರೋ ಅವಾಗ ಗಂಡನಲ್ಲಿ ಕೇಳಿಹೋಗುವುದೆಂದು ಆಯಿಶಾ ತನ್ನ ನೋವಿನಿಂದಲೇ ತೀರ್ಮಾನಿಸಿದ್ದಳು. ಅಂತೆಯೇ ಒಂದೆರಡು ದಿವಸದ ನಂತರ ಕಮಿಟಿಯ ವತಿಯಿಂದ ಸಿಕ್ಕಿದ್ದ ಒಂದು ಸಾವಿರ ರೂಪಾಯಿಯನ್ನು ಪಡಕ್ಕೊಂಡು, ರಾಬಿಯಾದ ತನ್ನ ಮನೆ ದಾರಿ ಹಿಡಿದಳು. ಜೊತೆಗೆ ಮೊದಲ ಹೆರಿಗೆ ಮಾಡುವ ಮಗಳನ್ನೂ ಕರೆದೊಯ್ದುಳು. ಹಾಗೇ ಹೋಗುವಾಗ ಆ ಹಣದಿಂದ ತನ್ನ ಗಂಡನಿಗೆ ಸ್ವಲ್ಪ ಮದ್ದು, ಹಣ್ಣು ಹಂಪಲನ್ನು ಖರೀದಿಸಿದಳು.

ಆಯಿಶಾಳಿಗೆ ಒಂಬತ್ತು ತುಂಬಿತ್ತು. ಅವಳಿಗೆ ಈಗ ಕೆಲಸ ಮಾಡಲಾಗುತ್ತಿಲ್ಲ... ಅದಲ್ಲಗೆ ಶರೀರದಲ್ಲಿ ತುಂಬಾ ಬಳಲಿದ್ದಾಳೆ. ಜೊತೆಗೆ ತನ್ನ ಗಂಡನ ಸೀಕನ್ನು ಮನಕ್ಕೆ ಹಚ್ಚಿಕೊಂಡಿರುವಳು. ಈ ಸಮಯದಲ್ಲಿ ಹೆಚ್ಚಿನ ವಿಟಮಿನ್ ಉಳ್ಳ ಆಹಾರ ತಿನ್ನಬೇಕಾಗಿದ್ದ ಅವಳಿಗೆ ತನ್ನ ಉಮ್ಮನ ಮನೆಯಲ್ಲಿ ತಿಳಿಗಂಜಿ, ಸುಟ್ಟ ಒಣ ಮೀನಿನ ತುಂಡಲ್ಲದೆ ಹೆಚ್ಚಿನ ಆಹಾರವಿರಲಿಲ್ಲ. ರಾಬಿಯಾದ ತನ್ನ ಮನೆಗೆ ಆಹಾರ ಸಾಮಾಗ್ರಿಗಳನ್ನು ತರುವುದರ ಬದಲು ಮದ್ದಿನ ಬಾಟಲಿಗಳನ್ನು ಹೊತ್ತು ತರುತ್ತಿದ್ದಾಳೆ. ಪೊಡಿಯ ಬ್ಯಾರಿಗೂ ಮದ್ದು ಕುಡಿದೂ ಕುಡಿದು ಮಾತ್ರೆಯನ್ನು ಗಳಿಗೆಗೊಂದರಂತೆ ನುಂಗುತ್ತಿದ್ದರಿಂದ ದೊಂಡೆಯಿಡೀ ನೋವು... ಕಹಿ...

ಒಂದು ಆದಿತ್ಯವಾರ ರಾತ್ರಿ ಪೊಡಿಯ ಬ್ಯಾರಿ ರಕ್ತ ಕಾರಿ ಕಾರಿ ಬಳಲಿ ಹೋದರು. ರಾಬಿಯಾದ ಗಂಡನ ಉಪಚಾರದಲ್ಲಿ ಮುಳುಗಿ ಹೋಗಿದ್ದಳು. ಅವರಿಗೆ ಈಗ ತನ್ನ ಪರಿವೆಯೇ ಇಲ್ಲ. ಗಾಡ ಕತ್ತಲು ಹಬ್ಬಿದೆ... ಸುಮಾರು ನಡುರಾತ್ರಿಯ ಹನ್ನೆರಡು ದಾಟಿತ್ತು. ಊರವರಿಗೆಲ್ಲಾ ಗಾಢ ನಿದ್ದೆ! ಆಗಿದ್ದಾಂಗೆ ಪದವು ಶಾಲೆ ಬಳಿಯಿಂದ ನರಿಗಳ ಕೂಗಾಟ, ಜೀರುಂಡೆಗಳ ಝೇಂಕಾರ.... ನಾಯಿಯ ಬೌ...ಬೌ. ಆಯಿಶಾ ಹೆರಿಗೆಯ ನೋವು ತಾಳಲಾರದೆ ಚಡಪಡಿಸಿದಳು. ಅತ್ತ ಗಂಡನ ನರಳುವಿಕೆ, ಇತ್ತ ಮಗಳ ತಡಪಡಿಸು ವಿಕೆಯನ್ನು ಕಂಡು ಕಂಗಾಲಾದ ರಾಬಿಯಾದ ಅಸಹಾಯಕಳಾಗಿ ಕೂಗತೊಡಗಿದಳು... ಈ ಎಲ್ಲಾ ಚಿತ್ರವೆತ್ತಗಳನ್ನು ನೋಡಿ ನಿದ್ದೆಗೆಟ್ಟ ಅಬೂಸಾಲಿಹ್ ಧೈರ್ಯ ತಂದು ಚಿಮಿಣಿ ದೀಪವಿಡಿದು ಪಾರ್ವತಿಯ ಬಳಿ ಓಡಿ ಹೋಗಿ ವಿಷಯ ತಿಳಿಸಿ ಬಂದ. ಅವಳು ಮರುಕಪಟ್ಟು, ರಾಬಿಯಾದಳ ಕೂಗನ್ನು ನಿಲ್ಲಿಸಲೆತ್ನಿಸಿದಾಗ, ರಾಬಿಯಾದ ಮೂಕಳಾಗಿ ಕೈಸನ್ನೆಯ ಮೂಲಕ ಒಳಗೆ ಚಡಪಡಿಸುತ್ತಿರುವ ಮಗಳ ಬಳಿಗೆ ಹೋಗುವಂತೆ ಸೂಚಿಸಿದಳು. ಪಾರ್ವತಿ, ಆಯಿಶಾ ಮಲಗಿದ್ದ ಕಡೆ ಹೋಗಿ ಅವಳ ಭೀಕರ ರೋಧನೆಯನ್ನು ನಿಲ್ಲಿಸಲು ಪ್ರಯತ್ನಿಸಿ ಅಲ್ಲೇ ಇದ್ದ ಸೀರೆಯೊಂದನ್ನು ತೆಗೆದು ಅಡ್ಡಕಟ್ಟಿ ಮರೆಯಾಗಿಸಿದಳು... ಒಂದೆಡೆ ಗಂಡನ ಉಪಚಾರದಲ್ಲಿ ತೊಡಗಿದ್ದ ರಾಬಿಯಾದಳ ಮತ್ತು ಇನ್ನೊಂದೆಡೆ ಆಯಿಶಾಳ ಉಪಚಾರದಲ್ಲಿ ಮುಳುಗಿದ್ದ ಪಾರ್ವತಿಯ ಕಣ್ಣಲ್ಲಿ ನೀರು ಆಟವಾಡತೊಡಗಿತ್ತು.

ಪೊಡಿಯ ಬ್ಯಾರಿಯ ಆ ಪುಟ್ಟ ಸಂಸಾರ ಮಾನಸಿಕವಾಗಿ, ಆರ್ಥಿಕವಾಗಿ ಬಳಲುತ್ತಿದ್ದಾಗ ಅವರನ್ನೆಲ್ಲಾ ತನ್ನ ಚೆಂದುಟಿ ಬೀರಿ ಸಂತುಷ್ಟಪಡಿಸಲೆಂದು ಇನ್ನೊಂದು ಜೀವವು ಈ ಭೂಮಿಯ ಮೇಲಿನ ಬೆಳಕು ಕಾಣಲು ಹಾತೊರೆಯುತಿತ್ತು. ಅಬೂಸಾಲಿಹ್ ಅಲ್ಲೇ ಸೀರೆಯನ್ನು ಸರಿಸಿ ಮಾಂಸದ ಮುದ್ದೆಯ ಅಳುವನ್ನು ಕಿವಿಯಿಟ್ಟು ಆಲಿಸುತ್ತಿದ್ದಾಗ... ಆಯಿಶಾ ಕಂದಮ್ಮನಿಗೆ ಜನ್ಮನೀಡಿ ನೋವು ಸಹಿಸಲಾಗದೆ ರೋಧಿಸಿದ್ದೂ... ಪೊಡಿಯ ಬ್ಯಾರಿಯ ಪ್ರಾಣಪಕ್ಷಿ ಹಾರಿಹೋದುದನ್ನು ಅರಿತ ರಾಬಿಯಾದಳ ಅಳುವು ಜತೆ ಜತೆಯಾಗಿ, ಊರಿಗೆ ಅಲೆಅಲೆಯಾಗಿ ಬಡಿಯತೊಡಗಿತು. ಆಯಿಶಾಳ ನೋವಿನ ಸೆಲೆ ಬಿರುಕು ಬಿಡುವಷ್ಟರಲ್ಲಿ ಕಹಿ ರೋಧನೆ ಹಾಗೂ ಅಳುವಿನ ಸ್ವರ ಅಪ್ಪಳಿಸಿದ ಕಡೆಯಲ್ಲೆಲ್ಲಾ ಜನ ಎಚ್ಚೆತ್ತು ಓಡೋಡುತ್ತಾ ಬಂದು ಪೊಡಿಯ ಬ್ಯಾರಿಯ ಅಂಗಳದಲ್ಲಿ ಜಮಾಯಿಸಿದ್ದರು....

❖ ❖ ❖

ಮುಂಗಾರು ದೈನಿಕ - **23-07-1995**

# ಫಾತಿಮ

"ನ್ಯಾಯಾಧಿಪತಿಗಳು ಪ್ರಭುವಿನ ಮುಂದೆ ಪ್ರಕಾಶ ಪೀಠದಂತೆ ಇರುತ್ತಾರೆ. ಅವರಿಗೆ ಅವನು ಆ ದಿನದಲ್ಲಿ ಬಹುಮಾನ ಕೊಟ್ಟು ಗೌರವಿಸುವನು".

ಅಲ್ಲಾಹು ಕರುಣಾಮಯಿಯೂ... ಕರುಣಾನಿಧಿಯೂ ಆಗಿರುವನು. ತನ್ನ ಸೃಷ್ಟಿಗಳ ಕಣ್ಣೀರನ್ನು (ಪ್ರಶ್ಚಾತ್ತಾಪ ಪಡುವುದನ್ನು) ಸದಾ ಬಯಸುವವನೂ ಆಗಿರುವನು. ಒಂದಿಲ್ಲೊಂದು ದಿನ ಭೂಲೋಕದಲ್ಲಿನ ತನ್ನ ಸೃಷ್ಟಿಗಳನ್ನು ತತ್ವ ಪರೀಕ್ಷೆಗೆ ಒಳಪಡಿಸಿ ಅವರ ಪ್ರತಿಭೆಯನ್ನು ಬೆಳಕಿಗೆ ತರುವನು. ಅಲ್ಲಾಹುವಿನ ಇಂತಹ ತತ್ವ ಪರೀಕ್ಷೆಗೆ ಒಳಪಟ್ಟವರಲ್ಲಿ ಅರಸ್ಥಾನದ ನಿವಾಸಿ 'ಮಾಮದಾಕ' ಕೂಡಾ ಒಬ್ಬರು.

ಸತತ ಇಪ್ಪತ್ತೇಳು ವರ್ಷಗಳ ಕಾಲ ದಿನಗೂಲಿ ಕಾರ್ಮಿಕನಾಗಿ ದುಡಿದ 'ಮಾಮದಾಕ" ತನಗೆ ಎರಗಿ ಬಂದಂತಹ ಕಷ್ಟ ಕಾರ್ಪಣ್ಯಗಳ ನಡುವೆಯೂ 'ಪಡೆದವನು' ತಂದ ದೀನನ್ನು ಅತಿಯಾಗಿ ಪ್ರೀತಿಸಿ... ಗೌರವಿಸಿ ಅದರಂತೆ, ಜೀವನ ನಡೆಸಿದುದರ ಪ್ರತಿಫಲವಾಗಿ ಮುಂದೆ ಊರ ಅರೇಬಿಕ್ ಶಾಲೆಯ ಬಳಿ ನಾಲ್ಕು ಅಂತಸ್ತಿನ ಕಾಂಕ್ರೀಟು ಕಾಂಪ್ಲೆಕ್ಸ್‌ನ್ನು ಕಟ್ಟಿಸುವುದರ ಮೂಲಕ ಅದರ ಮಾಲಕನಾಗಿ...ಕರ ಪತ್ರಗಳಲ್ಲಿ ಜನಾಬ್! ಮೊಹಮ್ಮದ್ ಬ್ಯಾರಿ ಎಂದು ಮುದ್ರಿತವಾದುದು ಮತ್ತು ಹತ್ತು ಜನರಿಗೆ ಬುದ್ಧಿ ಹೇಳಿಕೊಡುವ ಹಾಗೂ ಸದಾ ಶ್ವೇತ ವರ್ಣದ ಬಟ್ಟೆ-ಬರೆಗಳಲ್ಲಿ ಕಂಗೊಳಿಸುವಂತಹ ಸೌಭಾಗ್ಯ ಪಡೆದುದು ಇತಿಹಾಸವಾಗಿದೆ.

ಮೆಹನಾಜ್ ಕಾಂಪ್ಲೆಕ್ಸ್‌ನ ಕೆಳಗಿನ ಎರಡಂತಸ್ತಿನ ಹದಿನೇಳು ಕೋಣೆಗಳು ವಾಣಿಜ್ಯ ವ್ಯವಹಾರಗಳಿಗೆ ಮೀಸಲಾಗಿದ್ದರೆ, ಮೇಲಿನ ಎರಡಂತಸ್ತಿನಲ್ಲಿ ದೂರದ ಕೆಲವು ಊರಿನಿಂದ ಬಂದ ಕುಟುಂಬಗಳು ರೂಮ್ ಬಾಡಿಗೆ ಪಡೆದು ಜೀವಿಸುತ್ತಿದ್ದವು. ಮೊಹಮ್ಮದ್ ಬ್ಯಾರಿಗೆ ಜೀವನ ಸಾಗಿಸಲು ಈ ಕಾಂಪ್ಲೆಕ್ಸ್ ಒಂದೇ ಆಧಾರವಾಗಿದೆ.

ಮೊಹಮ್ಮದ್ ಬ್ಯಾರಿಯವರಿಗೆ ಸಿದ್ದೀಕ್ ಒಬ್ಬನೇ ಸುಪುತ್ರ. ತಂದೆಯಂತೆ ಇವನೂ ಕೂಡಾ ಪಕ್ಕಾ ಸುನ್ನಿ ಮುಸಲ್ಮಾನ...ಜೊತೆಗೆ ಸಂಪ್ರದಾಯ ಪ್ರಿಯ... ? ಎಳೆಯ ಪಯಸ್ಸಿನಲ್ಲೇ ಆಧ್ಯಾತ್ಮಿಕ ಲೋಕದ ಕಡೆಗೆ ಚಿಂತನೆ ನಡೆಸತೊಡಗಿದ್ದ ಸಿದ್ದೀಖ್ ಅದೊಂದು ದಿನ ಊರ ಮುಖಾಮಿನಲ್ಲಿ ಪವಾಡ ಪುರುಷನಾಗಿ ಪ್ರತ್ಯಕ್ಷಗೊಂಡ.. ಆಸ್ತಿಕ ಜನ ಸಿದ್ದೀಖ್‌ನ ಪವಾಡಗಳಿಂದ ಭ್ರಾಂತವಾಗಿ ಹೋದರು.

ಮುಖಾಮಿನ ಬಳಿ ಪ್ರತ್ಯಕ್ಷಗೊಂಡ ಸಿದ್ದೀಖ್‌ನನ್ನು ಕಾಣಲು ಊರ ಹಾಗೂ ಪರವೂರಿನ ಹೆಚ್ಚಿನ ತಲೆಗಳು ಸಾಲು ಸಾಲಾಗಿ ಬಂದು ತಮ್ಮ ಸಮಸ್ಯೆಯನ್ನು ತಿಳಿಸತೊಡಗಿದರು. ಅಲ್ಲಿಗೆ ನೂರಾರು ನಮೂನೆಯ ರೋಗಿಗಳು... ತಮ್ಮ ವಸ್ತು ಕಳಕೊಂಡವರು ಬಂದು ಕಣ್ಣೀರು ಸುರಿಸತೊಡಗಿದರು. ಸಿದ್ದೀಖ್ ಬಂದವರಲ್ಲಿ 'ಏನು ಬಂದಿರಿ'? ಎಂದು ವಿಚಾರಿಸುತ್ತಿದ್ದ.

ಹಾಗೆ ಮಂತ್ರಿಸಿದ ನೀರು ಹಾಗೂ ನೂಲನ್ನು ಕೊಟ್ಟು " ನನಗೆ ಅಜ್ಮೀರ್ ಬಾಬಾರ 'ಪೋರ್ತ' ಸಿಕ್ಕಿದೆ.. ಅವರಿಗೆ ಗೌರವ ವ್ಯಕ್ತಪಡಿಸುತ್ತಾ ಅಲ್ಲಾಹುವಿಗೆ ಹತ್ತಿರವಾಗಿ ...!" ಎನ್ನುತ್ತಿದ್ದ. ಬಂದವರು 'ನೇರ್ಚ' ಹೊತ್ತರು.. ಸಿದ್ದೀಖ್‌ನ ಬಳಿ ಕಾಸು ಸುರಿದರು... ನಾಲ್ಕು ಮೂಲೆಗೂ ಸಿದ್ದೀಖ್‌ನ ಪವಾಡದ ಮಹಿಮೆಗಳು ಹರಡತೊಡಗಿದವು. ಮುಖಾಮಿನ ಬಳಿ ಅಗರ್‌ಬತ್ತಿಯ, ಮಲ್ಲಿಗೆ ಹೂವಿನ, ಕಪ್ಪು ನೂಲಿನ, ಖರ್ಜೂರದ ಸಣ್ಣ ಪುಟ್ಟ ಅಂಗಡಿಗಳು ತಲೆ ಎತ್ತಿದವು.

'ಅರಸ್ತಾನ'ವು ಪತ್ರಿಕೆಯ ಮುಖಪುಟಗಳಿಗೆ ಆಹಾರವಾಯಿತು. ನಾಡಿನ ಹಲವು ಪತ್ರಕರ್ತರು ಬಂದು ಸಿದ್ದೀಖ್‌ನಲ್ಲಿ ಸಂದರ್ಶನ ನಡೆಸಿದರು. "ತಮಗೆ ಬಂದ ಹಣವನ್ನು ಸಮಾಜಕ್ಕೆ ಯಾವ ರೀತಿ ಕಾಣಿಕೆ ಸಲ್ಲಿಸುವಿರಿ?" ಎಂದು ಪತ್ರಕರ್ತರು ಮತ್ತೆ ಮತ್ತೆ ಪ್ರಶ್ನಿಸ ತೊಡಗಿದರು. "ಊರಿನ ಮಸೀದಿ.. ಮದ್ರಸ ಹಾಗೂ ಮುಖಾಮನ್ನು ದುರಸ್ತಿ ಪಡಿಸಬೇಕೆಂದಿರುವೆ.. ಹಾಗೆ ಒಂದು ಯತೀಂಖಾನ್‌ನನ್ನು ಕಟ್ಟಿಸಿ ಅನಾಥ ಮಕ್ಕಳ ಸೇವೆ ಮಾಡಬೇಕೆಂದಿರುವೆ." ಎಂದು ಸಿದ್ದೀಖ್ ಜನರಿಗೂ ಅಲ್ಲಾಹುವಿಗೂ ಸೇತುವೆಯಾದ. ಜನರ ಕಣ್ಮಣಿಯಾದ.

ಹೀಗಿರುವಾಗ ಒಂದು ದಿನ ಮುಖಾಮಿನ ಬಳಿ ಗಡ್ಡ ಬಿಟ್ಟು ಮಂತ್ರಿಸುತ್ತಿದ್ದ ಸಿದ್ದೀಖ್ ಮಾಯವಾದ... ಊರಿನ ಹಲವಾರು ಮಂದಿ ಮೊಹ್ಮದ್ ಬ್ಯಾರಿಯ ಬಳಿ "ಏನು ವಿಷಯ? ಎಲ್ಲಿ ನಿಮ್ಮ ಮಗ?" ಎಂದು ಪ್ರಶ್ನಿಸಿದರು.

"ನನಗೆ ಗೊತ್ತಿಲ್ಲ... ಬಹುಶ ಅಜ್ಮೀರ್‌ಗೆ ಹೋಗಿರಬೇಕು!" ಜನ ಮರೆತರು, ಅರಸ್ಥಾನ ಪಾಳು ಬಿದ್ದಿತು. "ಹಾಗಾದರೆ ಮುಖಾಮಿನ ಬಳಿ ಸಂಗ್ರಹವಾದ ಹಣವೆಲ್ಲಿ?"

ಈ ಘಟನೆ ನಡೆದು ಹತ್ತು ವರ್ಷದ ನಂತರ ಸಿದ್ದೀಖ್ ಊರವರಿಗೆ ಮತ್ತೆ ಪ್ರತ್ಯಕ್ಷನಾದ... "ನಾನು ಹಣವನ್ನು ತಿನ್ನಲಿಲ್ಲ .... ಅದು ಅಲ್ಲಾಹು ಮೆಚ್ಚದ ಕೆಲಸ...! ನನ್ನ ನಿಯತ್ತಿನಂತೆ 'ಅಜ್ಮೀರ್'ನ ಆಡಳಿತ ಮೊಕ್ತೇಸರರ ಕೈಗಿತ್ತೆ... ಅವರದನ್ನು ಧಾರ್ಮಿಕ ಸೇವೆಗೆ ಬಳಸಿಕೊಂಡರು..." ಎನ್ನುತ್ತಾ ಸಿದ್ದೀಖ್ ಊರವರನ್ನು ನಂಬಿಸಿದ.... ಮತ್ತೆ ಊರವರ ಸ್ನೇಹ ಸಂಪಾದಿಸಿದ.

ಇತ್ತೀಚೆಗೆ ಶರೀರದಲ್ಲಿ ತುಂಬಾ ಕ್ಷೀಣಿಸಿದ್ದ ಮೊಹಮ್ಮದ್ ಬ್ಯಾರಿ ವಿಶ್ರಾಂತಿ ಜೀವನ ನಡೆಸುವ ಸಲುವಾಗಿ ತನ್ನ ಮನೆ ಹಾಗೂ ಕಾಂಪ್ಲೆಕ್ಸ್‌ನ ಸಂಪೂರ್ಣ ಜವಾಬ್ದಾರಿತ್ವವನ್ನು ಮಗನಿಗೆ ಬಿಟ್ಟು ಕೊಟ್ಟಿದ್ದರು. ಮೆಹನಾಜ್ ಕಾಂಪ್ಲೆಕ್ಸ್‌ನ ರೂಂ. ನಂ. 7 ಕಳೆದೆರಡು ವಾರದಿಂದ ಸಂಸಾರಿಗಳಿಲ್ಲದೆ ಖಾಲಿ ಬಿದ್ದಿತ್ತು. ಅಂತೆಯೇ ಸಂಪಾಜೆಯ ಇದ್ದಿನ್ ಬ್ಯಾರಿ ಎಂಬವರ ಪುಟ್ಟ ಸಂಸಾರರವು ರೂಂ. ನಂ. 7ರ ಕದ ತಟ್ಟಿತು. ಕಳೆದ ಹದಿನಾರು ವರ್ಷಗಳಿಂದ ಬಹಳ ಪರಿಶ್ರಮದಿಂದ ಹಾಗೂ ನಿಯತ್ತಿನಿಂದ ಮಂಗಳೂರಿನ ಹಂಚು ಕಾರ್ಖಾನೆಯಲ್ಲಿ ದುಡಿಯುತ್ತಿರುವ ಇದ್ದಿನ್ ಬ್ಯಾರಿಯವರಿಗೆ ಯೌವನಕ್ಕೆ ಬಂದ ಒಂದು ಮುದ್ದಾದ ಹೆಣ್ಣು

ಮಗಳಿದ್ದಳು. ದೇವ ಮಾನವ ಸಿದ್ದೀಖ್ ಈಗ ಪಕ್ಕಾ ವ್ಯಾವಹಾರಿಕ ಮನುಷ್ಯನಾಗಿ ಬದಲಾಗಿದ್ದ. ತಲೆಯಲ್ಲಿದ್ದ ಟೊಪ್ಪಿ ಮಾಯವಾಗಿದೆ. ಗಡ್ಡವನ್ನು ವಾರಕ್ಕೆರಡು ಬಾರಿಯಂತೆ ಬೋಳಿಸುತ್ತಿದ್ದಾನೆ.. ತಾನು ಈ ಹಿಂದೆ ಮುಖಾಮಿನ ಬಳಿ ಕೂತು ನೀರು ಹಾಗೂ ನೂಲನ್ನು ಮಂತ್ರಿಸಿ ಕೊಟ್ಟದ್ದನ್ನೂ ಕೂಡ ಮರೆತಿರುವನು. ಆಧುನಿಕ ವ್ಯೆಯಾರದಲ್ಲಿ ಕಂಗೊಳಿಸುತ್ತಿರುವ ಸಿದ್ದೀಖ್‌ನ ಕಣ್ಣಿಗೆ ರೂಂ. ನಂ. 7ರ ಹುಡುಗಿ ಫಾತಿಮಾಳ ಸೌಂದರ್ಯ ಕಣ್ಣು ಕುಕ್ಕುತ್ತದೆ.

ಸಿದ್ದೀಖ್ ಮತ್ತು ನಾನು ಬಾಲ್ಯದಿಂದಲೇ ಆಪ್ತ ಸ್ನೇಹಿತರಾಗಿದ್ದೆವು. ಅವನು ಹಿಂದೆ ಬಾಬಾ ಆಗಿ ಹೇಗೆ ಮೆರೆದನು? ನಾನೇಕೆ ಈ ಬಗ್ಗೆ ಅವನಲ್ಲಿ ಅಂದು ಪ್ರಶ್ನಿಸಲಿಲ್ಲ.? ಅದಿರಲಿ.. ಆ ಹಣವನ್ನಾದರೂ ಆತ ಏನು ಮಾಡಿದ? ಮತ್ತೆ... ಆ ವೇಷವನ್ನು ಯಾಕೆ ಕಳಚಿದ?" ನನಗೆ ಇದೆಲ್ಲಾ ಉತ್ತರ ಕಾಣದ ಪ್ರಶ್ನೆಗಳು. ಆದರೂ ನಮ್ಮ ಸ್ನೇಹ ಮುಂದುವರಿದಿತ್ತು.

ಅಂದು ನಾನು ಮನೆ ಹಿತ್ತಲಿನ ಗೇರು ಮರದ ರೆಂಬೆಯಲ್ಲಿ ಕೂತು ಹಾಯಾಗಿ ಸಿಗರೇಟು ಎಳೆಯುತ್ತಿದ್ದೆ. ಸಿದ್ದೀಖ್ ನನ್ನ ಬಳಿ ಬಂದು ಕೂತ... ನಾನು 'ಏನು? ಎಂದು ಕಣ್ಣಲ್ಲೇ ಪ್ರಶ್ನಿಸಿದೆ. "ಗೆಳೆಯಾ.. ಅನಾಥ ಅಥವಾ ಬಡ ಹುಡುಗಿಯನ್ನು ಕೈ ಹಿಡಿಯುವುದು ಅಲ್ಲಾಹು ಮೆಚ್ಚುವ ಕೆಲಸ ತಾನೆ....? ನೋಡು... ನಮ್ಮ ಕಾಂಪ್ಲೆಕ್ಸ್‌ನಲ್ಲಿ 'ಫಾತಿಮಾ' ಎಂಬ ಬಡ ಹುಡುಗಿ ಇದ್ದಾಳೆ... ಅವಳನ್ನು ಕೈ ಹಿಡಿಯುವಾಸೆ ನನಗೆ ...ಹೇಗೆ ಕೇಳಲಾ?" ಎಂದು ಯಾಚಿಸಿದ.

" ಸಿದ್ದೀಖ್... ಫಾತಿಮಾ ಬಡ ಹುಡುಗಿ ಹೌದು... ಅಂತವರನ್ನು ಕೈ ಹಿಡಿದರೆ ಮಸೀದಿ ಕಟ್ಟಿಸಿದ ಅಥವಾ ಹಜ್ ಯಾತ್ರೆ ಪೂರೈಸಿದಷ್ಟು ಪುಣ್ಯವಿದೆ. ಆದರೆ ನೀನು ಸಮಯ ಸಾಧಕ... ಅರ್ಥಾತ್ ವೇಷಧಾರಿ ಅಲ್ಲವೇ...? ನಾನು ವ್ಯಂಗ್ಯವಾಗಿ ನುಡಿದಾಗ ಆತ ಮಾತು ಬದಲಾಯಿಸಿದ.

ದಿನಗಳು ಉರುಳಿದವು. ಸಿದ್ದೀಖ್ ಮತ್ತೆ ನನ್ನನ್ನು ಕಾಣಲು ಬಂದ. 'ಏನು ಬಂದೆ? ಎಂದು ನಾನು ಪ್ರಶ್ನಿಸಿದೆ." ಗೆಳೆಯಾ... ನನಗೆ ಊರು ಬಿಡದೆ ಉಪಾಯವಿಲ್ಲ. ನನ್ನ ಪರಿಸ್ಥಿತಿಯೀಗ ಗಂಟಲಲ್ಲಿ ಬಿಸಿ ತುಪ್ಪವಿಟ್ಟಂತಾಗಿದೆ. ಫಾತಿಮಾಳ ಸೌಂದರ್ಯಕ್ಕೆ ಮಾರು ಹೋದೆ. ಆಗ ಬಾರದ್ದು ಆಗಿ ಹೋಗಿದೆ... ಅವಳೀಗ ಎರಡು ತಿಂಗಳಂತೆ! ಸಿದ್ದೀಖ್‌ನ ಧ್ವನಿಯಲ್ಲಿ ಭಯವಿತ್ತು. "ನಾನವಳನ್ನು 'ಗರ್ಭಪಾತ'ಕ್ಕೊಳಪಡಿಸುವೆ" ಸಿದ್ದೀಖ್ ಮತ್ತೆ ನುಡಿದ. ನನಗಂತೂ ಅವನ ಮುಖ ನೋಡಲೂ ಹೇಸಿಗೆಯಾಗಿತ್ತು... "ಹೇಳು... ಗೆಳೆಯಾ... ಹೇಳು... ಇಲ್ಲದಿದ್ದಲ್ಲಿ ನಾನು ವಿಷ ಕುಡಿಯುವೆ.. "

ನಾನು ಮೌನ ಮುರಿಯಲಿಲ್ಲ. ಸಿದ್ದೀಖ್ ಮತ್ತೆ ಕಾಣೆಯಾದ. ಈ ನಡುವೆ ಫಾತಿಮಾಳಿಗೆ

ಬಂದ ಸಂಬಂಧ ಪಕ್ಕಾ ಆಯಿತು. ಫಾತಿಮಾ ಕಂಗಾಲಾದಳು. ಹೊಟ್ಟೆಯೊಳಗಿನ ಮಗುವಿನ ತಂದೆ... !? ಛೇ...! ತಂದೆಯಲ್ಲಿ ನಿಜ ವಿಷಯ ತಿಳಿಸಲೇ.... ? ಅವರದನ್ನು ಸಹಿಸಿಕೊಂಡಾರೇ.. ? ಇಲ್ಲ... ಆದದ್ದು ಆಗಲಿ... ತಂದೆ ನಿರ್ಧರಿಸಿದ ಗಂಡಿನೊಡನೆ ಮುಂದಕ್ಕೆ ಜೀವನ ಸಾಗಿಸುವೆ.." ಫಾತಿಮಾ ತನ್ನಲ್ಲೇ ನುಡಿದು ಧೈರ್ಯ ತೆಗೆದುಕೊಂಡಳು.

ಫಾತಿಮಾ ಸಿದ್ದೀಖ್‌ನನ್ನು ಶಪಿಸುತ್ತಲೇ ಗಂಡನ ಮನೆ ಸೇರಿದಳು.. ಉಸ್ಮಾನನಿಗೆ ತನ್ನ ಹೆಂಡ್ತಿಯ ಮೇಲೆ ತುಂಬಾ ಪ್ರೀತಿ... ಮಮತೆ. ಅವನವಳನ್ನು ಒಂದು ದಿನ ಕೂಡಾ ಬಿಟ್ಟಿರಲಾರದಷ್ಟು ಅನುರಕ್ತನಾಗಿದ್ದನು. ಅವಳ ಮನೋಭಾವನೆಗೆ ತಕ್ಕಂತೆ ಸ್ಪಂದಿಸತೊಡಗಿದ. ಫಾತಿಮಾ ತನ್ನ ಗಂಡನೊಡನೆ ನಾಲ್ಕು ತಿಂಗಳವರೆಗೂ ಹಾಯಾಗಿ ದಿನ ಕಳೆದಳು. ಅವಳ ಹಸೆಮಣೆಗೇರಿ ನಾಲ್ಕು ತಿಂಗಳಾದರೂ, ಈಗ ಆರು ತಿಂಗಳ ಗರ್ಭಿಣಿ...!ಹೊಟ್ಟೆ ವಿಪರೀತ ಉಬ್ಬಿದೆ... ? ಉಸ್ಮಾನ್‌ನ ತಾಯಿ ಸೊಸೆಯ ಹೊಟ್ಟೆಯನ್ನು ಗಮನಿಸುತ್ತಲೇ... ಪಾತೂ... ಮದ್ವೆಯಾಗಿ ಎಷ್ಟು ತಿಂಗಳಾಯಿತು. ಗೊತ್ತಾ? ಮತ್ತೆ... ಈ ನಾಲ್ಕು ತಿಂಗಳಲ್ಲಿ ಇದಿಷ್ಟು ಬೆಳೆಯ ಬೇಕಾದರೆ.... ! ಎಂದು ಸಂಶಯ ವ್ಯಕ್ತಪಡಿಸುತ್ತಲೇ ಸುದ್ದಿ ಕಿವಿಯಿಂದ ಕಿವಿಗೆ ದಾಟಿತು. ಉಸ್ಮಾನ್ ಕಿಡಿ ಕಿಡಿಯಾದ. ಫಾತಿಮಾಳ ರೋಧನ ಕೇಳಲು ಯಾರೂ ಸಿದ್ದರಿರಲಿಲ್ಲ.

ಫಾತಿಮಾ ತನ್ನ ತವರೂರಿಗೆ ಸೇರಿದಾಗ ಊರಿಡೀ ಈ ವಿಷಯವು ಗಡದ್ದಾಗಿ ಹಬ್ಬಿತ್ತು. ಇದ್ದಿನ್ ಬ್ಯಾರಿಯವರು ಮಗಳ ಈ ಹಗರಣದಿಂದ ಸಂಪೂರ್ಣ ನೊಂದು ಅಸಹಾಯಕರರಾಗಿ ತಲೆಗೆ ಕೈ ಹೊತ್ತು ಕೂರುತ್ತಾ ಮಾನಸಿಕವಾಗಿ ಚಡಪಡಿಸಿದರು. ಈ ಮದ್ಯೆ ಮಸೀದಿ ಪ್ರೆಸಿಡೆಂಟರ ವಿಳಾಸಕ್ಕೆ ಉಸ್ಮಾನ್‌ನಿಂದ 'ತಲಾಖ್‌ನಾಮ' ಬಂದುದನ್ನು ಅರಿತ ಬ್ಯಾರಿ "ಹೇಳು ..ಮೋಳೇ... ಹೇಳು... ನಿನ್ನ ಬಾಳನ್ನು ಹಾಳುಗೆಡವಿದವನಾರು? ಮುಸ್ತಾಫ್.... ಮುಟ್ಟಿ ಸತ್ಯ ನುಡಿ... ಇಲ್ಲದಿದ್ದಲ್ಲಿ ನಿನ್ನ ಕತ್ತು ಹಿಸುಕಿ ಕೊಂದು ಬಿಟ್ಟೇನು..." ಎನ್ನುತ್ತಾ ಕಿರುಚಿದಾಗ" ದಮ್ಮಯ್ಯ... ಅವಳನ್ನು ಬಿಟ್ಟು ಬಿಡಿ.. ಅಲ್ಲಾಣೆ... ನಿಮ್ಮ ಕತ್ತಿನಾಣೆ. ಬಾವಿ ಹತ್ತಿರವಿದೆ ಎಂಬುದನ್ನು ಮರೆತಿರಾ?" ಎಂದು ಹೆಂಡ್ತಿ ಗೋಗೆರೆದಳು.

ಒಂದು ಮುಸ್ಸಂಜೆ... ಜಮಾತ್ ಅಧ್ಯಕ್ಷರು 'ತಲಾಖ್ ನಾಮ'ದ ಬಗ್ಗೆ ಮಾತನಾಡುವ ಸಲುವಾಗಿ ಬ್ಯಾರಿಯವರ ಮನೆಗೆ ಬಂದರು. ಅಧ್ಯಕ್ಷರಿಂದ ತನಗೆ ಒಂದಿಷ್ಟು ಉಪಕಾರ ದೊರಕೀತು ಎಂಬ ಭಾವನೆಯಿಂದ ಪುಳಕಿತಳಾದ ಫಾತಿಮ ತನ್ನ ಚರಿತ್ರೆಯನ್ನು ನಿರ್ಭಯವಾಗಿ ನುಡಿದಳು. ಫಾತಿಮಾಳ ಮಾತನ್ನೆಲ್ಲಾ ಆಲಿಸಿದ ಅಧ್ಯಕ್ಷರು ಬ್ಯಾರಿಯವರಿಗೆ ಒಂದಿಷ್ಟು ಸಮಾಧಾನದ ನುಡಿದು ಮನೆಯಿಂದ ಹೊರ ಬಂದರು.

ಮತ್ತೆ ಊರಿಗೆ ಬಂದ ಸಿದ್ದೀಖ್, ಫಾತಿಮಾ ತನ್ನ ತವರು ಸೇರಿದುದನ್ನರಿತು, ಇನ್ನು... ತನ್ನ ಕತ್ತಿಗೆ ಉರುಳು.. ಎನ್ನುತ್ತಾ ರಾತ್ರೋ ರಾತ್ರಿ ಊರು ಬಿಟ್ಟು ಓಡಿ ಹೋದವನು

ಕಾಸರಗೋಡಿನಲ್ಲಿ ಹಾಗೇ ಅಮಿನಾ ಎಂಬ ಕನ್ಯೆಯನ್ನು ಮದ್ವೆಯಾಗಿ ಅಲ್ಲೇ ಮಾವನ ಮನೆಯಲ್ಲಿ ದಿನದೂಡುತ್ತಿದ್ದ ಸುದ್ದಿ ತಿಳಿದು ಬಂತು.

ಅದೊಂದು ದಿನ ಸಿದ್ದೀಖ್ ಮತ್ತೆ ಊರಿನಲ್ಲಿ ಪ್ರತ್ಯಕ್ಷಗೊಂಡ.. ಜಮಾತ್ ಅಧ್ಯಕ್ಷರು ಸಿದ್ದೀಖ್‌ನ ಬಳಿ ಸಾಗಿ ಹಗರಣದ ಬಗ್ಗೆ ಮಾತೆತ್ತಿದಾಗ ಅವ ನಯವಾಗಿ ತಿರಸ್ಕರಿಸತೊಡಗಿದ. "ಸಿದ್ದೀಖ್... ನೀನೆಂದೂ ಸುಳ್ಳಾಡಬೇಡ... ನಿನ್ನನ್ನು ಜೈಲಿಗೆ ಹಾಕುವಷ್ಟು ತಾಕತ್ತು ನನಗಿದೆ... ಹಿಂದೆ ಬೋಗಸ್ ಬಾಬಾ ಆಗಿ ಮೆರೆದದ್ದನ್ನು ಮರೆತು ಬಿಟ್ಟೆಯಾ? ನಾನು ಮನಸ್ಸು ಮಾಡಿದ್ದಲ್ಲಿ .. ನೀನಿಂದು ಜೈಲಲ್ಲಿ ಕೊಳೆಯುತ್ತಿದ್ದೆ. ಆದರೆ ನಿನ್ನ ಹೆಸರಿನ ಜೊತೆಗೆ ನಮ್ಮೂರಿಗೂ ಕಳಂಕವಾದೀತು ಎಂಬ ಒಂದೇ ಒಂದು ಭಾವನೆಯಿಂದ ನಾನಂದು ಹಿಂಜರಿದಿದ್ದೆ... ನೋಡು... ಸತ್ಯನುಡಿ. ಇಲ್ಲದಿದ್ದಲ್ಲಿ ನಾಳೆ ರಕ್ತ ಪರೀಕ್ಷೆಯಿಂದಲಾದರೂ ತಿಳಿದೇ ತೀರುತ್ತೆ ಎಂದು ಅಧ್ಯಕ್ಷರು ಖಾರವಾಗಿ ನುಡಿದಾಗ ಹೆದರಿ ಬಳಲಿ ಹೋದ ಸಿದ್ದೀಖ್ ನಿರ್ವಾಹವಿಲ್ಲದೆ ಒಪ್ಪಿಕೊಂಡ.

"ಹಾಗಾದರೆ ನೀನೀಗ ಏನು ಮಾಡುತ್ತಿ.. ಅಮಿನಾಳ ಜೊತೆ ಇವಳನ್ನೂ ಕೂಡ..."

ದೇಹದಲ್ಲಿ ಶಕ್ತಿ ಕುಂದಿದ್ದರೂ ತನ್ನ ಮಾನ-ಮರ್ಯಾದೆಯಾಗಿ ಜನಾಬ್ ಮೊಹ್ಮದ್ ಬ್ಯಾರಿಯವರು ಜಮಾತ್ ಅಧ್ಯಕ್ಷರನ್ನು ಒಂದಿಷ್ಟು ದೂರ ಕರೆದೊಯ್ದು "ನೋಡು... ಇವನೇ... ನನ್ನ ಆಯುಸ್ಸು ಮುಗಿಯುತ್ತಾ ಬಂತು. ಇಂದೋ-ನಾಳೆಯೋ ಮಣ್ಣಾಗುವವ ... ಹುಡುಗ ಅರಿಯದೆ ತಪ್ಪು ಮಾಡಿ ಬಿಟ್ಟ... ನೀನು ಸ್ವಲ್ಪ ಮನಸ್ಸು ಮಾಡಿದರೆ.... ! ಎಂದು ಯಾಚಿಸಿದರು.

"ಮಾಮದಾಕ... ಇದು ಚಿಲ್ಲರೆ ವಿಷಯವಲ್ಲ.. ಇಂದು ಫಾತಿಮಾ... ನಾಳೆ ಅಮಿನಾ.... ನಾಡದು ಇನ್ನೊಬ್ಬಳು... ಹೀಗೆ ಹೋದ ಕಡೆಯಲ್ಲೆಲ್ಲಾ ನಿಮ್ಮ ಮಗ ಮದ್ವೆಯಾಗುವುದೆಂದರೆ ಏನರ್ಥ? ಮಗು ಎಡವಿದ್ದಾಗಲೆಲ್ಲಾ ತಿದ್ದಿ -ಬುದ್ದಿ ಕಲಿಸಿ ಕೊಡುವ ಜವಾಬ್ದಾರಿ ನಿಮ್ಮದಲ್ವಾ... ? ನಾಡದು ಈ ಬಗ್ಗೆ ಚರ್ಚಿಸಲು ಜಮಾತ್ ಸಭೆ ಕರೆಯಲಾಗಿದೆ. ನಿಮ್ಮಲ್ಲಿ ಆಗದವರ ದಂಡೇ ಇದ್ದೀತು..

" ನೋಡು ನನ್ನ ಮಗ ಅಂತಹ ಬಚ್ಚಾಲಿ ಅಲ್ಲ. ಅವ ಅಜ್ಮೀರ್ ಬಾಬಾರಿಂದ 'ಪೊರ್ತ' ಪಡೆದವ. ಎಂದು ನೀ ಸುಳ್ಳು ಹೇಳಿಯಾದರೂ ಜನರಲ್ಲಿ ನಂಬಿಕೆ ಹುಟ್ಟಿಸಿದರೆ ಯಾರಾದರೂ ತಿರುಗಿ ಬಿದ್ದಾರಾ? ಎಂದು ಬ್ಯಾರಿ ಯಾಚಿಸಿ ಸುತ್ತಲೂ ಕಣ್ಣಾರಳಿಸಿ ಕಿಸೆಯಿಂದ ಹಳದಿ ಬಣ್ಣದ 'ಚೆಕ್'ನ್ನು ಹೊರಗೆಳೆದು ಅದರ ಮೇಲೆ ಒಂದು ಉರುಟಾದ ಸಹಿ ಎಳೆದು 'ವಿಜಯಾ ಬ್ಯಾಂಕ್'ಗೆ ಎನ್ನುತ್ತಾ ಜಮಾತ್ ಅಧ್ಯಕ್ಷರ ಕೈಗಿತ್ತರು. ಹಾಗೇ ಅಂದು ಮುಖಾಮಿನ ಬಳಿ ಅವ ಸಂಪಾದಿಸಿದ ಹಣದಲ್ಲಿ ಅರ್ಧ ಪಾಲು ನಿನಗೂ ಸಿಕ್ಕಿತಲ್ವಾ?" ಎಂದು ಬ್ಯಾರಿ ಮೆತ್ತಗೆ ನುಡಿದು ಅಲ್ಲಾಹು ನಮ್ಮನ್ನು ಕ್ಷಮಿಸಲಿ.. ಎಲ್ಲವೂ ಅವನ ಇಚ್ಛೆಯಂತೆ ನಡೆಯಲಿ..."

ಎನ್ನುತ್ತಾ ನೀವಿನ್ನು ಹೋಗಿ ಬನ್ನಿ..." ಎಂದು ಕಣ್ಸನ್ನೆಯ ಮೂಲಕ ಸೂಚಿಸಿ ಎದ್ದು ಒಳ ಹೋದರು.

ಶುಕ್ರವಾರ ಮಧ್ಯಾಹ್ನ... ಜಮಾತ್ ಅಧ್ಯಕ್ಷರ ಮನೆಯಲ್ಲಿ ಪಂಚಾಯತಿ ಸೇರಿತು. ಅಧ್ಯಕ್ಷರು ತನ್ನ ರಂಗಿನಾಟವನ್ನು ಪ್ರದರ್ಶಿಸಿ ಗಿಲೀಟು ಮಾತುಗಳಿಗೆ ಅವಕಾಶ ಕಲ್ಪಿಸಿ ಕೊಡುವುದರಲ್ಲಿ ಮಗ್ನರಾಗಿದ್ದರು...

"ಆ ಹೆಣ್ಣನ್ನು ಹಾಜರುಪಡಿಸುವುದು ಸೂಕ್ತ..." ಒಬ್ಬ ಧ್ವನಿ ಎತ್ತಿದ.

"ಛೇ... ಸುಮ್ಮನೆ ಯಾಕೆ ಅವಳನ್ನು ಇಲ್ಲಿಗೆ ಕರೆತರುವುದು. ಅವಳ ಚಂದವನ್ನು ಕಂಡು ಇಲ್ಲಿದ್ದವರೆಲ್ಲಾ ಪಾಪ ಕಟ್ಟಿ ಕೊಂಡಾರು..." ಇನ್ನೊಬ್ಬ ನುಡಿದ.

"ಫಾತಿಮಾಳನ್ನು ಕರೆತನ್ನಿ.... ಅವಳ ಮಾತಿಗೆ ಒಂದು ಅರ್ಥ ಕಲ್ಪಿಸಿಕೊಡುವ..." ಯಾರೋ ನುಡಿದರು. ಅಷ್ಟರಲ್ಲಿ ಇದ್ದಿನ್ ಬ್ಯಾರಿಯವರು ಸಭೆಯಿಂದ ಹೊರ ಬಂದರು. ಈ ಮಧ್ಯೆ ನೂರಾರು ಸಲಹೆ ಸೂಚನೆಗಳು ತಕ್ಕಡಿಯಲ್ಲಿ ಶೇಖರಣೆಗೊಂಡವು. ಮುಂದಿನ ಕೆಲವೇ ಕ್ಷಣದಲ್ಲಿ ಫಾತಿಮಾ ಮುಸುಕು ಹೊದ್ದು ಡವಡವ ಎದೆ ಹಾಗೂ ಉಬ್ಬಿದ ಹೊಟ್ಟೆಯೊಂದಿಗೆ ತಲೆ ತಗ್ಗಿಸಿ ನಿಂತಳು.

"ಹುಡಿಗೀ... ಸತ್ಯ ನುಡಿ ನಿನ್ನೆದುರಿಗೆ ಬಿಡಿಸಿಟ್ಟಿರುವುದು ಮೂವತ್ತು ಜುಸುವಿನ ಮುಸ್ಹಾಫ್.. ಎಂಬುದನ್ನು ಮರೆಯದಿರು" ಅಧ್ಯಕ್ಷರು ಸುತ್ತಲೂ ಕಣ್ಣರಳಿಸಿದರು.

'ಹೌದು. ಕಾಕಾ... ನಿಮ್ಮ ಕತ್ತಿನಾಣೆ. ನಾನು ಬೇಡ-ಬೇಡವೆಂದರೂ ಅವ, ಮುಂದೆ ನಿನ್ನನ್ನು ಖಾನತ್ ಆಗುವವ ನಾನಲ್ವಾ... ಎನ್ನುತ್ತಲೇ ನನ್ನನ್ನು ಮರುಳುಗೊಳಿಸಿದ.. ನನ್ನ ಬಾಳನ್ನು ಹಾಳುಗೆಡಹಿದವನು ಅವನೇ...'ಫಾತಿಮಾ ಬಿಕ್ಕಿದಳು.

"ಹೇಗೆ ಮಾತನಾಡುತ್ತಾಳೆ ಮಾಟಗಾತಿ... ಸಿದ್ದೀಖ್ ಎಂತಹ ಜನ ಎಂದು ಗೊತ್ತಾ...? ಅವ ಅಜ್ಮೀರ್ ಬಾಬಾರಿಂದ 'ಪೊರ್ತ' ಪಡೆದವ... ನೋಡು... ಈಗವ ಈ ವಿಷಯದಿಂದ ಮನನೊಂದು ಅಜ್ಮೀರ್‌ಗೆ ಹೋಗಿರುವನು..." ಅಧ್ಯಕ್ಷರ ಸ್ವರದಲ್ಲಿ ಗಡಸಿತ್ತು. ಪಂಚಾಯತಿ ಕಟ್ಟೆಯಲ್ಲಿ ಒಮ್ಮೆಲೆ ಎದ್ದ ಗುಜುಗುಜು ಮಾತಿನ ನಡುವೆ ಫಾತಿಮಾಳ ಬಿಕ್ಕಳಿಕೆ ಕೇಳಲೇ ಇಲ್ಲ.

"ಬಾ.. ಮೋಳೇ....ಎಲ್ಲವನ್ನೂ ಅವನು ಕಾಣುತ್ತಾನೆ. ಅಂತಿಮ ನ್ಯಾಯ ತೀರ್ಮಾನಿಸುವವನೂ ಕೂಡಾ ಅವನೇ...!" ಎಂದು ನೋವಿನ ಧ್ವನಿಯಲ್ಲೇ ಸಭೆಗೆ ಕೇಳುವಂತೆ ಹೇಳಿ ನಡೆದ ಇದ್ದಿನ್ ಬ್ಯಾರಿಯವರು ಮುಂದೆ ತನ್ನ ಟ್ರಂಕನ್ನೇ ಊರ ಗಡಿಯಾಚೆ ಇಟ್ಟರು.

ಒಂದು ತಿಂಗಳು ಉರುಳಿತು. ಈ ಹಗರಣವನ್ನು ಊರವರು ತಾತ್ಕಾಲಿಕವಾಗಿ ಮರೆತಿದ್ದರು. ಸಿದ್ದೀಖ್ ಕಾಸರಗೋಡಿನಿಂದ ಆಗಾಗ ಊರಿಗೆ ಬರಲಾರಂಭಿಸಿದ್ದ.

ನನ್ನ ಉಮ್ಮ ಉಳ್ಳಾಲದ ಮುಖಾಮಿಗೆ ಹೋದದ್ದರಿಂದ ನಾನು ಧೈರ್ಯದಿಂದ ಮನೆಯೊಳಗೆ ಕೂತು ಸಿಗರೇಟಿನ ಹೊಗೆಯೊಡನೆ ಆಟವಾಡುತ್ತಿದ್ದೆ. ಅಷ್ಟರಲ್ಲಿ ಪೋಸ್ಟ್‌ಮ್ಯಾನ್ ಬಂದು ಪೋಸ್ಟ್ ಎನ್ನುತ್ತಾ ಒಂದು ಕವರ್ ಕೊಟ್ಟ... ಪತ್ರ ಒಡೆದೋದಿದೆ.

'ಗೆಳೆಯಾ.... ನನಗಿನ್ನು ಈ ಲೋಕದಲ್ಲಿ ಜೀವಿಸಿ ಫಲವಿಲ್ಲ.... ಜೀವಿಸುವಾಸೆಯೂ ಇಲ್ಲ. ಅತ್ತ ಫಾತಿಮಾಳಿಗೆ ಕೈ ಕೊಟ್ಟು ಅಮಿನಾಳನ್ನು ಕಟ್ಟಿಕೊಂಡೆ. ಫಾತಿಮಾಳಿಗೆ ಮರುವಿವಾಹವಾದ ವಿಷಯ ತಿಳಿದು 'ಇನ್ನೇನೂ ಆಗದು' ಎಂದು ಭಾವಿಸಿ ಆಮಿನಾಳ ಜತೆ ಊರಿಗೆ ಬಂದೆ... ಫಾತಿಮಾ.. ನನ್ನ ಹೆಸರಿನ ಜೊತೆ ಮತ್ತೊಮ್ಮೆ ಊರವರಿಗೆ ಸುದ್ದಿಯಾದಳು. ಆವಾಗಲೇ ಆಮಿನಾಳಿಗೆ ನನ್ನ ಮೇಲೆ ಸಂಶಯ ಬಂದಿತ್ತು. ಅವಳ ಕಿರಿಕಿರಿ ತಡೆಯಲಾಗದೆ ಕೋಪದಿಂದ ಅದೊಂದು ರಾತ್ರಿ ಅವಳಿಗೆ ಸರಿಯಾಗಿ ಏಟು ಕೊಟ್ಟು ನಾನು ಹಾಸಿಗೆ ಹಿಡಿದೆ. ಸುಮಾರು ರಾತ್ರಿಯವರೆಗೂ ಅವಳು ಅಳುತ್ತಾ ಕುಳಿತಿದ್ದಳು. ಮುಂದೆ ನಾನು ಬೆಳಿಗ್ಗೆ ಎದ್ದು ನೋಡಿದಾಗ ಅವಳು ಅಂಗಾತ ತನ್ನ ಪರಿವೆಯೇ ಇಲ್ಲದೆ ಬಿದ್ದಿದ್ದಳು. ಬಾಯಲ್ಲಿ ನೊರೆ ಇಳಿಯುತಿತ್ತು.... ನಾನು ಹೆದರಿ ಜೋರಾಗಿ ಕಿರುಚಿದೆ... ಮನೆಯಲ್ಲಿದ್ದವರೆಲ್ಲಾ ಆಮಿನಾಳ ಬಳಿ ಬಂದು ಒಂದೆರಡು ಕ್ಷಣ ಪರೀಕ್ಷಿಸುತ್ತಲೇ ಆಸ್ಪತ್ರೆಗೆ ಕರೆದೊಯ್ದರು. ನಂತರ, ಅವಳು ಕ್ರಿಮಿನಾಶಕ ಔಷಧಿ ಸೇವಿಸಿ ಆತ್ಮಹತ್ಯೆ ಮಾಡಿರುವಳು.... ಎಂದು ವೈದ್ಯರಿಂದ ಮಾಹಿತಿಯೂ ದೊರೆಯಿತು. ಇನ್ನು ನಾನೇನು ಮಾಡಲಿ... ಯಾರಿಗೋಸ್ಕರ ಬದುಕಲಿ...?"

ಪತ್ರ ಓದುತ್ತಲೇ... ನಾನು ಪಳ್ಳಿಯತ್ತ ಕಾಲೆಳೆದೆ. ಪಳ್ಳಿಯ ಬಲಭಾಗದಲ್ಲಿರುವ ಬಿ.ಎ. ಹಾಮದ್‌ರ ಅಂಗಡಿಯಲ್ಲಿ ಹತ್ತಾರು ಮಂದಿ ಲೋಕಾಭಿರಾಮವಾಡುತ್ತಿದ್ದರು. ನಾನೂ ಕೂಡಾ ಹೋಗಿ ಅಲ್ಲೇ ಬೆಂಚಲ್ಲಿ ಕೂತೆ. "ಅಲ್ಲಾ.. ಕಾಕಾ.. ಸಿದ್ದೀಖ್‌ನ ಕತೆ ಗೊತ್ತಾ ಎಂದಾಗ ಅಜ್ಮೀರ್ ಮುಖಾಮಿನ ಬಳಿ ನೂಲು ಮಂತ್ರಿಸಿ ಕೊಡುತ್ತಿದ್ದಾನಾ...?" ಒಬ್ಬ ವ್ಯಂಗ್ಯವಾಗಿ ಪ್ರಶ್ನಿಸಿದ.

"ಎಂತದು ಇವನೇ....? ಈವತ್ತಿನ ಪೇಪರ್ ನೋಡಂತೆ.." ಬಿ.ಎ ಹಮೀದ್‌ರು ಖಾರದಿಂದ ನುಡಿದರು. ನಾನು ಚುರುಕುಗೊಂಡು ಪೇಪರ್ ಕೈಗೆತ್ತಿಕೊಂಡು ನೋಡತೊಡಗಿದೆ... ಪತ್ರಿಕೆಯಲ್ಲಿನ ಸುದ್ದಿಯೊಂದು ಹೀಗಿತ್ತು... 'ಹಿಂದೊಮ್ಮೆ ತನ್ನ ಊರ ಮುಖಾಮಿನ ಬಳಿ ಬೋಗಸ್ ಬಾಬಾ ಆಗಿ ಮೆರೆದ ಸಿದ್ದೀಖ್ ಎಂಬಾತ ತನ್ನ ಕಾಂಪ್ಲೆಕ್ಸ್‌ನಲ್ಲಿ ಬಾಡಿಗೆ ಕೊಟ್ಟು ಜೀವನ ಸಾಗಿಸುತ್ತಿದ್ದ ಫಾತಿಮಾ ಎಂಬವಳನ್ನು ಪ್ರೀತಿಸಿ ಅರ್ಧದಲ್ಲೇ ಕೈಕೊಟ್ಟು ಕಾಸರಗೋಡಿಗೆ ಓಡಿ ಬಂದು ಆಮಿನಾ ಎಂಬವಳನ್ನು ಮದ್ವೆಯಾಗಿದ್ದ. ಮುಂದೆ ಅದ್ಯಾವುದೋ ಕಾರಣಕ್ಕೆ ಅವಳ ಕತ್ತು ಹಿಸುಕಿ ಕೊಂದಿದ್ದಾನೆ. ಅವಳು ಕ್ರಿಮಿನಾಶಕ ಔಷಧಿ ಸೇವಿಸಿದಳು ಎಂದು ವೈದ್ಯರಿಂದ ಫೋರ್ಜರಿ ಸರ್ಟಿಫಿಕೇಟ್ ಪಡೆದು... ಇದೀಗ ನಗರದ ಪೊಲೀಸರ ಕೈಗೆ ಸಿಕ್ಕಿ ಬಿದ್ದು ತನ್ನ ಆತ್ಮಚರಿತ್ರೆಯನ್ನೆಲ್ಲಾ

ಬಿಡಿಸಿ ಹೇಳುತ್ತಿರುವನು. ಹೋದೆಡೆಯಲ್ಲೆಲ್ಲಾ ಹೆಣ್ಣನ್ನು ಕಟ್ಟಿಕೊಳ್ಳುವ ಚಪಲವುಳ್ಳ ಈತ ಎಷ್ಟು ಕಡೆ ಮದ್ವೆಯಾಗಿರುವನೆಂದು ಇನ್ನಷ್ಟೇ ತಿಳಿಯಬೇಕಾಗಿದೆ.. ಎಂದು ಓದುತ್ತಾ ಸಾಗಿದೆ...

ಆ ಕ್ಷಣ ಬಿ.ಎ. ಹಾಮದರು ಮೆತ್ತಗೆ ಪ್ರಾರ್ಥಿಸಿದರು.... ಅಲ್ಲಾಹುವೇ.. ಇಂತಹ ಕಪಟಿ ಜನರೇ ಐಷಾರಾಮ ಜೀವನ ನಡೆಸುತ್ತಾರೆ... ಸತ್ಯ ನುಡಿಗಳಿಗೆ ನಿನ್ನೀ ಲೋಕದಲ್ಲಿ ಬೆಲೆ ಇಲ್ಲದಾಗಿದೆ.. ಏನಿದು..? ಅಂತ್ಯ ದಿನಗಳ ಲಕ್ಷಣವೇ...? ರಬ್ಬೇ... ನಮ್ಮನ್ನೆಲ್ಲಾ ಸ್ವಾಲಿಹ್‌ಗಳ ಕೂಟದಲ್ಲಿ ಸೇರ್ಪಡಿಸು... ಆಮೀನ್...!

❖ ❖ ❖

ಪಟ್ಟಾಂಗ ಪಾಕ್ಷಿಕ **16-11-1995**

# ಕನಸು

"ಏ ರಶೀದ್... ನಿಂಗೆ ಹೇಳಿದಷ್ಟು ಅರ್ಥವಾಗುವುದಿಲ್ಲವಾ? ಬೇಗ ಪಳ್ಳಿಗೆ ಕೊಡ್ಹೋಗಿ ಕೋಳಿ ಕೊಯಿಸಿ ಬಾ..." ಎಂದು ಆಮಿನಾ ಹೇಳಿದಾಗ, "ಹೂಂ... ಕೊಕ್ಕಚ್ಚಿ" ಎಂದು ತನ್ನಲ್ಲೇ ನುಡಿದ ರಶೀದ್, ಗೂಡಿನ ಬಳಿ ಸಾಗಿ ಚಂದದ ಗಿರಿರಾಜ ಕೋಳಿಯನ್ನು ಹಿಡಿದು ತಂದು ಇಸ್ಮಾಯಿಲ್ ಸೇಟ್‌ರ ಮುಂದೆ ನಿಂತ.

ಬೆತ್ತದ ಕುರ್ಚಿಯಲ್ಲಿ ಕೂತು ಸಿಗರೇಟು ಸೇದುತ್ತಿದ್ದ ಇಸ್ಮಾಯಿಲ್ ಸೇಟರು ತನ್ನ ಸೊಂಟಕ್ಕೆ ಸುತ್ತಿದ ರಾಣಿ ಮಾರ್ಕಿನ ಚರ್ಮದ ಬೆಲ್ಟಿನಿಂದ ಐದು ರೂಪಾಯಿ ತೆಗೆದುಕೊಟ್ಟು "ಆದಷ್ಟು ಬೇಗ ಬಾ... ನೆಂಟರು ಬರಲಿಕ್ಕಾಯಿತು. ಮಕ್ಕಳು ಸಿಕ್ಕಿದರೂಂತ ಆಡಲು ಕೂರಬೇಡ" ಎಂದರು.

ರಶೀದ್ ಪನ್ನೆರಡು ವರ್ಷದ ಬಾಲಕ. ಬಡತನ ಬೇಗೆಯಿಂದಾಗಿ ಶಿಕ್ಷಣ ಪಡೆಯುವುದರಿಂದ ವಂಚಿತನಾದ ರಶೀದ್ "ಸೇಟರ" ಮನೆಯಲ್ಲಿ ಕೆಲಸಕ್ಕೆ ನಿಂತು ಐದು ವರ್ಷವಾಗಿದೆ. ಅಲ್ಲಿ ಮುಸುರೆ ತಿಕ್ಕುತ್ತಾ, ನೆಲಗುಡಿಸಿ ಒರೆಸುತ್ತಾ, ಖಾದಿರಾಕನ ಅಂಗಡಿಯಿಂದ ಸಾಮಾನು ತರುತ್ತಾ, ಗ್ರಾಮ ಚಾವಡಿಯಿಂದ ಮೀನು ತರುತ್ತಾ, ಸೇಟ್‌ಗೆ ಮಧ್ಯಾಹ್ನ ಊಟ ಕೊಂಡ್ಹೋಗುತ್ತಾ ದಿನದೂಡುತ್ತಿದ್ದ ರಶೀದ್ ಬಿಡುವಿದ್ದಾಗಲೆಲ್ಲಾ ಆ ನೆರೆಯ ಮಕ್ಕಳೊಡನೆ ಆಟವಾಡುತ್ತಿದ್ದ. ಆದರೆ ಸೇಟ್‌ರ ಮನೆಗೆ ನೆಂಟರು ಬಂದಾಗ ರಶೀದ್‌ನಿಗೆ ಒಂದು ನಿಮಿಷ ಕೂಡಾ ಪುರುಸೊತ್ತು ಸಿಗುತ್ತಿರಲಿಲ್ಲ.

ಮಡಿಕೇರಿಯಲ್ಲಿ ಕಾಫಿ ಎಸ್ಟೇಟ್ ಹೊಂದಿರುವ ಇಸ್ಮಾಯಿಲ್ ಸೇಟ್‌ರು ಪವಿತ್ರ ಹಜ್ ಯಾತ್ರೆಗೈದು ಊರವರಿಂದ ಒಂದಿಷ್ಟು ಗೌರವ ಉಳಿಸಿಕೊಂಡು 'ಹಾಜಿ' ಎಂಬ ಬಿರುದಿಗೆ ಪಾತ್ರರಾದವರು. ಈ ಹಿಂದೆ ಕೊಡುಗೈ ದಾನಿಯೂ, ಸಮಾಜ ಸೇವಕರಾಗಿದ್ದ ಸೇಟ್‌ರು, ಇತ್ತೀಚೆಗೆ "ನಾನು ಝಕಾತ್ ಕೊಡುತ್ತಾ ಹೋದರೆ ನನ್ನ ಮಗಳ ಗತಿ ಏನು? ಅವಳ ಮದುವೆ ಮಾಡಿಸುವುದಾದರೂ ಹೇಗೆ?" ಎಂದು ಹೇಳಿಕೊಳ್ಳುತ್ತಿದ್ದುದು ಊರವರಿಗೆ ಕಸಿವಿಸಿಯುಂಟು ಮಾಡಿದೆ.

ರಶೀದ್ ಗದ್ದೆ ಹುಣಿಯಲ್ಲಿ ನಡೆಯುತ್ತಾ ಸೇಟ್‌ರ ಕಾರುಬಾರನ್ನು ಜ್ಞಾಪಿಸಿ "ನಾನೂ ಕೂಡಾ ದೊಡ್ಡವನಾದ ಮೇಲೆ ಕೈತುಂಬಾ ಕಾಸು ಸಂಪಾದಿಸಿ ಹಜ್‌ಗೆ ಹೋಗಿ ಚಂದದ ಒಂದು ತಾರಸಿ ಮನೆ ಕಟ್ಟಿಸಿ, ಹೀಗೆ ಬೆತ್ತದ ಕುರ್ಚಿಯಲ್ಲಿ ಕೂತು ರಾಜ - ದರ್ಬಾರ್‌ನಲ್ಲಿ ಮೆರೆಯಬೇಕು. ನನ್ನ ಬಳಿ ದಿನಾ ನೂರಾರು ಮಂದಿ ಸಹಾಯ ಯಾಚಿಸಿ ಕಣ್ಣೀರಿಳಿಸುವವರು ಬರಬೇಕು... ಬಂದವರಿಗೆ ಎತ್ತರದ ಧ್ವನಿಯಲ್ಲಿ ಬುದ್ಧಿವಾದ ಹೇಳಿಕೊಡಬೇಕು" ಎಂದು

ತನ್ನಲ್ಲೇ ಗಾಳಿಗೋಪುರ ಕಟ್ಟಿಕೊಂಡ.

ರಶೀದ್ ಪಳ್ಳಿಯ ಮುಕ್ರಿಯ ಬಳಿ ಕೋಳಿ ಕೊಯಿಸಿ ಐದು ರೂಪಾಯಿಯನ್ನು ಅವರ ಕೈಗಿತ್ತು ಮನೆಯತ್ತ ದರದರನೆ ನಡೆಯತೊಡಗಿದ. ಹಾಗೇ ಖಾದಿರಾಕನ ಅಂಗಡಿ ಬಳಿ ಬರುತ್ತಿದ್ದಂತೆಯೇ ತನ್ನ ಗೆಳೆಯರು "ಕುಟ್ಟಿ-ದೊಣ್ಣೆ" ಆಟವಾಡುತ್ತಿದ್ದುದನ್ನು ಕಂಡು ಕೋಳಿಯನ್ನು ಒಂದೆಡೆ ಬಚ್ಚಿಟ್ಟು ಅತ್ತ ಸಾಗಿ ಆಟವಾಡತೊಡಗಿದ.

ಲುಹರ್ ಬಾಂಗ್ ಮೊಳಗುತ್ತಿದ್ದುದನ್ನು ಕೇಳಿದ ರಶೀದ್ "ಯಾ ರಬ್ಬೇ... ಬಾಂಗ್ ಆಯ್ತು, 'ಕರಿ' ಇನ್ನೂ ಆಗಿಲ್ಲ" ಎನ್ನುತ್ತಾ ದರದರನೆ ನಡೆಯತೊಡಗಿದ. ಹಾಗೆ ಅವನಿಗೆ ಆಮಿನಾಳ ಕೆಂಡ ಕಾರುವ ಮುಖ ಎದುರಾಯಿತು.

ರಶೀದ್ ಮನೆ ಹಿತ್ತಲಿನ ದಾರಿ ಬಳಸಿ ಸೇಟ್‌ರ ಹೆಂಡ್ತಿಯ ಕೈಯಲ್ಲಿ ಕೋಳಿ ಕೊಟ್ಟ. "ಏನು ಮೋನೇ... ಯಾಕಿಷ್ಟು ಲೇಟು? ಮುಕ್ರಿಕ ಇರಲಿಲ್ಲವಾ?" ಎಂದು ಬಿಫಾತಿಮ ಪ್ರಶ್ನಿಸಿದಾಗ ರಶೀದ್ 'ಇಲ್ಲ' ಎಂದು ತಲೆಯಲ್ಲಾಡಿಸಿ 'ಈ ಉಮ್ಮ, ಅದೆಷ್ಟು ಪಾಪ... ಆಮಿನಾಳಿಗೆ ಇವರ ಬುದ್ಧಿ ಸ್ವಲ್ಪವಾದರೂ ಬಂದಿದೆಯಾ? ಎಂದು ತನ್ನಲ್ಲೇ ಪ್ರಶ್ನಿಸುತ್ತಾ ಹೊರಬಂದಾಗ ಆಮಿನಾ ಬೆತ್ತ ಹಿಡಿದು ಅಂಗಳದಲ್ಲಿ ನಿಂತುದನ್ನು ಕಂಡು ಹೆದರಿದ.

"ಏನು... ಮುಕ್ರಿಕ ಇರಲಿಲ್ಲವಾ? ಮತ್ತೆ, ಅಲ್ಲಿ ಇದ್ದುದು ಯಾರು ನಿನ್ನ ಅಪ್ಪವಾ? ನೀನು ಅವರೊಡನೆ ಕೂಡಿ "ಕುಟ್ಟಿ-ದೊಣ್ಣೆ" ಆಡುತ್ತಿದ್ದಾಗ ನಾನು ಎಲ್ಲಿದ್ದೆ ಗೊತ್ತಾ?" ಎಂದು ಪ್ರಶ್ನಿಸಿ ರಶೀದ್‌ನ ಎಳತು ಕೈಗಳಿಗೆ ನಾಲ್ಕು ಬಾರಿಸುತ್ತಲೇ "ನಾನು ಖಾದಿಕಾಕರ ಅಂಗಡಿಯಲ್ಲಿದ್ದೆ" ಎಂದಳು.

ರಶೀದ್ ನೋವು ತಾಳಲಾರದೆ ಕಿರುಚಿದ. ದುಃಖ ತಡೆಯಲಾಗದೆ ಕೂಗ ತೊಡಗಿದ. "ಹೂಂ.... ಇವತ್ತು ಉಮ್ಮ ಬಂದರೆ ನಾನು ಅವರೊಡನೆ ಹೋಗಬೇಕು. ಮತ್ತೆ ಈ ಊರಿಗೆ ಕಾಲಿಡಲೇಬಾರದು ಅಲ್ಲ... ನನ್ನಮ್ಮ ಮತ್ತು ಬಿಫಾತಿಮಾರಂತೆ ಈ ಆಮಿನಾಳಿಗೂ ಯಾಕೆ ಆಗಬಾರದು.... ಅವರಂತೆ ಇವಳು ಹೆಣ್ಣಲ್ವಾ?" - ರಶೀದ್ ದುಃಖದ ಭರದಲ್ಲಿ ಏನೇನೋ ಯೋಚಿಸುತ್ತಿದ್ದ.

ದಿನಗಳು ಉರುಳಿತು. ರಶೀದ್ ಮತ್ತು ಆಮಿನಾ ಹಾಗೂ ನೆರೆಯ ಎಳೆಯರು ಒಗ್ಗೂಡಿ "ಮಂಜಲಾಟ" ಆಡತೊಡಗಿದರು. ವಧು-ವರರಾಗಿ ಆಮಿನಾ ಮತ್ತು ರಶೀದ್ ಹಾಗೂ ಗೆಳೆಯರೆಲ್ಲಾ ಮದುವೆಗೆ ಬಂದ ಅತಿಥಿಗಳಾಗಿದ್ದರು. ಒಬ್ಬಳು ನೈಚೋರು ತಯಾರಿಸುತ್ತಿದ್ದಳು. ಕೆಲವರು ಆಮಿನಾಳನ್ನು ಶೃಂಗರಿಸುತ್ತಿದ್ದರು. ಮತ್ತೆ ಕೆಲವರು ಕೈ ಚಪ್ಪಾಳೆ ತಟ್ಟಿ "ಮಂಜಲಪಾಟ್" ಹಾಡುತ್ತಿದ್ದರು.

ರಶೀದ್ ಆಮಿನಾಳ ಬೆರಳಿಗೆ ಉಂಗುರ ತೊಡಿಸಿದ. ಆಮಿನಾ ನಾಚಿ ನೀರಾದಳು.

"ಆಮೀನಾ... ನನ್ನನ್ನು ಕಂಡರೆ ನಿನಗೆ ಆಗುವುದಿಲ್ಲವಲ್ಲ? ಯಾಕೆ? ನಾನು ನಿನ್ನನ್ನು ಮದುವೆ ಆಗ್ತೇನೆ ಅಂತಲಾ? ನೋಡು, ನಿನಗಿಂತ ಚಂದದ ಹೆಣ್ಣನ್ನು ನಾನು ಮದುವೆಯಾಗುವೆ" ಎಂದು ರಶೀದ್ ಹೇಳಿದಾಗ, ಕೋಪಗೊಂಡ ಆಮಿನಾ ನನ್ನ ಶೃಂಗಾರವನ್ನೆಲ್ಲಾ ಕಿತ್ತೆಸೆದು ಹಲ್ಲು ಮಸೆದು ದೂರು ಕೊಡಲು ತಂದೆಯ ಬಳಿ ಓಡಿಹೋದಳು.

ಸಂತೋಷದ ಸಮಾರಂಭವೊಂದು ದುಃಖದ ಕಡಲಲ್ಲಿ ತೇಲಿಹೋಯಿತು. ಅಣುಕು ವಸ್ತುಗಳೆಲ್ಲಾ ಚೆಲ್ಲಾ-ಪಿಲ್ಲಿಯಾಗಿದ್ದವು. ನೈಚೋರು ಬೇಯುತ್ತಿದ್ದ ಮಡಕೆ ಎರಡು ಹೋಳಾಯಿತು. "ರಶೀದ್ ನಿನಗೆ ಭಾಷೆ ಇಲ್ಲವಾ? ಆ ಹುಡುಗಿಯ ಕೊಂಕು ಬುದ್ಧಿ ಗೊತ್ತಿಲ್ಲದ್ದಕ್ಕಾ?" ಎಂದು ಗೆಳೆಯರೆಲ್ಲಾ ರಶೀದ್‌ನನ್ನು ಕೆಣಕಿದರು.

ಸೇಟ್‌ರು ಆಮಿನಾಳ ಕೂಗಿಗೆ ಬೇಸತ್ತು, ರಶೀದ್‌ನನ್ನು ತನ್ನ ಬಳಿ ಕರೆದು ವಿಚಾರಿಸಿ "ಇನ್ನು ಹಾಗೆಲ್ಲಾ ಹೇಳಬೇಡ" ಎನ್ನುತ್ತಾ ಬಲವಾಗಿ ಕಿವಿ ಹಿಂಡಿ ಬಸ್ಕಿ ತೆಗೆಸಿದರು. ರಶೀದ್ ನಾಚಿ ನೀರಾದ. ಗೆಳೆಯರ ಮುಖನೋಡಿ ಅಂಜಿದ. "ಹ್ಞೂಂ... ಈ ಮನೆಯವರಿಂದ ನಾನೆಷ್ಟು ಪೆಟ್ಟು ತಿಂದೆ. ಆ ಬಿಫಾತಿಮಾ ಇಲ್ಲದಿದ್ದಲ್ಲಿ ನಾನೀಗ ಪಳ್ಳಿಯ ಬಳಿ ಇರುತ್ತಿದ್ದೇನೋ ಏನೋ? ಹ್ಞೂಂ.... ನನ್ನ ಮನೆಯಲ್ಲಿರುತ್ತಿದ್ದರೆ ನಾನಿಷ್ಟು ಪೆಟ್ಟು ತಿನ್ನುತ್ತಿದ್ದೆನೇ...?" ಎಂದು ತನ್ನಲ್ಲೇ ಪ್ರಶ್ನಿಸಿ, ಮುಂದೆ ಅದೇ ವಿಷಯದಿಂದ ನೊಂದು, ಕೋಪಗೊಂಡು ಅಂದು ರಾತ್ರಿಯೇ ಕಾಲ್ಕಿತ್ತ...

❖ ❖ ❖

ರಾತ್ರಿ ಹತ್ತು ಗಂಟೆಯಾಗಿತ್ತು. ನೆಬಿಸಮ್ಮ ಪಡಸಾಲೆಯಲ್ಲಿ ಕೂತು ತನ್ನ ಗಂಡನನ್ನು ಎದುರು ನೋಡುತ್ತಿದ್ದಳು. ಅವಳ ಗಂಡ ಇಬ್ರಾಯಿ ಪಾತ್ರೆಗೆ ಕಲಾಯಿ ಹಾಕಿ ತನ್ನ ಸಂಸಾರ ಸಾಗಿಸುತ್ತಿದ್ದ. ರಶೀದ್ ಉಮ್ಮಳ ಬಳಿ ತೆಪ್ಪಗೆ ಕೂತಿದ್ದ.

"ಯಾಕೆ ಮೋನೇ... ನೀನು, ಸೇಟ್‌ರ ಮನೆಯಿಂದ ಕೆಲಸ ಬಿಟ್ಟು ಬಂದೆ. ಈಗ ಅಲ್ಲೇ ಇದ್ದಿದ್ದರೆ ನಿನಗೆ ಇಂತಹ ಕಷ್ಟವಿತ್ತಾ? ಅದಿರಲಿ, ಅಲ್ಲಿಂದ ಓಡಿಬಂದು ಎಷ್ಟು ವರ್ಷವಾಯಿತು ಗೊತ್ತಾ? ಒಂದೇ ಒಂದು ಕೆಲಸದಲ್ಲಿ ಖಾಯಂ ಆಗಿ ನಿಂತದ್ದು ಇದೆಯಾ? ಮರದ ಮಿಲ್ಲಾಯ್ತು, ಕಲ್ಲಿನ ಕ್ವಾರಿಯಾಯ್ತು, ಹೊಟೇಲಾಯ್ತು, ಗ್ಯಾರೇಜಾಯ್ತು...." ಎಂದು ನೆಬಿಸಮ್ಮ ಗುಣುಗುಟ್ಟಿದಾಗ "ಸ್ವಲ್ಪ ಕಾಸು ಮಾಡಿ ಕೊಡಿ, ನಾನು ಸೌದಿಗೆ ಹೋಗುವೆ" ಎಂದು ರಶೀದ್ ಮೆತ್ತಗೆ ನುಡಿದ.

"ನಾನು ಎಲ್ಲಿಂದ ಕಾಸು ಮಾಡಲಿ... ನೀನೇನು ಕೊಟ್ಟದ್ದು ಇದೆಯಾ?"

"ಹ್ಞೂಂ... ಉಮ್ಮಾ ನಿಮ್ಮ ಆಭರಣ ಕೊಡಿ"

"!!!"

ಇಬ್ಬಾಯಿ ಬಂದು ಪಡಸಾಲೆಯಲ್ಲಿ ಕೂತು ಬೆವರೊರೆಸಿದ. ಮುಂದೆ ಸ್ನಾನ ಮಾಡಿ ನಮಾಜ್ ಮಾಡಿ, ಊಟಕ್ಕೆ ಕೂತಾಗ ನೆಬಿಸಮ್ಮ ತನ್ನ ಗಂಡನಲ್ಲಿ ಮಗನನ್ನು ಸೌದಿಗೆ ಕಳುಹಿಸಿ ಕೊಡುವ ಬಗ್ಗೆ ಮಾತಾನಾಡತೊಡಗಿದಳು.

"ಹೋಗುವುದಾದರೆ ಹೋಗಲಿ... ಸೌದಿಗೆ ಹೋಗಿ ಕೈತುಂಬಾ ಸಂಪಾದಿಸಿದರೆ ನಮ್ಮ ಬಡತನವಾದರೂ ಕರಿದು ಹೋದೀತು, ಮತ್ತೆ ಈ ಬೀಡಿ ಸುರುಟಿ; ಪಾತ್ರೆಗೆ ಕಲಾಯಿ ಹಾಕಿ ಮಗಳ ಮದುವೆ ಮಾಡಿಸಲು ಆಗುತ್ತದಾ?" ಎಂದು ನುಡಿದ ಇಬ್ಬಾಯಿ ಹೆಂಡತಿಯಲ್ಲಿ ಚರ್ಚಿಸಿದ ನಂತರ ಎಲ್ಲಾ ಆಭರಣವನ್ನು ಮಾರಲು ತೀರ್ಮಾನಿಸಿದ.

ರಶೀದ್ ಮರುದಿವಸ ಮಂಗಳೂರಿನ ವೀಸಾ ಏಜೆನ್ಸಿಯಲ್ಲಿ ಮಾತುಕತೆ ನಡೆಸಿದ. 'ಜಿದ್ದಾ'ದ ಒಂದು ಕಂಪೆನಿಯಲ್ಲಿ ಸೇಲ್ಸ್‌ಮ್ಯಾನ್ ಹುದ್ದೆ....! ಒಳ್ಳೆಯ ಸಂಬಳವೂ ಇದೆ. ಆದರೆ ವೀಸಾಕ್ಕೆ 55 ಸಾವಿರ ಬೇಕಾಗುತ್ತದೆ. ರಶೀದ್ ಈ ಹಣವನ್ನು ಹೇಗೆ ಕೂಡಿಸಲಿ ಎಂದು ಯೋಚಿಸತೊಡಗಿದ. ಹಾಗೆ ರಶೀದ್ ಎಲ್ಲಾ ವಿಷಯವನ್ನು ತನ್ನ ಉಮ್ಮನಲ್ಲಿ ತಿಳಿಸಿದಾಗ ಅವಳಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. "55 ಸಾವಿರ...! ನಮ್ಮಲ್ಲಿ ಅಷ್ಟೊಂದು ಹಣ ಎಲ್ಲಿದೆ? ಒಂದು ವೇಳೆ ಅಷ್ಟಿದ್ದರೂ, ಅದರಿಂದ ಮಗಳ ಮದುವೆ ಮಾಡಿಸಲಾಗದೇ? ಈ ಕಾಲದಲ್ಲಿ ನಮ್ಮಂತಹ ಬಡವರಿಗೆ ಅಷ್ಟೊಂದು ಹಣ ಸಾಲ ಕೊಡಲು ಯಾರು ತಯಾರಿದ್ದಾರೆ? - ನೆಬಿಸಮ್ಮ ತನ್ನಲ್ಲೇ ಪ್ರಶ್ನಿಸಿ ಕಸಿವಿಸಿಗೊಂಡಳು.

ಇಬ್ಬಾಯಿ ಬಂಗಾರವನ್ನು ಊರಿನ ಅಡಿಕೆ ಸಾಹುಕಾರರ ಬಳಿ ಇಟ್ಟು 20 ಸಾವಿರ ರೂಪಾಯಿ ಪಡಕೊಂಡ. ವೀಸಾ ಕೈಗೆ ಸಿಗಬೇಕಾದರೆ ಇನ್ನು 35 ಸಾವಿರಬೇಕು. ಅವ ಉಪಾಯವಿಲ್ಲದೆ ನೆರೆಯ ಬಾವಾಕನ ಬಳಿ ಸಾಗಿದ.

ಬಾವಾಕ ಊರೂರು ಅಲೆದು ಮೀನು ಮಾರಿ ಜೀವಿಸುವವ. ಕಳೆದ ಹದಿನೈದು ವರ್ಷದಿಂದ ಈ ಕಸಬಿನಲ್ಲಿ ನಿಯತ್ತಿನಿಂದ ದುಡಿದಿದ್ದ ಬಾವಾಕ ತನ್ನ ಮಗಳ ಮದುವೆಗೋಸ್ಕರ ಕಾಸು ಕೂಡಿಸಿ ಬಂದ ವಿಷಯವು ನೆರೆಯವರಿಗೆಲ್ಲಾ ತಿಳಿದಿತ್ತು.

ಇಬ್ಬಾಯಿ ಬಾವಾಕನ ಬಳಿ ತನ್ನ ಮಗ ಸೌದಿಗೆ ಹೋಗುವ ವಿಷಯ ತಿಳಿಸಿ ಸಾಲ ಯಾಚಿಸಿದ. ಆದರೆ ಬಾವಾಕ ಹತ್ತಾರು ಕಾರಣ ತೋರಿಸಿ ಇಬ್ಬಾಯಿಯನ್ನು ಬರಿ ಗೈಯಲ್ಲಿ ವಾಪಾಸು ಕಳುಹಿಸಿಕೊಟ್ಟ.

ಹಾಗೆ ಅಂದು ರಾತ್ರಿ ಬಾವಾಕ ತನ್ನ ಹೆಂಡತಿಯಲ್ಲಿ ಇಬ್ಬಾಯಿ ಬಂದು ಹೋದ ವಿಷಯವನ್ನು ಮಾತಿನ ನಡುವೆ ತಿಳಿಸಿದ. "ನೋಡಿ... ಹುಡುಗ ಸೌದಿಗೆ ಹೋಗುತ್ತಾನೆ. ಮುಂದೆ ಒಳ್ಳೆಯದಕ್ಕೆ ಬಂದಾನು. ನಮ್ಮಲ್ಲಿರುವ ಮಗಳ ಮದುವೆಗೋಸ್ಕರ ಕೂಡಿಟ್ಟ

ಕಾಸನ್ನು ಅವನಿಗೆ ಕೊಟ್ಟು ಬಿಡುವ. ಈಗ ನಮ್ಮ ಸಕೀನಾಳಿಗೆ ಹದಿನಾರು ವರ್ಷ ತಾನೆ. ನಾಳೆ ಅವ ಸೌದಿಗೆ ಹೋಗಿ ಬಂದ ಮೇಲೆ ನಮ್ಮ ಸಕೀನಾಳನ್ನು ಮದ್ವೆಯಾಗಬೇಕೆಂದು ಈಗಲೇ ಕೇಳಿ ಒಂದು ಒಪ್ಪಂದಕ್ಕೆ ಬಂದುಬಿಡುವ. ಹೇಗೂ, ಈ ಕಾಲದಲ್ಲಿ ವರದಕ್ಷಿಣೆ ಇಲ್ಲದೆ ಮಾತಿಲ್ಲ... ಮತ್ತೆ ಎಂತೆಂತಹವರಿಗೆ ಕೊಟ್ಟು ಸಕೀನಾಳ ಬಾಳನ್ನು ಹಾಳು ಮಾಡುವುದಕ್ಕಿಂತ" ಎಂದು ಜುಲೇಖಾ ಅಭಿಪ್ರಾಯಪಟ್ಟಾಗ ಬಾವಾಕನಿಗೆ ಸರಿ ಎನಿಸಿತು.

"ಅಳಿಯ ಸೌದಿಯಲ್ಲಿದ್ದರೆ ನಮಗೂ ನೆಮ್ಮದಿ... ಬಾಳಿ ಹೋದ ನಮ್ಮ ಮಗಳಿಗೂ ಸುಖ... ನಾನು ಹೀಗೆ ಈ ಬುಟ್ಟಿ ಹೊತ್ತು ಮೀನು ಮಾರಬೇಕು ಎಂದೇನಿಲ್ಲ..." -ಹೀಗೆ ನೂರಾರು ಆಸೆ-ಆಕಾಂಕ್ಷೆಗಳನ್ನು ಇಟ್ಟ ಬಾವಾಕ ಮರು ದಿವಸ ಇಬ್ರಾಯಿಯಲ್ಲಿ ವಿಷಯ ತಿಳಿಸಿ **35** ಸಾವಿರ ರೂಪಾಯಿ ಕೊಟ್ಟುಬಿಟ್ಟ.

ರಶೀದ್ ವೀಸಾ ಏಜೆನ್ಸಿಯ ಬಳಿ ಹೋಗಿ ಎಲ್ಲಾ ಹಣ ಪಾವತಿಸಿ ಹೋಗುವ ಬಗ್ಗೆ ಪೂರ್ಣ ಮಾಹಿತಿ ಕೇಳ ತೊಡಗಿದ.

"ನೋಡು... ನೀನು ನಾಳೆ ಸಂಜೆ ಇಲ್ಲಿಂದ ಮುಂಬಯಿಗೆ ಬಸ್ಸಲ್ಲಿ ಹೋಗಬೇಕು. ಅಲ್ಲಿ ನಮ್ಮ ಹೆಡ್ ಆಫೀಸ್‌ನ ಮ್ಯಾನೇಜರ್‌ನ ಬಳಿ ಹೋಗಿ ಮಾತನಾಡಬೇಕು. ನಂತರ ಅವರು ನಿನ್ನನ್ನು ನಾಡದು ಸೋಮವಾರ ವಿಮಾನ ಹತ್ತಿಸುತ್ತಾರೆ. ನಿನ್ನ ಜೊತೆ ಕೇರಳದ ನಾಲ್ಕು ಮಂದಿಯೂ ಇರುತ್ತಾರೆ" ಎನ್ನುತ್ತಾ ವಿಸಿಟಿಂಗ್ ಕಾರ್ಡ್ ಕೊಟ್ಟ.

ರಶೀದ್ ಬಲು ಸಂತೋಷದಿಂದ,ಎಲ್ಲರ ಆಶೀರ್ವಾದ ಪಡೆದು ಮಂಗಳೂರಿನಿಂದ ಮುಂಬಯಿಗೆ ಹೋಗುವ ಬಸ್ಸು ಹತ್ತಿದ. ಆ ದಿನ ನೆರೆಯುವರನ್ನು ಕರೆದು ವಿಶೇಷ ಔತಣಕೂಟವನ್ನೂ ಕೊಡಲು ರಶೀದ್ ಮರೆಯಲಿಲ್ಲ.

ರಶೀದ್ ಮುಂಬಯಿ ಸೇರಿ ಗಲ್ಲಿಗಲ್ಲಿ ಕಾಲೆಳೆದು ಏಜೆನ್ಸಿ ಕೊಟ್ಟ ಕಾರ್ಡ್‌ನಲ್ಲಿದ್ದ ವಿಳಾಸದಂತೆ ಹೆಡ್ ಆಫೀಸನ್ನು ಪತ್ತೆ ಹಚ್ಚಿದ. ಅಲ್ಲಿ ಒಂದಿಬ್ಬರು ಗಡ್ಡದಾರಿಗಳು ಅದೇನೋ ಗೀಚುತ್ತಿದ್ದರು. ಅವರ ಬಳಿ ಸಾಗಿ ವಿಷಯ ತಿಳಿಸಿದ.

"ಸರಿ... ನೀವು ಇಲ್ಲಿ ಕೂತ್ಕೊಲ್ಲಿ... ಮ್ಯಾನೇಜರ್ ಈಗ ಬಂದಾರು" ಎಂದು ಒಬ್ಬ ರಶೀದ್‌ನಲ್ಲಿ ನುಡಿದ. ರಶೀದ್ ಅಲ್ಲೇ ಕುರ್ಚಿಯಲ್ಲಿ ಕೂತ. ಅಲ್ಲಿ ತನ್ನಂತೆ ಇತರ ಇಬ್ಬರು ಮಲೆಯಾಳಿಗಳು ಇದ್ದುದನ್ನು ರಶೀದ್ ಗುರುತಿಸಿದ.

ರಶೀದ್ ಸತತ ಎರಡು ದಿನದವರೆಗೆ ಮ್ಯಾನೇಜರ್ ಬರುವುದನ್ನು ಕಾದು ಕೂತ. ಮಂಗಳೂರಿನ ಏಜೆನ್ಸಿ ತಿಳಿಸಿದಂತೆ ನಾನೀಗಾಗಲೇ ಜಿದ್ದಾದಲ್ಲಿ ಸೇರಬೇಕಿತ್ತು ಎಂದು ತನ್ನಲ್ಲೇ ನುಡಿದು ಕಸಿವಿಸಿಗೊಂಡ. ಈ ಮಧ್ಯೆ ರಶೀದ್ ಉಳಕೊಳ್ಳಲು ಲಾಡ್ಜನ್ನು ಬಳಸಿದನಲ್ಲದೆ ದಿನದಲ್ಲಿ ಸುಮಾರು ಆರುನೂರು ರೂಪಾಯಿವರೆಗೆ ಖರ್ಚು

ಮಾಡುವಂತಾಯಿತು.

ಅವನಿಗೆ ಈಗ ಮ್ಯಾನೇಜರ್‌ನ್ನು ಕಾದು ಕೂರುವುದು ಬೇಸರ ತಂದಿತು. ಹೆಡ್ ಆಫೀಸಿಗೆ ಹೋಗಿ ವಿಚಾರಿಸಿದರೆ "ಬೆಂಗಳೂರಿನ ನಮ್ಮ ಬ್ರಾಂಚ್ ಆಫೀಸ್‌ಗೆ ಹೋಗಿದ್ದಾರೆ... ನಾಳೆ ಬಂದಾರು" ಎಂಬ ಉತ್ತರ ಸಿಕ್ಕಿತು. ಕೊನೆಗೂ ಉಪಾಯವಿಲ್ಲದೆ ರಶೀದ್ ಮಂಗಳೂರಿನ ಏಜೆನ್ಸಿಗೆ ಫೋನ್ ಹಾಯಿಸಿ ವಿಚಾರಿಸತೊಡಗಿದ. "ನೋಡಿ ರಶೀದ್ ನೀವೇನೂ ಹೆದರಬೇಡಿ.... ನಾಳೇ ಬೆಳಗ್ಗೆ ವಿಮಾನ ಹತ್ತಿಸುವ ವ್ಯವಸ್ಥೆ ಮಾಡುತ್ತೇನೆ...." ಎಂದು ಏಜೆನ್ಸಿ ರಶೀದ್‌ನಲ್ಲಿ ತಿಳಿಸಿದ.

ಮತ್ತೆ ಎರಡು ದಿನ ಕಳೆಯಿತು. ಎಲ್ಲರಿಂದಲೂ "ಆದಷ್ಟು ಬೇಗ ಕಳುಹಿಸಿ ಕೊಡುತ್ತೇವೆ ನೀವೇನೂ ಹೆದರಬೇಡಿ" ಎಂಬ ಸಮಾಧಾನದ ಉತ್ತರ ಬರುತ್ತಲಿತ್ತು. ಮುಂಗೋಪಿ ರಶೀಗ್‌ನಿಗೆ ಒಂದೆಡೆ ಕೋಪ, ಇನ್ನೊಂದೆಡೆ ದುಃಖವು ಉಮ್ಮಳಿಸುತ್ತಿತ್ತು.

ಮರುದಿವಸ ಬೆಳಿಗ್ಗೆ ಎಂದಿನಂತೆ ಲಾಡ್ಜ್‌ನಿಂದ ಹೆಡ್ ಆಫೀಸ್ ಬಳಿ ಬಂದಾಗ ಅದರ ಕದ ಮುಚ್ಚಿಕೊಂಡಿತ್ತು. ಸ್ವಲ್ಪ ಹೊತ್ತು ಕಾದು ಕೂತ ರಶೀದ್ ಹತ್ತಿರದ ಪಾನ್‌ಬೀಡಾದ ಅಂಗಡಿಯವನಲ್ಲಿ ವಿಚಾರಿಸಿದ.

"ಓ... ಅವರಾ... ಯಾರೋ ಒಬ್ಬ ಮಲೆಯಾಳಿ ಕೊಟ್ಟ ದೂರಿನ ಮೇರೆಗೆ ಪೋಲಿಸರು ದಾಳಿ ಮಾಡುವ ಮುನ್ನವೇ ಅವರು ಇಲ್ಲಿಂದ ಪರಾರಿಯಾದರು" ಎಂದು ಆತ ನುಡಿದಾಗ ರಶೀದ್‌ನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಈಗ ಅವನಿಗೆ ತಾನು ಮೋಸ ಹೋದುದು ಅರಿವಾಯಿತು. ಮನೆಯುವರು ಖರ್ಚಿಗೆ ಎಂದು ಕೊಟ್ಟ ಇತರ ಐದುಸಾವಿರ ರೂಪಾಯಿಯಲ್ಲಿ ಈಗಾಗಲೇ ನಾಲ್ಕುಸಾವಿರ ರೂಪಾಯಿ ಖರ್ಚಾಗಿ ಹೋಯಿತು. ಇನ್ನು ಒಂದೆರಡು ದಿವಸ ಈ ಹರಾಂಕೋರರನ್ನು ಕಾದು ಕೂತರೆ ಖರ್ಚಿಗೆ ಕಾಸಿಲ್ಲದೆ ಇಲ್ಲೇ ಏನಾದರೂ ಕೆಲಸ ಮಾಡಬೇಕಾದೀತು ಎಂದು ಬಗೆದ ರಶೀದ್ ಮಂಗಳೂರಿನ ವೀಸಾ ಏಜೆನ್ಸಿಯಲ್ಲಿ ಸರಿಯಾಗಿ ಕೇಳಿ ನೋಡುವ ಸಲುವಾಗಿ ಮತ್ತೆ ಮಂಗಳೂರಿಗೆ ಬರುವ ಲಕ್ಸುರಿ ಬಸ್ಸು ಹತ್ತಿದ.

ರಶೀದ್ ಈಗ ಹುಚ್ಚನಂತಿದ್ದ. ಅದಲ್ಲದೆ ಅಲ್ಲಿಯ ಊಟ ಹಿಡಿಸದೆ ಎರಡು ಬಾರಿ ವಾಂತಿ ಮಾಡಿದ್ದಾಯಿತು, ನಿತ್ರಾಣದಿಂದ ಬಳಲಿ ರಕ್ತ ಕಾರಿದ್ದೂ ಆಯಿತು. ಆದರೆ ಎಲ್ಲವನ್ನೂ ತನ್ನ ಕನಸು ನನಸಾಗುವ ಸಲುವಾಗಿ ತಾಳ್ಮೆ ವಹಿಸಿದ. ಅದಲ್ಲದೆ ತನ್ನ ಹೆತ್ತವರು ಕೊಟ್ಟ 55 ಸಾವಿರ ಹಣ ನೀರು ಪಾಲಾದುದು ಅವನಿಗೆ ಸಹಿಸಲಾಗಲಿಲ್ಲ.

ರಶೀದ್ ಮಂಗಳೂರಿಗೆ ಬಂದು ವೀಸಾ ಏಜೆನ್ಸಿಯ ಆಫೀಸಿಗೆ ಕಾಲೆಳೆದಾಗ ಅದರ ಕದ ಮುಚ್ಚಿದ್ದನ್ನು ಕಂಡು ಚಕಿತಗೊಂಡ. ಅವನಿಗೆ ಆಗಲೇ ತನಗೆ ಮೋಸ ನಡೆದುದು

ಮನವರಿಕೆಯಾಯಿತು.

ರಶೀದ್ ಹತ್ತಿರದ ಅಡಿಕೆ ವ್ಯಾಪಾರಸ್ಥನ ಬಳಿ ಸಾಗಿ ವೀಸಾ ಏಜೆನ್ಸಿಯ ಬಗ್ಗೆ ಪ್ರಶ್ನಿಸಿದ. ಮುಂಬಯಿಯಲ್ಲಿ ಪಾನ್‌ಬೀಡಾದ ಅಂಗಡಿಯವ ಹೇಳಿದಂತೆ, ಇಲ್ಲಿ ಅಡಕ್ಕ ವ್ಯಾಪಾರಸ್ಥನು ಅದೇ ರೀತಿ ಹೇಳಿದಾಗ ರಶೀದ್‌ನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಅವನಿಗೆ ಇದೊಂದು ಜನತೆಗೆ ಪಂಗನಾಮ ಹಾಕುವ ಸಂಸ್ಥೆ ಎಂಬುದು ಮನವರಿಕೆಯಾಯಿತು.

ನೆಬಿಸಮ್ಮ ಪಡಸಾಲೆಯಲಿ ಕೂತು ಬೀಡಿ ಸುರುಟುತ್ತಿದ್ದಳು. ಮಗ್ರಿಬ್ ಬಾಂಗ್ ಮೊಳಗಿ ಅರ್ಧ ಗಂಟೆಯಾದುದರಿಂದ ಮಸುಕಾಗಿ ಕತ್ತಲು ಆವರಿಸಿತ್ತು. ನೆಬಿಸಮ್ಮಳಿಗೆ ದೂರದಲ್ಲಿ ಯಾರೋ ತನ್ನ ಮನೆಯತ್ತ ನಡೆದುಕೊಂಡು ಬರುತ್ತಿರುವುದು ಕಾಣಿಸಿತು.

ಕಣ್ಣು ಹತ್ತಿರವಾದಂತೆ "ತನ್ನ ಪ್ರೀತಿಯ ಮಗ ಎಂದು ಗುರುತಿಸಿದ ನೆಬಿಸಮ್ಮ ಬೀಡಿಯ ಸೂಫನ್ನು ಕೆಳಗಿಟ್ಟು "ಏನಾಯಿತು ಮೋನೆ?" ಎಂದು ಉದ್ಗರಿಸಿ ಚಡಪಡಿಸುತ್ತಾ ಅಂಗಳವಿಳಿದಳು.

ಆಗ ತಾನೆ ಮಗ್ರಿಬ್ ನಮಾಜ್ ಮುಗಿಸಿ ಕುರಾನ್ ಪಾರಾಯಣ ಮಾಡಲು ಕೂತ ಇಬ್ಬಾಯಿಗೆ ಅಂಗಳದಲ್ಲಿ ತನ್ನ ಹೆಂಡತಿಯ ಕ್ಷೀಣ ಮಾತುಗಳನ್ನು ಕೇಳಿ "ಏನಾಯಿತು ಇವಳೆ?" ಎಂದು ಪ್ರಶ್ನಿಸಿ ಹೊರ ಬಂದನು. ಅಷ್ಟರಲ್ಲಿ ಎದುರಲ್ಲೇ ತನ್ನ ಮಗ ನಿಂತುದನ್ನು ಕಂಡು "ಮೋನೇ" ಎಂದು ಹೌಹಾರಿ 'ಸೌ...ದಿ...ಗೆ' ಹೋಗಲಿಲ್ಲವಾ? ಎಂದಾಗ, ನೆಬಿಸಮ್ಮ ಕಣ್ಣೀರು ಸುರಿಸಿದಳು.

"ಉಮ್ಮಾ... ಕೂಗಬೇಡ. ನನ್ನ ಬಲವಾದ ಕನಸು ನಿಮ್ಮ ಬಂಗಾರನ್ನು ಕಿತ್ತೆಸೆಯಿತು. ಎಲ್ಲಾ ವಿಷಯ ನಾಳೆ ತಿಳಿಸುವೆ..." ಎನ್ನುತ್ತಲೇ ನಿತ್ರಾಣದಿಂದ ಬಳಲಿ ಹಾಸಿಗೆಯಲ್ಲಿ ಬಿದ್ದು ಬಿಟ್ಟ. ನೆಬಿಸಮ್ಮ ಮತ್ತೆ ಚೀರಿ "ಏನಾಯಿತು ನನ್ನ ಮಗುವಿಗೆ... ರೀ, ಮಾಬ್ಲ ಪಂಡಿತರನ್ನು ಕರೆತನ್ನಿ" ಎಂದು ಗೋಗೆರೆದಳು. ಇಬ್ಬಾಯಿ ಧೈರ್ಯ ತಂದು ಪರಿಸ್ಥಿತಿಯನ್ನು ಅರ್ಥ ಮಾಡಿ ಕೊಂಡು ಎಲ್ಲಾ ವಿಷಯವನ್ನು ನಾಳೆ ಬೆಳಿಗ್ಗೆ ತಿಳಿದು ಕೊಂಡರಾಯಿತು ಎಂದು ಬಗೆದು ಅರೆ ನಿದ್ದೆಯಲ್ಲಿ ತೇಲಾಡಿದ.

ಸುಬಹ್ ಬಾಂಗ್ ಮೊಳಗಿತು. ಇಬ್ಬಾಯಿ ಎದ್ದು ಕಣ್ಣೊರೆಸುತ್ತಾ ತನ್ನ ಮಗನನ್ನು ನುಂಗುವಂತೆ ನೋಡ ತೊಡಗಿದ. ರಾತ್ರಿ ಸ್ವಲ್ಪ ರಕ್ತ ಕಾರಿದುದರಿಂದ ಬಟ್ಟೆಯಿಡೀ ಮದ್ದುಗಟ್ಟಿದೆ. ಕೈ ಕಾಲು ನಿತ್ರಾಣದಿಂದ ನಡುಗುತ್ತಿದೆ. ಹಾಗೇ ಇಬ್ಬಾಯಿ "ಮೋನೇ ಎಂದು ಕರೆದಾಗ ರಶೀದ್ ಮೆಲ್ಲನೆ ನರಳಿದ.

ಇಬ್ಬಾಯಿ ತನ್ನ ಮಗನ ದಾರುಣ ಸ್ಥಿತಿಗೆ ಮರುಕಪಟ್ಟು ಬಾವಾಕನ ಬಳಿ ವಿಷಯ ತಿಳಿಸುವ ಸಲುವಾಗಿ ಅತ್ತ ಕಾಲೆಳೆದ. ಬಾವಾಕ ಮೀನಿನ ಖಾಲಿ ಬುಟ್ಟಿಯನ್ನು ಕೈಯಲ್ಲಿ ಹಿಡಿದು

'ದಕ್ಕೆ'ಗೆ ಹೊರಟಿದ್ದ. ಇಬ್ರಾಯಿಯನ್ನು ಕಾಣುತ್ತಲೇ 'ಏನು?' ಎಂದು ಕಣ್ಣಲ್ಲೇ ಯಾಚಿಸಿದ.

ಬಾವಾಕನನ್ನು ಒಳ ಕೋಣೆಗೆ ಕರೆದೊಯ್ದು ಇಬ್ರಾಯಿ ಸೌದಿಗೆ ಹಾರಿ ಹೋದ ತನ್ನ ಮಗ ವಾಪಾಸು ಬಂದುದನ್ನೂ, ರಕ್ತ ಕಾರಿ ಬಳಲುತ್ತಿರುವುದನ್ನು ತಿಳಿಯಪಡಿಸಿ ಕಣ್ಣೀರೊರಸಿದ.

"ಅವನಿಗೆ ಏನಾಯಿತು? ಅಂತಹದು ಏನಾದರೂ ಸೀಕು ಅವನಿಗೆ ಇತ್ತಾ?" ಎಂದು ಬಾವಾಕ ಪ್ರಶ್ನಿಸುತ್ತಾ ತನ್ನ ಭಾವೀ ಅಳಿಯ ಮತ್ತು ಅವನಿಂದಾಗುವ ಸಹಾಯದ ಬಗ್ಗೆ ಕಟ್ಟಿದ ಕನಸುಗಳು ನುಚ್ಚು ನೂರಾದುದನ್ನು ತಡೆಯಲಾರದೆ "ಇನ್ನು, ನನ್ನ ಮೂವತ್ತೈದು ಸಾವಿರಕ್ಕೆ ಯಾರು ಗತಿ?" ಎಂದು ತನ್ನಲ್ಲೇ ಪ್ರಶ್ನಿಸಿ ವ್ಯಥೆಯಿಂದ ಅಲ್ಲೇ ತಲೆಗೆ ಕೈ ಹೊತ್ತು ಕೂತ.

ಇಬ್ರಾಯಿ ಹೇಳುತ್ತಿದ್ದುದನ್ನು ಕಿವಿಗೊಟ್ಟು ಆಲಿಸುತ್ತಿದ್ದ ಬಾವಾಕನ ಮಗಳು ಸಕೀನ "ಅವನಿಗೆ ಏನಾಯಿತು?" ಎಂದು ಪ್ರಶ್ನಿಸಿ ಕಿಟಾರ್ರನೆ ಕಿರುಚಿದಳು.

❖ ❖ ❖

ಮ್ಯೊಲಾಂಜಿ ಮಾಸಿಕ 1-6-1997

# ಪೋಸ್ಟ್ ಮಾರ್ಟಂ

ಹೈದ್ರೋಸ್ ಬೆಳಗ್ಗೆ ಎದ್ದು ಬಿಳಿ ಮೌಲಾನಾ ಮುಂಡು, ಕಡಕ್ಕ್ ನೀಲಿ ಹಾಕಿದ ಪೈರಾನಿ ಹಾಕ್ಕೊಂಡು ಬರೀ ಹೊಟ್ಟೆಯಲ್ಲೇ 'ನಾ ಬರ್‍ತೇನೆ' ಎನ್ನುತ್ತಾ ಸರಸರನೆ ನಡೆದಾಗ್ಲೇ ಅಮೀನಾಗೆ ಸಂಶಯವಾಗಿತ್ತು. 'ಎಲ್ಲಿಗೆ ಅಬ್ಬಾ?' ಎಂದು ಪ್ರಶ್ನಿಸಲು ಬಾಯ್ತೆರೆದರೂ, ಬೆಳಬೆಳಗ್ಗೆ ಎದ್ದು ಹೋಗುವಾಗ ಹಾಗೆಲ್ಲಾ ಪ್ರಶ್ನಿಸಬಾರದೆಂದು ಸಾವು ಬದುಕಿನಲ್ಲಿ ಹೋರಾಡುವ ಆಚೆ ಮನೆಯ ಪ್ರೀತಿಯ ಅಜ್ಜರಾದ ಎಪ್ಪತ್ಮೂರರ 'ಚೆರಿಯೋನಾಕ' ಹೇಳುತ್ತಿದ್ದುದು ಅವಳಿಗೆ ನೆನಪಾಯಿತು. ಅವಳು ಸೀದಾ ಅಡುಗೆ ಕೋಣೆಗೆ ಹೋದವಳೇ 'ಉಮ್ಮಾ... ಅಬ್ಬ ಎಲ್ಲಿಗೆ ಹೋದದ್ದು ಗೊತ್ತುಂಟಾ?' ಎಂದು ಪ್ರಶ್ನಿಸಿದಾಗ 'ಎಂತದ್ದು ಮೋಳೇ ನೀ ಹೇಳುವುದು' ಅನ್ನುತ್ತಾ ಪಾತುಮ್ಮ ಅಂಗಳಕ್ಕಿಳಿದರೆ,ಮಂಜು ಕವಿದ ಮಂದ ಬೆಳಕಿನಲ್ಲಿ ಗಂಡ ಗುಡ್ಡ ಏರುತ್ತಿರುವುದನ್ನು ಕಂಡು 'ಏನೋ ಒಂದು 'ಕೆಟ್ಬ್ಯಾಡ್' ಇರಬೇಕು' ಅನ್ನುತ್ತಾ ಒಳ ಹೋದರೂ, ಅಂಗಳದಲ್ಲಿ ಇನ್ನೂ ನಿಂತಿದ್ದ ಅಮೀನಾ 'ನನ್ನ ಮದ್ವೆಯ ವಿಷಯಕ್ಕಾಗಿರಬಹುದಾ?' ಎಂದು ಮನದಲ್ಲೇ ಪ್ರಶ್ನಿಸಿ ಗೆಲುವು ಪಡಕೊಂಡಳು.

'ಅರಸ್ತಾನ'ದಿಂದ ಮಂಗ್ಳೂರಿಗೆ ಬಿಡುವ ಮೊದಲ ಟ್ರಿಪ್ಪಿನ ಬಸ್ಸಿಗೆ ಹೈದ್ರೋಸ್ ಹತ್ತಿದ್ದೇ ತಡ, ತಾನು ಕೂತ ಸೀಟಿನ ಪಕ್ಕದಲ್ಲೇ ತನ್ನೂರಿನ ಮೀನು ವ್ಯಾಪಾರಿಗಳಾದ ಕುಂಞಮೋನು, ಹಾಗೂ ಪುತ್ಮೋನು ಕೂತು ಎಲ್ಲಿಗೆ ಕಾಕಾ ಸವಾರಿ? ಎಂದು ಪ್ರಶ್ನಿಸಿ ಮಾತಿಗೆ ನಾಂದಿ ಹಾಕಿದ್ದರಿಂದ ಹೈದ್ರೋಸ್‌ಗೆ ಅವರ ಮಾತಿನಿಂದ ಬಿಡುಗಡೆಗೊಳ್ಳಲು ಸ್ವಲ್ಪ ಕಷ್ಟವಾಗಿತ್ತು. ಆದರೂ ಬಸ್ಸು ತೊಕ್ಕೊಟ್ಟಿಗೆ ಹೋಗಿ ಮುಟ್ಟಿದಾಗ್ಲೆ 'ಯಾ ಅಬ್ಬಾ... ಬಚಾವಾದೆ' ಎನ್ನುತ್ತಾ ನಿಟ್ಟುಸಿರು ಬಿಟ್ಟು ಅಲ್ಲಿನ 'ಕಾಕ'ರ ಹೊಟೇಲಿಗೆ ಹೊಕ್ಕು ಒಂದು 'ಬಿಸಿ ಕನ್ನ' ಕುಡಿದು ಕಾಲುದಾರಿಯಲ್ಲಿ ನಡೆಯುತ್ತಾ ಉಳ್ಳಾಲದ ಮುಖಾಮಿಗೆ ಹೋಗಿ 'ಝಿಯಾರತ್' ಮಾಡಿ ಅನಾವಶ್ಯಕವಾಗಿ ಅತ್ತಿತ್ತಾ ಕಾಲೆಳೆಯುತ್ತಾ ತಲಪಾಡಿಗೆ ಸೇರಿದಾಗ ಹತ್ತುಗಂಟೆಯಾಗಿತ್ತು.

ಅಲ್ಲೇ ಗೋಳಿ ಮರದಡಿಯಲ್ಲಿ ಕೂತು ಬೀಡಿಯ ದಮ್ಮು ಹೀರುತ್ತಿದ್ದ ದಲ್ಲಾಳಿ 'ಕಾವುಂಞಿ'ಯ ಬಳಿ ಹೋಗಿ 'ಕಾ... ವೂ' ಅಂತ ಕರೆದಾಗ 'ಬಾ ಕೂತ್ಕೋ.... ಭಾರೀ ನೀಟಾಗಿ ಬಂದಿದ್ದಿಯಲ್ಲಾ? 'ರಾಜಾಪು'ನ ಹಾಗೆ ಚಂದ ಕಾಣ್ತಿಯಾ? ಎನ್ನುತ್ತಾ ತುಂಟನಗೆ ನಕ್ಕರೆ 'ಒಂದು ಗಳಿಗೆಗಲ್ಲವಾ ಬಾ... ವಾ?' ಎಂದು ಮೊಟಕು ಉತ್ತರ ನೀಡಿದ. ಮುಂದೆ ಅಲ್ಲಿಂದ ಬಸ್ಸು ಹತ್ತಿ ಕೋಯಕ್ಕೋಡ್‌ನಲ್ಲಿಳಿದು ಕಾಲುದಾರಿಯಲ್ಲಿ ನಡೆದೋಡಿದಾಗ ಹೈದ್ರೋಸ್‌ಗೆ ಸುಸ್ತಾಗಿತ್ತು. 'ಇನ್ನೆಷ್ಟು ದೂರವಿದೆ?' ಹೈದ್ರೋಸ್‌ನ ಪ್ರಶ್ನೆಗೆ ಕಾವುಂಞಿ 'ಹ್ಲೋ.... ಹ್ಲೋ.... ಓ ಅದೇ, ನೀಲಿ ಪೈಂಟಿನ ಮನೆ' ಎಂದ. ಆ ಮನೆಯೆದುರು ಒಂದಿಷ್ಟು ಜನರು ಅತ್ತಿತ್ತ ಸುಳಿದಾಡುತ್ತಿದ್ದರು. ನಾಲ್ಕೈದು ಬೆಂಚುಗಳು ಅಂಗಳದಲ್ಲಿ ಒಣಗುತ್ತಿತ್ತು. ಹತ್ತಾರು ಚಿಳಿಪಿಳಿ ಮಕ್ಕಳು ಆಟದಲ್ಲಿ ಮಗ್ನರಾಗಿದ್ದರು. ಹೈದ್ರೋಸ್ 'ಅಸ್ಸಲಾಂ ಅಲೈಕ್ಕು'

ಎನ್ನುತ್ತಾ ಮನೆಯ ಹೊಸ್ತಿಲು ಮೆಟ್ಟಿದಾಗ್ಲೇ ಸೇರಿದ್ದಾಳುಗಳೆಲ್ಲಾ 'ಪೂಂಜಿರಿ' ಬೀರಿ ಪ್ರತಿವಂದಿಸಿ ಆನಂದದಿಂದ ಸ್ವಾಗತಿಸಿದರು. ನಾಲ್ಕೈದು ಬಿಳಿ ಮುಂಡಾಸಿನ ಮೊಯಿಲಾರರು ಹತ್ತಿಪ್ಪತ್ತು, ಆಕಾರ, ರೂಪ, ಗುಣಹೊಂದಿದವರೆಲ್ಲ ಅಡ್ಡಾದಿಡ್ಡಿ ಕೂತು ಮಾತುಕತೆಯಾಡುತ್ತಿದ್ದರು. ಒಂದಿಬ್ಬರು ಹೈದ್ರೋಸ್‌ನ ಬಳಿ ಬಂದು ಮೂವತ್ತೆರಡು ಹಲ್ಲು ಬಿಟ್ಟು ಬಾಯಗಲ ಮಾಡಿ ಮಾತನಾಡತೊಡಗಿದರು. ನಿಮಿಷಾರ್ಧದಲ್ಲಿ ಕೆಲವೊಂದು ತಂಪಿನ ಕೆಂಪು ಗ್ಲಾಸುಗಳು ಬತ್ತಿ ಹೋದವು. ಸಂಪ್ರದಾಯದಂತೆ ಮೊಯಿಲಾರರು ಕುರಾನಿನ ಕೆಲವೊಂದು ಶ್ಲೋಕಗಳನ್ನು ಓದಿ ದುವಾದೊಂದಿಗೆ ಮುಕ್ತಾಯ ಹಾಕಿದರು.

ಮುಂದೆ ಲುಹರ್ ಬಾಂಗ್ ಮೊಳಗಿದಾಗಲೇ ಹತ್ತಿರದಲ್ಲಿದ್ದ ಜುಮ್ಮಾ ಮಸ್ಜಿದ್‌ನಲ್ಲಿ ಹೈದ್ರೋಸ್‌ನ ಸಹಿತ ಎಲ್ಲರೂ ಸೇರಿದರು. 'ಬಾವಾಕ ತಡಮಾಡ್ಬೇಡಿ... ಬೇಗ ವಲು ಮಾಡಿ ಬನ್ನಿ' ಎಂದು ಮೊಯಿಲಾರರು ದೊಡ್ಡ ಜನ ಆದಾಗ ಬಾವಾಕ ಮತ್ತು ಹೈದ್ರೋಸ್ ವಲು ಮಾಡಿ ಮಸೀದಿಯೊಳ ಸೇರಿ ಲುಹರ್ ನಮಾಜ್ ಮಾಡಿ ಬಂದು ಎದುರು ಬದುರಾಗಿ ಕೂತರು. ಮಸೀದಿಯ 'ಮುಕ್ರಿಕ' ಪುಸ್ತಕವೊಂದರಲ್ಲಿ ಏನೋ ದಾಖಲಿಸಿಕೊಂಡು, ಸಾಕ್ಷಿಗಾಗಿ ಬಾಪೂ ಬ್ಯಾರಿ, ಶೇಕ್ ಬ್ಯಾರಿ ಅನ್ನುವ ಸಹಿಯೂ ಬಿತ್ತು. ಸ್ವಲ್ಪದರಲ್ಲೇ 'ಖಾನತ್' ಕೂಡಾ ನಡೆಯಿತು. ಪುದಿಯಾಪ್ಲೆ ಸೇರಿದ್ದವರ ಬಳಿ ಬಂದು ಕೈಕುಲುಕ ತೊಡಗಿದ. ಹೈದ್ರೋಸ್ ಒಮ್ಮೆಲೆ ತತ್ತರಿಸಿ, 'ಪಾತುಮ್ಮಾ' ಈಗೇನು ಮಾಡುತ್ತಿರಬಹುದು? ನಾ ಬರುವಾಗ ಅವಳನ್ನು ಕಂಡು ಮಾತ್ನಾಡಲೂ ಇಲ್ಲ. ಅಮೀನಾಳಿಗೆ ನನ್ನೀ ವಿಷಯ ಗೊತ್ತಾದ್ರೆ ಏನು ಮಾಡ್ಬಹುದು. ಒಂದು ಲೆಕ್ಕದಲ್ಲಿ ಅವಳೀಗ ಪುದಿಯಪೆಣ್ಣ್ ಆಗಿ ಮೆರೆಯಬೇಕಾಗಿತ್ತು. ಅವಳಿಗೆ ನಾನು ಮೋಸಮಾಡಿ ಬಿಟ್ಟೆನಲ್ಲಾ? ನನ್ನ 'ತಕದೀರ್'ನಲ್ಲಿ ಹೀಗೆಲ್ಲಾ ಬರೆದಿಟ್ಟರೆ ಅದನ್ನು ಅಳಿಸಿ ಹಾಕ್ಲಿಕ್ಕೆ ಯಾರಿಂದ ಸಾಧ್ಯವಿದೆ. 'ಪಡಚ್ಚೋನೇ' ನಾನು ತಪ್ಪು ಮಾಡಿಬಿಟ್ಟೆ. ನನಗೆ 'ಮಾಫ್' ಮಾಡಿಬಿಡು ಎನ್ನುತ್ತಾ ಆಕಾಶ ದಿಟ್ಟಿಸಿದ.

'ಸೃಷ್ಟಿಗಳೇ- ನೀವು ಮಾಡಿದ ಪಾಪ, ಮಾಡದೇ ಇರುವ ಕರ್ತವ್ಯಗಳ ಪಾಪ, ರಹಸ್ಯವಾಗಿಯೂ ಬಹಿರಂಗವಾಗಿಯೋ ಅನಾವಶ್ಯಕವಾಗಿಯೂ ಮಾಡಿದ ಪಾಪಗಳನ್ನೆಲ್ಲಾ ನಾನು ತಿಳಿದವನಾಗಿರುವೆನು. ಪಾಪಕ್ಕೆ ತಕ್ಕ ಶಿಕ್ಷೆಯನ್ನೂ, ಪುಣ್ಯಕ್ಕೆ ತಕ್ಕ ಪ್ರತಿಫಲವನ್ನೂ ಕೊಡುವ ದಿನವೊಂದನ್ನು ನಿಗದಿಪಡಿಸಿರುವೆ.

ದಿವ್ಯವಾಣಿಯು ಹೈದ್ರೋಸ್‌ನ ನಾಡಿನರಗಳಲ್ಲಿ ಸಂಚರಿಸಿದಾಕ್ಷಣ ಅವನ ಶರೀರವಿಡಿ ಕಂಪಿಸತೊಡಗಿತ್ತು. 'ಪುದಿಯಾಪ್ಲೆ ಯಾಕೆ ಒಂಥರಾ ಇದ್ದೀರಿ?' ಎಂದು ಒಬ್ಬಾತ ತಟ್ಟಿ ಪ್ರಶ್ನಿಸಿದಾಗಲೇ ಹೈದ್ರೊಸ್ ವಾಸ್ತವಕ್ಕಿಳಿದಿದ್ದ.

ರಾತ್ರಿಯಾಗುತ್ತಾ ಬಂತು. ಹಬೆಯಾಡುತ್ತಿರುವ ಮಾಂಸ ಹಾಗೂ ಬಿರಿಯಾನಿಯ ಸುವಾಸನೆಯು ಮನೆಯಿಡೀ ಹಬ್ಬಿತ್ತು. 'ನೋಡಿ ಬಾವಾಕ... ಇವನ ಬಗ್ಗೆ ಏನು ತಪ್ಪು ತಿಳ್ಕೊಳ್ಬೇಡಿ. ಇವನ ಮೊದ್ಲ ಹೆಂಡ್ತಿ ನಾಲ್ಕೈದು ತಿಂಗಳ ಮುಂಚೆಯೇ ಎರಡು ಮಕ್ಕಳನ್ನು

ಬಿಟ್ಟು ಇಹಲೋಕ ತ್ಯಜಿಸಿದ್ದಾಳೆ!? ನೋಡಲು ಸ್ವಲ್ಪ ಪ್ರಾಯದಂತೆ ಕಾಣ್ಬಹುದು. ಆದರೆ ಇವನಿಗೆ ಅಷ್ಟೇನು ವಯಸ್ಸಾಗಿಲ್ಲ. ಒಂದು ನಲ್ವತ್ತು-ನಲ್ವತ್ತೈದರ ಸಂಖ್ಯೆಯೊಳಗಿನ ಒಂದರಲ್ಲಿ ನಿಲ್ಬಹುದು. ಹತ್ತು ವರ್ಷ ಕತ್ತಾರ್‌ನಲ್ಲಿ ಬೆನ್ನು ಬಗ್ಗಿಸಿ ದುಡಿದ ಶರೀರ ಇವನದು. ಅದಲ್ಲದೆ ನಿಮ್ಮ ಮಗಳನ್ನು ಇವನ ಮನೆಗೆ ಕಳಿಸಬೇಕೆಂದೇನಿಲ್ಲ. ಇವ ವಾರಕ್ಕೊಮ್ಮೆ ಬಂದು ಹೋಗ್ತಾನೆ. ನೀವೇನು ಹೆದರಬೇಡಿ, ನಿಮ್ಮ ಮಗಳಿಗೆ ಒಂದಿಷ್ಟು 'ಮುದ್ದೆ' ಹಾಕ್ಲಿಕ್ಕೆ ಇವನಿಗೇನೂ ಕಷ್ಟವಾಗದು. ಈಗ ಮಂಗಳೂರಿನ ಮಾರ್ಕೆಟ್‌ನಲ್ಲಿ ಕಟ್ಟು ಹೊರುತ್ತಾನೆ' ಎಂದು ಕಾಪುಂಞಿ ರಾಗವೆಳೆದ. ಅವ ಎಳೆದದ್ದು ಕಟ್ಟುಕತೆ ಎಂದು ಪಾಪ ಅವರಿಗಾದರೂ ಏನ್ಗೊತ್ತು? ಮುಂದೆ ಇಬ್ಬರೂ ನಾಲ್ಕು ದಿನಗಳವರೆಗೂ ಅಲ್ಲೇ ಭರ್ಜರಿ ಕೋಳಿ ತೊಡೆಯೊಂದಿಗೆ ಠಿಕಾಣಿ ಹೂಡಿದರು.

ನಾಲ್ಕೈದು ದಿವಸದ ನಂತರ ಹೈದ್ರೋಸ್ ತನ್ನ ಮನೆ ಸೇರಿದಾಗ ಎಲ್ಲರೂ ನಿಟ್ಟುಸಿರು ಬಿಟ್ಟರು. ಅನ್ನ, ನೀರು, ಬಿಲ್ಕುಲ್ ಮುಟ್ಟದೆ 'ಬಂದ್' ಆಚರಿಸಿದ್ದ ಪಾತುಮ್ಮ ಅಶಾಂತಿಯ ನಿದ್ದೆಯಿಂದ ದಡಕ್ಕನೆ ಎದ್ದು ಕೂತಳು. ಛೇ... ಅದೇ ಡ್ರೆಸ್ಸು. ಇವರಿಷ್ಟು ದಿನ ಎಲ್ಲಿಗೆ ಹೋದದ್ದು? 'ಒಳಗಿನ ಪರದೆಯನ್ನು ಸರಿಸಿ ಅಬ್ಬ'ನನ್ನು ದಿಟ್ಟಿಸುತ್ತಾ ಅಮೀನಾ ಸಂಶಯಗೊಂಡಳು. 'ಅಬ್ಬಾ ನೀವು ಎಲ್ಲಿಗೆ ಹೋದದ್ದು' ಎಂದು ಹದಿನೈದರ ಮುನೀರ್ ಪ್ರಶ್ನಿಸಿದಾಗ ಅಮೀನಾಳು ಸಂಪೂರ್ಣವಾಗಿ ಕಂಗೆಟ್ಟಿದ್ದಳು. ಮತ್ತೆ ಮತ್ತೆ ಮುನೀರ್ ಅದೇ ಪ್ರಶ್ನೆಯನ್ನು ಎಸೆದಾಗ ಮುಂಗೋಪಿ ಹೈದ್ರೋಸ್ 'ಬಾರಿ ಜೋರಾದೆಯಲ್ಲ ನೀನು? ಯಾರು ನಿನ್ನಲ್ಲಿ ಈ ರೀತಿ ಕೇಳಲಿಕ್ಕೆ ಹೇಳಿದ್ದು? ಉಮ್ಮವಾ?' ಎಂದು ಪ್ರಶ್ನಿಸಿ ಒಂದು ಬೆತ್ತ ಹುಡಿ ಮಾಡಿದ. ಮುಂದೆ ಒಂದೆರಡು ವಾರದವರೆಗೂ ಆ ಮನೆಯಲ್ಲಿ ಮೌನಕ್ರಾಂತಿ ನಡೆಯಿತು. ಪಾತುಮ್ಮಳು ಗಂಡನ ಮೇಲೆ ಸಂಶಯಗೊಂಡಿದ್ದರಿಂದ ತುದಿ ತುದಿಯಿಂದ ಮಾತನಾಡುತ್ತಿದ್ದಳು.

ಮತ್ತೆ ಒಂದು ವಾರದವರೆಗೂ ಕಾಣದಾದಾಗ ಆಚೆಮನೆಯವರ ಸಹಿತ ಎಲ್ಲರೂ ಅನುಮಾನಗೊಳ್ಳತೊಡಗಿದರು. ನೆರೆಮನೆಯ ಬೂಬ್ಬಾಗಳೆಲ್ಲಾ ಹೈದ್ರೋಸ್‌ನ ಬಗ್ಗೆ ಗುಸು ಗುಸು ಆರಂಭಿಸಿದ್ದರು. 'ಎಂತಾದು ಇವಳೇ... ಈಗ ಮುಟ್ಟಿದ್ದಕ್ಕೆ-ಹಿಡಿದಿದ್ದಕ್ಕೆ ಲೆಕ್ಕವಿಲ್ಲದಷ್ಟು ಕಾಸು ಖರ್ಚು ಮಾಡುವುದಂತೆ. ಅದಕ್ಕೆಲ್ಲಾ ಎಲ್ಲಿಂದ ಕಾಸು? ಎಲ್ಲೋ ಒಂದೆಡೆ ಮದ್ವೆಯಾಗಿ 'ಕಾಸಿ' ತೆಗೆದಿರಬೇಕು' ಎಂದು ಒಬ್ಬಳು ಹೇಳಿದಾಗ ಬಾವಿ ಬಳಿ ಸೇರಿದ ಬೂಬ್ಬಾಗಳೆಲ್ಲಾ ಚಕಿತಗೊಂಡು 'ಒಕ್ಕಾsss.... ಅನ್ನುತ್ತಾ ಪಿಳಿ ಪಿಳಿ ಕಣ್ಣು ಬಿಟ್ಟರು. ಮುಂದೆ ಒಂದು ದಿನ ಗಂಡ ಮನೆಗೆ ಬಂದು ಸೇರಿದಾಗ್ಲೇ ಪಾತುಮ್ಮ ತುಸು ಧೈರ್ಯ ತಂದು, ಮರೆಯ ಅಡ್ಡ ನಿಂತು ಅವಳಿಗೆ ಕೇಳಲೆಂದೇ 'ಆ ಸೂಳೆ ಬಸ್ಸಿನಡಿಗೆ ಬಿದ್ದು ಸತ್ತೆ ಹೋಗ್ಲಿ. ಆ ಬಿಕ್ನಾಸಿ ಹೆಣ್ಣು ನನ್ನ ಅದಾಬ್ ತೆಗೆಯಲಿಕ್ಕೆ ಹುಟ್ಟಿ ಬಂದಳಾ? ಬೇಕಾದರೆ... ನಂಗೆ ವಿಷ ಕೊಟ್ಮೇಲೆ ಇವರು ಅವಳನ್ನು ತಲೆಯಲ್ಲಿ ಹೊತ್ತು ತಿರುಗಾಡಬಹುದಿತ್ತಲ್ಲಾ?'

ಎನ್ನುತ್ತಾ ಒಂದೆರಡು ಬಾರಿ ನೆಲಕ್ಕೆ ಕೈ ಹೊಡೆದು ಶಪಿಸತೊಡಗಿದಳು.

ಕಾವುಂಞಿಯ ಹತ್ತಿರ ಸಂಬಂಧಿಕರು ಇತ್ತೀಚೆಗೆ ಅರಸ್ತಾನಕ್ಕೆ 'ಒಕ್ಕಲು' ಬಂದಿದ್ದರು. ಅವರ ಮನೆ ಇರುವುದೂ ಹೈದ್ರೋಸ್‌ನ ಮನೆಯ ಹತ್ತಿರವೇ... ಅವರೊಮ್ಮೆ ಕಾವುಂಞಿಯ ಮನೆಗೆ ಹೋದಾಗ 'ನೋಡು ಹಫ್ಸಾ... ನಿನ್ನ ಮನೆಯ ಹತ್ತಿರ ಆ ಹೈದ್ರೋಸ್ ಎಂಬವನಿದ್ದಾನಲ್ಲ ಅವನಿಗೆ ಮೊನ್ನೆ ಕೋಯಿಕ್ಕೋಡ್‌ನಿಂದ ಒಂದು... ಅಂತ ಹೇಳಿ ನಾಲ್ಕು ಹಲ್ಲು ತೋರಿಸಿದ್ದ. ಅದೇ ಮಾತನ್ನು ಹಫ್ಸಾ, ಇತ್ತೀಚೆಗೆ ಪಾತುಮ್ಮಳ ಮನೆಗೆ ಬಂದು ಮಾತಿನ ಮಧ್ಯೆಯೇ ಬೆರೆಸಿದ್ದಳು. ಹಫ್ಸಾ, ಈ ರೀತಿ ಒಗ್ಗರಣೆಯಿಟ್ಟು ರಾಗವೆಳೆದಾಗ ಪಾತುಮ್ಮಳಿಗೆ ನಿತ್ರಾಣವಾಗಿತ್ತು. ಅವಳು ಮನದಲ್ಲೇ ನೋವುಂಡು 'ಈ ಗಂಡಸರ ಕೆಲಸವೇ ಇಷ್ಟು' ಎನ್ನುತ್ತಾ ಸೆರಗನ್ನು ಕಣ್ಣಿಗೆ ಒರೆಸತೊಡಗಿಳು.

ಜಕಾರಿಯಾ ಸೇಠ್‌ರು ಶುಕ್ರವಾರದ ಜುಮ್ಮಾ ನಮಾಜು ಮುಗಿಸಿ ಇಪ್ಪತ್ತು ಹೆಜ್ಜೆಯನ್ನು ಹತ್ತಿರದ ಮೋನಾಕರ ಹೋಟೆಲಿಗೆ ಎಸೆದರು. ಮಸೀದಿಯ ಅಧ್ಯಕ್ಷರು 'ಆನೆ'ಯಂತೆ ಉರುಳುತ್ತಾ ತನ್ನ ಹೋಟೆಲಿಗೆ ಬರುತ್ತಿರುವುದನ್ನು ಕಂಡ ಮೋನಾಕ ತಾನು ಕ್ಯಾಶಿಯರ್‌ನಲ್ಲಿ ಕೂರುವ ಟಿಪಾಯ್ ಕುರ್ಚಿಯನ್ನು ಅವರಿಗೆ ಬಿಟ್ಟುಕೊಟ್ಟು, ಖಾಯಂ ಬಿರಿಯಾನಿಯನ್ನು ಮೇಜಿನ ಮೇಲೆ ತಂದಿಟ್ಟರು. ಮೋನಾಕ ಅವರಲ್ಲಿ ಅದೂ-ಇದೂ ಮಾತನಾಡುತ್ತಾ ಮಾತಿಗೆ ಕೊಟ್ಟು' ಮನದಲ್ಲೆ ಅವರು ತಿಂದದಕ್ಕೆ ಎಷ್ಟು ಹಣವಾಗುತ್ತದೆ ಎಂದು ಲೆಕ್ಕ ಹಾಕುತ್ತಿದ್ದರು. ತಿಂದು ತೇಗಿ ಕೈತೊಳೆದ ನಂತರ ಅಲ್-ಹಮ್ದುಲಿಲ್ಲಾಹ್, ಒಂದತ್ತು ಖಾಲಿ ಚಾ ಅರೆಬಿಕ್ ಮದ್ರಸಕ್ಕೆ ಕಳಿಸಿಕೊಡು ಎಂದು ಸೇಠ್‌ರು ತೇಗು ಬಿಟ್ಟಾಗ 'ನಿಮ್ಮ ಲೆಕ್ಕಕ್ಕಾ?' ಎಂದು ಪ್ರಶ್ನಿಸಲು ಮೋನಾಕ ಮರೆಯಲಿಲ್ಲ.

ಈಗಾಗಲೇ ಮಸೀದಿಯ ಆಡಳಿತ ಸಮಿತಿಯ ಸದಸ್ಯರೆಲ್ಲಾ ತಮ್ಮ ತಮ್ಮ ಕುರ್ಚಿಯಲ್ಲಿ ಕೂತು ಸೇಠ್‌ರನ್ನು ಎದುರು ನೋಡುತ್ತಿದ್ದರು. ಮುಂದೆ 'ಸೇಠ್'ರು ಬಂದು ತನ್ನ ಚೆತ್ತದ ಕುರ್ಚಿಯಲ್ಲಿ ಒರಗಿ ಕೂತಾಗ ಅಲ್ಲೇ ಮೂಲೆಗೆ ಸೇರಿದ್ದ ಕಾರ್ಯದರ್ಶಿ ಎದ್ದು ನಿಂತು 'ಮುಂದಿನ ತಿಂಗಳ ಉರೂಸ್ ಆಚರಿಸುವ ಬಗ್ಗೆ ಮತ್ತು ಅದಕ್ಕಾಗಿ 'ಸ್ವಾಗತ ಸಮಿತಿ'ಯನ್ನು ಕಟ್ಟುವ ಬಗ್ಗೆ' ಎಂದಾಗ ಸೇಠರು ಸೇರಿದ್ದ ಸದಸ್ಯರೆಲ್ಲರ ಅಭಿಪ್ರಾಯಗಳನ್ನು ಸಂಗ್ರಹಿಸತೊಡಗಿದರು. 'ನೋಡಿ... ಸ್ವಾಗತ ಸಮಿತಿಯನ್ನು ಈಗ ಬೇಕಾದರೆ ಕಟ್ಟುವಾ... ಆದರೆ ಬರುವ ತಿಂಗಳು ಉರೂಸ್ ಮಾಡದೆ, ಎರಡು ತಿಂಗಳ ನಂತರ ಮಾಡುವ ಏರ್ಪಾಡು ಮಾಡುವಾ... ಯಾಕೆಂದರೆ ನಮ್ಮ ಮಕ್ಕಳಿಗೆ 'ಧಫ್' ಕಲಿಸಿ ಉರೂಸ್‌ನ್ನು ಇನ್ನಷ್ಟು ವಿಜ್ರಂಭಣೆಯಿಂದ ಆಚರಿಸುವಾ... ನಮ್ಮ ಊರಲ್ಲಿನ ಹತ್ತು - ಹದಿನೈದು ವರ್ಷದ ಹುಡುಗರ ಹೆಸರನ್ನೆಲ್ಲಾ ಪಟ್ಟಿ ಮಾಡಿ, ಸೂಕ್ತ ದಫ್ ಉಸ್ತಾದ್‌ನ್ನು ಇಲ್ಲಿ ತಂದು ಹಾಕಿ ಒಂದು ತಿಂಗಳವರೆಗೂ ತರಬೇತಿ ನೀಡಬೇಕು. ಅದಲ್ಲದಿದ್ದರೆ ಈಗಿನ ನಮ್ಮ ಮಕ್ಕಳನ್ನು ನೇರ ದಾರಿಗೆ ತರಲು ಸಾಧ್ಯವೇ ಇಲ್ಲ ಎಂತಾದ್ದು... ಮಸೀದಿಯ ಬಳಿ ಹಾದು ಹೋಗುವಾಗ

ಬಾಂಗ್ ಕೇಳಿದರೆ 'ತುರ್ಕ' ಅಂತ ಓಡಿ ಹೋಗುವುದಾ....? ಈಗಾಗಲೆ ಮಕ್ಕಳೆಲ್ಲಾ ದುರ್ಮಾರ್ಗದಲ್ಲಿ ಮುಳುಗಿದ್ದಾರೆ. ಒಂದು ತಿಂಗಳು ನೋಂಬು ಹಿಡಿಯುವುದಂತೆ. ಪೆರ್ನಾಳಿನಂದು ಸೀದಾ ಟಾಕೀಸಿಗೆ ಹೋಗಿ ಪಿಕ್ಚರ್ ನೋಡುವುದಂತೆ... ಎಲ್ಲಿದೆ ದೀನ್? ನಮ್ಮ ಈಗಿನ ಮಕ್ಕಳ ಸಂಸ್ಕೃತಿ ನೋಡಿ... ತಲೆಗೂದಲಿನ ಜುಟ್ಟು ಬಿಟ್ಟು, ಒಂದು ಪ್ಯಾಂಟು ಶೂ ಸಿಕ್ಕಿಸಿ, ನೋಡದ ಜಾಗವಿಲ್ಲ. ಹತ್ತು ಮಲಕ್‌ಗಳ ಹೆಸರನ್ನು ಹೇಳಿದರೆ ಪಿಳಿಪಿಳಿ ಕಣ್ಣು ಬಿಟ್ಟಾರು? ಆದರೆ ಕಪಿಲ್, ಬೂನ್, ಅಜರ್, ಅಮಿತಾಬ್, ಶಾರೂಕ್, ಅಮೀರ್‌ಖಾನ್... ಮುಂತಾದವರ ಹೆಸರನ್ನು ಬಾಯಿಪಾಠ ಮಾಡಿಟ್ಟು ಕೊಂಡಾರು. ಇವರೆಲ್ಲಾ ಯಾರೆಂದು ಸ್ವತಃ ನಮಗೆ ಗೊತ್ತುಂಟಾ? ನಮ್ಗೆ ಗೊತ್ತಿಲ್ಲದ್ದು ಅವರಿಗೆ ಹೇಗೆ ಗೊತ್ತಾಗ್ತದೆ? ನಮ್ಮ ಸಡಿಲಿಕೆಯಿಂದಲ್ಲಾ? ನೋಡಿ ನಾನು ಶಾಲಾ ಕಾಲೇಜಿಗೆ ನಮ್ಮ ಮಕ್ಕಳನ್ನು ಕಳಿಸದೆ, ಮದ್ರಸ, ದರ್ಸ್‌ಗೆ ಮಾತ್ರ ಕಳಿಸಬೇಕೆಂದು ಹೇಳುವುದಿಲ್ಲ. ನಾವು ಈ ಲೋಕದಲ್ಲಿ ಈಜಾಡಿ ಜಯಿಸಬೇಕಾದರೆ ಎರಡು ದೋಣಿಗೂ ಕಾಲಿಡಬೇಕು. ಅಂದರೆ ನಮ್ಮ ಮಕ್ಕಳಿಗೆ ಪ್ರಾಥಮಿಕ ವಿದ್ಯಾಭ್ಯಾಸವು ಊರಲ್ಲೇ ದೊರಕುತ್ತಿದೆಯಲ್ಲಾ..? ಒಂದು ಮನೆಯಲ್ಲಿ ಎರಡು ಮಂದಿ ಗಂಡು ಮಕ್ಕಳಿದ್ದರೆ ಒಬ್ಬರನ್ನು ಕೇರಳದ ದರ್ಸ್‌ಗೂ ಇನ್ನೊಬ್ಬನನ್ನು ಉಳ್ಳಾಲದ ಅಥವಾ ಮಂಗಳೂರಿನ ಹೈಸ್ಕೂಲಿಗೆ ಕಳಿಸಿದರೆ ನಾವು ಹುಟ್ಟಿಸಿದ್ದಕ್ಕೆ ಸಾರ್ಥಕವಾದೀತು ಎನ್ನುತ್ತಾ ಸೇಠರು ನಿಟ್ಟುಸಿರು ಬಿಟ್ಟರು. ಮುಂದೆ ಊರೂಸ್ ಸ್ವಾಗತ ಸಮಿತಿಯನ್ನು ರಚಿಸುವ ಬಗ್ಗೆ ಹಾಗೂ ದಫ್ ಉಸ್ತಾದರನ್ನು ಕರೆತರುವ ಬಗ್ಗೆ ಸಂಪೂರ್ಣ ಅಧಿಕಾರವನ್ನು ಸೇಠ್‌ರವರಿಗೆ ನೀಡಲಾಯಿತು. ಮುಂದೆ ಸೇಠ್‌ರು ಸಭೆಗೆ ಹಾಜರಾದ ಹಾಗೂ ಹಾಜರಾಗದವರ ಸಹಿತ ಒಂಭತ್ತು ಮಂದಿ ಸದಸ್ಯರನ್ನು ಆಯ್ಕೆ ಮಾಡಿ, ಕೊನೆಯ ಒಂದು ಸದಸ್ಯನನ್ನಾಗಿ ಹೈದ್ರೋಸ್‌ನನ್ನು ಸೇರಿಸುವ ಬಗ್ಗೆ ವಾದ ವಿವಾದಗಳೇ ಶುರುವಾಯ್ತು. 'ಎಂತದ್ದು ಅವ ಬೇಡವೇ ಬೇಡ... ಮೊನ್ನೆ ಕೇರಳಕ್ಕೆ ಹೋಗಿ ಒಂದು ಮದ್ವೆಯಾಗಿದ್ದಾನಂತೆ. ಇದರಿಂದ ಅವನ ಮೊದ್ಲ ಹೆಂಡತಿಯ ಅವಸ್ಥೆ ಹೇಳತೀರದು. ಅದು ಬಿಡಿ, ಅವ ಒಂದೇ ಒಂದು ಬಾರಿ ಮಸೀದಿಗೆ ಕಾಲಿಟ್ಟಿದ್ದಾನ?' ಎಂದು ಚಾಯಬ್ಬ ತನ್ನ ಅಸಮಾಧಾನ ಸೂಚಿಸಿದಾಗ ನೋಡಿ ಅವ ಬೇಡ ಅಂದ್ರೆ ಆಗದು. ಮಸೀದಿಗೆ ಈಗ ಕಾಲಿಡದಿದ್ದರೂ ಅವನ ಮೈಯತ್‌ನ್ನು ಕೊನೆಗಾದರೂ ನಾವು ತರ್‍ಲಿಕ್ಕುಂಟಲ್ಲಾ... ಆ ನೆನಪಿದ್ದರೆ ಜೀವ ಇದ್ದಾಗ ಒಮ್ಮೆಯಾದರೂ ಬರಬಹುದು. ಅವನೀಗ ದುರ್ಮಾರ್ಗದಲ್ಲಿದ್ದರೂ ಅವನನ್ನು ಸನ್ಮಾರ್ಗಕ್ಕೆ ತರುವ ಹೊಣೆ, ಕರ್ತವ್ಯ ನಮ್ಮದಲ್ಲವಾ? ಅಂತಹವರನ್ನು ಹತ್ತಿರಕ್ಕೆ ಕರೆತಂದು ಒಂದೊಂದು 'ಸ್ಥಾನ ಕೊಟ್ಟರೆ ಒಳ್ಳೆಯದಕ್ಕೆ ಬಂದಾರು' ಎಂದು ಸೇಠ್‌ರು ಅಂದಾಗ ಎಲ್ಲರೂ ಅದಕ್ಕೆ ಸಮ್ಮತಿಸಿದರು.

ಮುಂದೆ ಎಲ್ಲರೂ ಸಭೆಯಿಂದ ನಿರ್ಗಮಿಸುವಷ್ಟರಲ್ಲಿ ಅಲ್ಲೇ ದಾರಂದ ಬಳಿ ನಿಂತ 'ಗಂಗಾಧರ' ಒಳಗೆ ಬರ್‍ಲಾ? ಅಂತ ಪ್ರಶ್ನಿಸಿದಾಗ ಸೇಠ್‌ರು 'ಏನು ಬಾ...' ಅನ್ನುತ್ತಾ

ಕಣ್ಣಿನಿಂದಲೆ ಒಳಗೆ ಕರೆದರು. 'ನೋಡಿ ಇವರೆ? ನೀವೆಲ್ಲಾ ಇರುವಾಗ ನನಗೆ ಇದರ ಅಗತ್ಯವಿರಲಿಲ್ಲ. ಆದರೆ ಅವಳ ಅವಸ್ಥೆ ನೋಡಿ ನನ್ನ ಮನಸ್ಸು ತಡೆಯಲಿಲ್ಲ. ನೆರೆಕರೆಯಾದ ಮೇಲೆ ಇಷ್ಟು ಉಪಕಾರ ಮಾಡದಿದ್ದರೆ ಕಂಡವರು ಏನು ಹೇಳಿಯಾರು? ಅದೇನೆಂದರೆ... ನನ್ನ ಮನೆಯ ಹತ್ತಿರ ಆ ಪಾತುಮ್ಮಾ ಇದ್ದಾಳಲ್ಲಾ? ಅವಳ ಗಂಡ ಹೈದ್ರೋಸ್ ಕೊಯಿಕ್ಕೋಡ್‌ನಲ್ಲಿ ಮದ್ವೆ ಆಗಿದ್ದಾನಂತೆ. ಅಂದಿನಿಂದ ಅವಳು ಬಾವಿಗೆ ಹಾರಿಯೋ, ಬಸ್ಸಿನಿಂದ ಬಿದ್ದೋ, ಆತ್ಮಹತ್ಯೆ ಮಾಡ್ತೇನೆಂತ ತನ್ನ ಮಕ್ಕಳಲ್ಲಿ ಹೇಳಿ ಹೋಗ್ತಾಳಂತೆ ಪಾಪ... ಆ ಮಕ್ಕಳು ಓಡಿ ಬರುವುದು ನನ್ನ ಬಳಿಗೆ. ನಾನೇ ನಾಲ್ಕೈದು ಬಾರಿ ಹಿಡಿದು ಬುದ್ಧಿ ಮಾತು ನುಡಿದೆ. ಆದರೆ ಅವಳ ಹಟವೇ ಮಿಗಿಲಾಗಿದೆ ನಾಳೆ ಏನಾದರೂ ಅದರೆ ಖಾಕಿಧಾರಿಗಳು ಬಂದು ನಿಲ್ಲುವುದು ನನ್ನ ಮನೆಯಂಗಳದಲ್ಲಿ ಅಲ್ಲವಾ? ಎಂದು ತನ್ನ ಅಸಮಾಧಾನವನ್ನು ಗಂಗಾಧರ ವ್ಯಕ್ತಪಡಿಸಿದಾಗ 'ಕೆಳಗಿನಕರೆ ಚಾಯಬ್ಬ' ತನ್ನ ಮೂರು ಹಳದಿ ಹಲ್ಲನ್ನು ಬಿಡತೊಡಗಿದರು. ನೋಡು ಗಂಗಾಧರ ಆ ಹೈದ್ರೋಸ್‌ನನ್ನು ಒಮ್ಮೆ ಸಿಗ್ಲಿಕ್ಕೆಳು ಅನ್ನುತ್ತಾ ಅಧ್ಯಕ್ಷರು ಹೊರಗಿಳಿದರು.

ಸೇಠರು ತನ್ನ ಮನೆ ಸೇರಿದಾಗ ರಾತ್ರಿ ಒಂಬತ್ತು ಹೊಡೆಯುತ್ತಿತ್ತು. ಊಟ ಮಾತುಕತೆ ನಡುವೆ ಸೇಠ್‌ರ ಹೆಂಡ್ತಿ ಜೈನಾಬಿ 'ನೋಡಿ ಆ ಪಾತುಮ್ಮಾ ಬಂದಿದ್ದಳು. ಅವಳ ಕೂಗು ಕೇಳಿದರೆ ಎಂತವರಿಗೂ ತಡೆಯಲಾಗದು. ಆ 'ಪೋರ' ಒಂದು ಮದ್ವೆಯಾಗಿದ್ದಾನಂತೆ. ನೀವು ಆ ಹೈದ್ರೋಸ್‌ನನ್ನೂ ಆ ಪಾತುಮ್ಮಾಳನ್ನು ಕಂಡು ಮಾತಾಡಿ' ಎನ್ನುತ್ತಾ ಹೆಣ್ಣಿನ ನೋವನ್ನು ಹೊರಗೆಡಹಿದಳು.

ಮುಂದಿನ ಎರಡು ದಿನಗಳಲ್ಲಿ ಸೇಠ್‌ರು ಒಂದು ರಾತ್ರಿಯನ್ನು ಗೊತ್ತುಪಡಿಸಿ ಪಾವೂರು ಪಂಚಾಯತಿ ಸದಸ್ಯ ಅಬ್ದುಲ್ಲ, ಸ್ಥಳೀಯ ಕಮಿಟಿಯ ಕಾಯದರ್ಶಿ ಸೇಕುಂಞಿ, ಊರಿನ ಶಾಲೆ ಅಧ್ಯಾಪಕರಾದ 'ಬಾಬು ಮೇಷ್ಟು'ಗಳನ್ನೊಳಗೊಂಡ ಒಂದು ದಂಡನ್ನು ಪಾತುಮ್ಮಳ ಮನೆಗೆ ಕರೆದೊಯ್ದರು. ಅಲ್ಲೇ ಬೆಂಚಿನ ಮೇಲೆ ಕುಕ್ಕುರ ಗಾಲಲ್ಲಿ ಕೂತು, ಬೀಡಿ ಸೇದುತ್ತಾ ಮುಖಕ್ಕೆ ಕೈ ಹೊತ್ತು ಹೈದ್ರೋಸ್ ಕೂತಿದ್ದ. ಮುಖ, ಕೆಂಪಗಾದ ಕಣ್ಣು, ಬಾಚದ ತಲೆಗೂದಲು ನೂರಾರು ತೂತಿನ ಸ್ಯಾಂಡಿನ ಬನಿಯನ್ ಧರಿಸಿ ತಲೆ ಬಿಸಿ ಮಾಡುತ್ತಿದ್ದ. ಪಾತುಮ್ಮಾ, ಅಮೀನಾ, ಮುನೀರ್ ಒಳ ರೂಮೊಂದರಲ್ಲಿ ಕೂತು ಗಾಢ ಮೌನ ಆವರಿಸುವಂತೆ ಮಾಡಿದ್ದರು.

ಏನು ಇವನೇ? ನಿನ್ನ ಅವಸ್ಥೆ ಎಂತಾದ್ದು? ನಾಲ್ಕು ಜನರಿಗೆ ಬುದ್ಧಿ ಹೇಳಬೇಕಾದ ವಯಸ್ಸಿನಲ್ಲಿ ಹೀಗೇಕೆ ಮಾಡುವೆ? ಬೆಳೆದ ಹೆಣ್ಣಿನ ಜ್ಞಾಪಕ ನಿನಗಿಲ್ವಾ? ಕಾಸಿನ ಆಸೆಗಾಗಿ ನೀನವಳನ್ನು ಗುಂಡಿಗೆಸೆದೆಯಲ್ಲಾ? ಅದೇನು ಕಾಸನ್ನು ನಾವು ಹೋಗುವಾಗ ಕೊಂಡೋಗ್ತೇವಾ? ಸೇಠ್‌ರು ಘರ್ಜಿಸಿದರು.

'ಸುಮ್ನೆ ಕೂರಬೇಡ, ಏನಾದರೊಂದು ಹೇಳು ರಾಜಿ ಪಂಚಾತಿಗೆಯಲ್ಲಿ ಮುಗಿಸುವಾ?

ಅಥವಾ ನಾಳೆ ಅವಳು ಸ್ಟೇಷನ್‌ಗೆ ಹೋಗಿ ಕೇಸು ಕೊಟ್ಟರೆ ನಿನಗೆ ಚಂದ ಕಾಣ್ತದಾ? ಸೇಠ್‌ರು ಪುನಃ ಅಬ್ಬರಿಸಿದರು.

'ಅಲ್ಲಾ ನಮಗೆ ನಾಲ್ಕು ಮದುವೆ'

'ಹೌದಾ ಇವನೇ... ಒಂದಲ್ಲ, ನಾಲ್ಕು ಬೇಕಾದ್ರೆ ಆಗಬಹುದು. ಯಾರಿಗೆ ಗೊತ್ತಾ? ತನ್ನ ಹೆಂಡತಿಯನ್ನು ಸಮಾನ ರಿತಿಯಲ್ಲಿ ನೋಡುವವರಿಗೆ ಮಾತ್ರ. ಪ್ರೀತಿ, ಬಟ್ಟೆ ಬರೆ, ತಿಂಡಿ ತಿನಿಸು ಹೀಗೆ ಒಂದು ಹೆಂಡ್ತಿಯ ಮೇಲೆ ತನ್ನ ಕರ್ತವ್ಯವನ್ನು ಹೇಗೆ ಪೂರೈಸುತ್ತಿಯೋ? ಅದೇ ರೀತಿ ಉಳಿದವರಿಗೂ ಮಾಡಬೇಕು. ಅದರೆ ನಿನಗದು ಸಾಧ್ಯ ಉಂಟಾ? ಅದಿರಲಿ ನಿನ್ನ ಹೆಂಡ್ತಿ ಏನು ರೋಗ ಹಿಡಿದು ಹಾಸಿಗೆ ಹಿಡಿದಿದ್ದಾಳಾ? ನಿನ್ನಂತೆಯೇ ಇವಳು ಕೂಡಾ ಇನ್ನೊಬ್ಬನನ್ನು ವರಿಸಿದರೆ ನೀ ಸಹಿಸಿಕೊಳ್ತಿಯಾ? ಸೇಠ್‌ರು ಅವನ ಮನವನ್ನು ತಳಮಳಗೊಳಿಸಿದರು.

ಪಾತುಮ್ಮಾ ಕಿಟಕಿಯ ಪರದೆ ಸರಿಸಿ ಇಣುಕಿ ಅವಳಿಗೆ ತಲಾಖ್ ಕೊಡಲಿ ಎನ್ನುತ್ತಾ ತನ್ನನ್ನು ತಾನೇ ಮರೆತಳು 'ಛೇ... ನೀವು ಹಾಗೆ ಹೇಳಿದರೆ ಹೇಗೆ? ನೀವೂ ಹೆಂಡ್ತಿಯಲ್ಲಾ? ನಿಮಗೆ ಈ ಮನೆಯಲ್ಲಿ ಜೊತೆಗಿದ್ದೂ ಅಕ್ಕ-ತಂಗಿಯಂತಿದ್ದರೆ...' ಸೇಕುಂಞಿ ಅತ್ತಿತ್ತ ಕಣ್ಣು ಹಾಯಿಸಿದ ನೋಡಿ ತಾಯಿ, ದುಡುಕಬೇಡಿ... ನಿಧಾನವಾಗಿ ಯೋಚಿಸಿರಿ. ನೀವು ನಮ್ಮ ಮುನೀರ್‌ನ ಉಮ್ಮ ಅಲ್ವಾ? ಅವನಂತೆ ನೀವೂ ಕೂಡಾ 'ಮೆತ್ತಗೆ' ಎಂದು ಭಾವಿಸುವ ಆ ಹುಡುಗಿಗೆ ತಲಾಖ್ ಕೊಟ್ಟರೆ ಹೇಗೆ? ನಿಮ್ಮಂತೆ ಅವಳೂ ಕೂಡಾ ಒಂದು ಹೆಣ್ಣು, ಹೆಂಡತಿ ಅಲ್ವಾ? ನೀವು ಹೀಗೆ ಗಟ್ಟಿ ಮಾಡಿಕೊಂಡರೆ ಕೋರ್ಟು ಇವರನ್ನು ಜೈಲಿಗೆ ಹಾಕಿಸಬಹುದು. ಮತ್ತೆ ಇಬ್ಬರಿಗೂ ಗಂಡನಿಲ್ಲದಂತಾಗುತ್ತದೆ. ಬಾಬು ಮೇಷ್ಟ್ರು ಮೆತ್ತಗೆ ಕಾನೂನು ಮಾತನಾಡಿದಂತೆ ಅರ್ಧ ಬ್ಯಾರಿ ಭಾಷೆ ಹಾಗೂ ಕನ್ನಡದಲ್ಲಿ ಗೊಣಗಿದರು.

'ಅದಿರಲಿ ಇವನೇ... ನೀ ಅವಳನ್ನು ಕಟ್ಟಿಕೊಂಡ ಉದ್ದೇಶವಾದರೂ ಏನು? ಸೇಠ್‌ರು ತುಟಿ ಎತ್ತಿದಾಗ' ನೋಡಿ ಕಾಕಾ... ನಾನು ಒಂದು ಮದ್ವೆಯಾದರೆ ಅಮೀನಾಳನ್ನು ಹೊರಗೆ ಕಳುಹಿಸಬಹುದೆಂದು ಭಾವಿಸಿದೆ. ಹಾಗೆ ಮದ್ವೆಯಾಗಿ, ಅವರು ಕೈ ತುಂಬಾ ಕಾಸಿ-ಬಂಗಾರು ಕೊಟ್ಟರು. ಆದರೆ ಮದ್ವೆಯಾದ ನಂತರ ಇಲ್ಲಿಯ ಪರಿಸ್ಥಿತಿ ನೋಡಿ ನಾನು ಕಂಗಾಲಾದೆ. ಆ ಮಂಡೆ ಬಿಸಿಯಲ್ಲಿ ಅವರು ಕೊಟ್ಟ ಕಾಸು ಖರ್ಚಾದುದು ಗೊತ್ತೇ ಆಗಿಲ್ಲ. ಮತ್ತೆ ನಾನೀಗ ಅವಳಿಗೆ ತಲಾಖ್ ಕೊಡಬೇಕಾದರೆ, ಅವಳ ಮೆಹರಿನ ಹಣ, ಅವರು ಕೊಟ್ಟ ಇಪ್ಪತ್ತು ಸಾವಿರ ಮತ್ತೆ ಅವಳ ಕಿವಿಯಲ್ಲಿದ್ದ ಎರಡು ಪವನು ಅಲಿಖಾತನ್ನು ನಾನು ತೆಗೆದಿದ್ದೇನೆ. ಈಗ ನನ್ನಲ್ಲಿರುವುದು ಈ ಒಂದು ವಾಚು ಮಾತ್ರ. ಈಗ ಅದನ್ನೆಲ್ಲಾ ಕೊಡ್ಲಿಕ್ಕೆ ನನ್ನಲ್ಲಿ ಹಣವೆಲ್ಲಿದೆ? ಅದಕ್ಕೆ ಇವಳಲ್ಲಿರುವ ಜೋಲಾರ್‌ನ್ನೆಲ್ಲಾ ಕೊಟ್ಟರೆ' ಎನ್ನುತ್ತಾ ಹೈದ್ರೋಸ್ ಅಡಿ ತಲೆ ಹಾಕಿದ.

ಇಷ್ಟರವರೆಗೂ ಎಂತಹದನ್ನಾದರೂ ಗಟ್ಟಿ ಮನಸ್ಸಿನಿಂದ ಎದುರಿಸುತ್ತಿದ್ದ ಸೇಠ್‌ರು ಈಗ ಸಂಪೂರ್ಣ ಗಲಿಬಿಲಿಗೊಂಡು ಮಾತಿಗಾಗಿ ತಡಕಾಡಿದರು. ಸುಮಾರು ಅರ್ಧ ರಾತ್ರಿಯಾಗುವವರೆಗೂ ಯಾವುದೇ ಸೂಕ್ತ ತೀರ್ಮಾನ ಕೈಗೊಳ್ಳಲಾರದೆ 'ನೋಡುವಾ ಹೊರ ಊರಿನ ಮುಂದಾಳುಗಳನ್ನು ತಂದು ಪಂಚಾಯತಿಗೆ ನಡೆಸುವಾ?' ಎನ್ನುತ್ತಾ ಸೇಠ್‌ರು ಪಾತುಮ್ಮಳಿಗೆ ನೂರಾರು ಬುದ್ಧಿಮಾತು ಸಲಹೆ ಸಮಾಧಾನ ನೀಡಿ ಹೊರಬಂದರು.

ಅವರು ಇಳಿದು ಹೋದಂತೆಯೇ ಹೈದ್ರೋಸ್ ಕೂಡಾ ಇಳಿದು ಹೋದುದನ್ನು ಪಾತುಮ್ಮಾ ಕಿಟಕಿಯಿಂದ ಇಣುಕಿ ನೋಡಿದಳು. ಮಕ್ಕಳಿಬ್ಬರೂ ಗಾಢ ನಿದ್ರೆಯಲ್ಲಿ ಮುಳುಗಿದ್ದರು. ಸುಮಾರು ರಾತ್ರಿಯವರೆಗೂ ಪಾತುಮ್ಮ ಅರೆ ನಿದ್ರೆಯೊಂದಿಗೆ ಗಂಡ ಎಲ್ಲಿಗೆ ಹೊದದ್ದು? ಯಾವಾಗ ಬಂದಾರು? ಎನ್ನುತ್ತಾ ಕಾದು ಕೂತಳು. ಮುಂದೆ ನಾಯಿ ಬೊಗಳುವುದು, ಗಡಿಯಾರ ಮೂರು ಹೊಡೆದುದು, ಆವಾಗಲೇ ಗಂಡ 'ಪಾತ್ಮ... ಪಾತ್ಮ...' ಎಂದು ಕರೆಯುತ್ತಿರುವುದನ್ನು ಕೇಳಿದ ಪಾತುಮ್ಮ ಎಚ್ಚೆತ್ತು ಮೆಲ್ಲನೆ ಬಾಗಿಲು ತೆಗೆದು ಮಾತನಾಡದೆ ಹಾಗೆ ಹಾಸಿಗೆಯಲ್ಲಿ ಬಿದ್ದುಕೊಂಡಳು. ನಿದ್ದೆ ಹತ್ತುತ್ತಿದ್ದಂತೆ ಗಂಡ ಯಾರೊಡನೆಯೋ ಗುಸು ಗುಸು ಮಾತನಾಡುವುದು ಕೇಳಿಸಿತು. ಅಸ್ಪಷ್ಟ ಮಾತು. ಅದರೆ ಇತರರಿಬ್ಬರಿದ್ದಾರೆಂಬುದನ್ನು ಖಚಿತ ಪಡಿಸಿಕೊಂಡಳು. ಕಣ್ಣು ಬಿಡುತ್ತಿಲ್ಲ... ನಿದ್ರೆಯ ಮಂಪರು. ಗಂಡ ರೂಮಿನೊಳ ಹೊಕ್ಕು ಚಿಲಕ ಹಾಕಿ ಲೈಟ್ ಆನ್ ಮಾಡಿದುದರ ಅನುಭವವಾಯ್ತು.

'ಏ ಮುಂಡೆ... ಏಳು.... ಎದ್ದು ಕೂರು....' ಗಂಡನು ತನ್ನಲ್ಲಿ ಹೇಳುತ್ತಿರುವಂತೆ ಕೇಳಿಸಿತು. ಹಾಗೆ ಎದ್ದು ಕೂತು ಗಂಡನನ್ನೇ ದುರುಗುಟ್ಟಿದಳು. ಅಸ್ಪಷ್ಟ ದೊಡ್ಡ ಸ್ವರದಲ್ಲಿ 'ಬಿಂಗ್ರಿ ಬಿಂಗ್ರಿಯಾಗಿ ಆಡುವ ಮಾತು, ನಾಲಿಗೆ ಒಂದೇ ಸವನೇ ಅಡ್ಡ ಹಾಕುತ್ತಿತ್ತು, ಕಣ್ಣು ಕೆಂಪಾಗಿತ್ತು. ಹಾಗೇ ಅವ ಹತ್ತಿರವಾದಾಗ ದುರ್ನಾತ ಬೀರಿದುದನ್ನು ಅರಿತ ಪಾತುಮ್ಮ ಏನು ನೀವು ಕುಡಿದು ಬಂದದ್ದಾ? ಎಂದು ಪ್ರಶ್ನಿಸಿದಳು. 'ಹೌದು ಮುಂಡೆ, ನಾನು ಕುಡಿದೇ ಬಂದಿಲ್ಲ... ಜೊತೆಗೆ ಕಡಿಯಲು ಬಂದಿರುವೆ. ನೀನ್ಯಾಕೆ ನನ್ನ ಮಾನಮರ್ಯಾದೆ ತೆಗೆಯಲು ಹೊರಟೆ! ಅವಳನ್ನು ನಾನು ಕಟ್ಟಿಕೊಂಡರೂ ನಿನಗೆ ಯಾವುದರಲ್ಲಿ ಕಮ್ಮಿ ಮಾಡಿದೆ? ಆ ಕಳ್ಳ ಸೇಠ್ ನಿನ್ನ ಅಪ್ಪನಾ? ಅಲ್ಲಾ ನಿನ್ನ ಗಂಡನಾ? ಹೇಳು' ಎನ್ನುತ್ತಾ ಹೈದ್ರೋಸ್ ಚೂಪಾದ ಚಾಕು ತೋರಿಸಿದಾಗ ಎಚ್ಚೆತ್ತ ಪಾತ್ಮಾಬಿ ಅವನನ್ನು ಅತ್ತ ಬಲವಾಗಿ ದೂಡಿ ಚಾಕು ತೆಗೆದು ಕಿಟಕಿಯಿಂದ ಹೊರ ಬಿಸಾಡಿ ರೂಮಿನ ಚಿಲಕ ತೆಗೆದು ಹೊರ ಹೋಗುವಷ್ಟರಲ್ಲಿ ಹೈದ್ರೋಸ್ ಅವಳ ಜುಟ್ಟನ್ನು ಬಲವಾಗಿ ಹಿಡಿದೆಳೆದು 'ಕೊಡು ಇದ್ದ ಬಂಗಾರು ಎಲ್ಲಾ ಕೊಡು' ಎಂದಾಗ 'ಇಲ್ಲಾ ನಾನು ಕೊಡಲಾರೆ. ಇದು ನಾನೇ ಬೀಡಿಕಟ್ಟಿ ಕೂಡಿಟ್ಟ ಪೈಸೆಯಿಂದ ತೆಗೆದದ್ದು, ನಾ ಕೊಡಲಾರೆ, ನನ್ನ ಜೀವ ಇರುವವರೆಗೂ ಕೊಡಲಾರೆ ಎನ್ನುವಷ್ಟರಲ್ಲಿ ಕಿವಿಯಲ್ಲಿ ನೇತಾಡುತ್ತಿರುವ ಏಳೆಂಟು ಅಲಿಖಾತನ್ನು ತೆಗೆಯಲು

ಕಿವಿಯತ್ತ ಕೈ ಕೊಂಡೋಗಿ ಬಲವಾಗಿ ಹಿಡಿದೆಳೆದಾಗ ಒಂದೆರಡು ಅಲಿಖಾತು ತನ್ನ ಕೈಯಲ್ಲಿ ಬಂದಿತ್ತು. ರಕ್ತ ಧಾರಾಕಾರವಾಗಿ ಇಳಿಯತೊಡಗಿತ್ತು. ಪಾತುಮ್ಮಾ ನೋವು ತಾಳಲಾರದೆ ಕಿಟಾರನೆ ಕಿರುಚಿ ದೊಪ್ಪಗೆ ನೆಲದಲ್ಲಿ ಬಿದ್ದಳು. ಇನ್ನೇನು ಪ್ರಾಣವೇ ಹೋಯಿತೆಂದು ಹೆದರಿದ ಹೈದ್ರೋಸ್ ಅವಳನ್ನು ಮೆಲ್ಲಗೆ ಮುಟ್ಟಿ ನೋಡಿದಾಗ ಇನ್ನು ದಮ್ಮು ಎಳೆಯುತ್ತಿತ್ತು. ಇನ್ನು ಇವಳು ಬದುಕುಳಿದರೆ ತನ್ನ ಪ್ರಾಣಕ್ಕೆ ಕುತ್ತು ಎಂದು ಭಾವಿಸಿದ ಹೈದ್ರೋಸ್ ಅವಳು 'ದಮ್ಮೇ' ಎಳೆಯದಿರಲಿ ಎನ್ನುತ್ತಾ ಅಲ್ಲೇ ಇದ್ದ ಮಣೆಯಲ್ಲಿ ತಲೆಗೆ ನಾಲ್ಕೈದು ಪೆಟ್ಟುಕೊಟ್ಟು ಹಲ್ಲು ಮಸೆಯತೊಡಗಿದ.

ಹಾಗೆ ಅವ ಹೊರ ಬಂದಾಗ ಇತರರು ಚೆನ್ನಾಗಿ ಕುಡಿದು ಯಾವುದರ ಪರಿವೆಯೂ ಇಲ್ಲದೆ ಅಸಂಬದ್ಧ ಮಾತೆತ್ತುತ್ತಿದ್ದರು. 'ಹೇಯ್ ನಾಯಿಗಳಾ... ಏಳಿ, ಮೇಲೇಳಿ. ಅವಳು ಸತ್ತಳು. ನಾನವಳನ್ನು ಕೊಂದೆ' ಎನ್ನುತ್ತಾ ಹೈದ್ರೋಸ್ ಕೋಪದಿಂದ ಅವರನ್ನು ಎಬ್ಬಿಸಿ 'ಅವಳನ್ನು ನಾನು ಕೊಂದೆ ಇವನೇ? ಆದರೆ ನಾನವಳನ್ನು ಕೊಂದೆ ಎಂದು ಪ್ರಚಾರವಾಗಬಾರದು. ಬದಲಾಗಿ 'ಅವಳು ಆತ್ಮಹತ್ಯೆ ಮಾಡಿದ್ದಾಳೆ ಎಂದು ಜನ ನುಡಿದಾಡಬೇಕು. ಅದಕ್ಕೆ ಇಗೋ ಹಗ್ಗ, ಇದನ್ನು ಅವಳ ಕೊರಳಿಗೆ ಹಾಕಿ ಯಾವುದಾದರೂ ಮರಕ್ಕೆ ನೇತು ಹಾಕಿ ಬನ್ನಿ' ಎಂದಾಗ ಅವರಿಬ್ಬರೂ ಪಿಳಿಪಿಳಿ ಕಣ್ಣುಬಿಟ್ಟು 'ಇಲ್ಲಪ್ಪಾ, ನಮ್ಮಿಂದಿದು ಸಾಧ್ಯವಿಲ್ಲ, ನಾಳೆ ನಾವು ಜೈಲಲ್ಲಿ ಕೂರಲು ತಯಾರಿಲ್ಲ' ಎನ್ನುತ್ತಾ ಹೊರಗಿಳಿಯಲು ಯತ್ನಿಸಿದಾಗ ಹೈದ್ರೋಸ್ ಅವರನ್ನು ರಟ್ಟೆಯಲ್ಲಿ ಡಿದು 'ಇಗೋ ಚೆನ್ನಾಗಿ ಕುಡಿಯಿರಿ... ಮೊದಲು ಈ ಕಾರ್ಯ ಮಾಡಿ' ಅನ್ನುತ್ತಾ ಪಾತುಮ್ಮಳ ಕೊರಳಿಗೆ ಹಗ್ಗ ಸುತ್ತಿ ಅವರನ್ನು ಕಳುಹಿಸಿ ಕೊಟ್ಟ. ಜೊತೆಗೆ ಇನ್ನೂರು ರೂಪಾಯಿಯನ್ನು ಅತ್ತ ಬಿಸಾಡಿದ.

ಮರುದಿವಸ ಬೆಳಗ್ಗೆ ಸೇಠ್‌ರು ತನ್ನ ನಿದ್ದೆಯಿಂದ ಎಚ್ಚೆತ್ತು ಕಣ್ಣೊರೆಸಿ ಕೊಳ್ಳುವಷ್ಟರಲ್ಲಿ 'ಪಾತುಮ್ಮಳು ಆ ಸುಬ್ರಮಣ್ಯರ ಹಲಸಿನ ಮರದಲ್ಲಿ 'ಹಗ್ಗ' ತೆಗೆದಿದ್ದಾಳಂತೆ' ಎಂಬ ಆಘಾತ ಹೊಡೆಸುವ ಸುದ್ದಿಯನ್ನು ಹೆಂಡತಿಯ ಬಾಯಿಯಿಂದ ಕೇಳಿ ಉಟ್ಟ ಬಟ್ಟೆಯಲ್ಲೇ ಪಾತುಮ್ಮಳ ಮನೆ ಕಡೆ ಓಡಿ ಹೋದರು. ಈಗಾಗಲೇ ಈ ಸುದ್ದಿ ಊರಿಡೀ ನೀರಿನಂತೆ ಹರಡಿದ್ದರಿಂದ ನೂರಾರು ಮಂದಿ ಜಮಾಯಿಸಿದ್ದರು. ರಾತ್ರಿ ಪಂಚಾತಿಗೆ ಮಾಡಲು ಬಂದವರೆಲ್ಲಾ ಆಗ್ಲೇ ಸೇರಿದ್ದರು.

ಪಾತುಮ್ಮಳನ್ನು ತಾತ್ಕಾಲಿಕವಾಗಿ 'ಕಿಬ್ಲಾ'ಕ್ಕೆ ಮುಖ ಹಾಕಿಸಿ ಅಂಗಾತ ಮಲಗಿಸಿ ಶ್ವೇತವರ್ಣದ ಬಟ್ಟೆಯಿಂದ ಅಲಂಕರಿಸಿದ್ದರು. ಅಗರಬತ್ತಿ, ಕರ್ಪೂರದ ಸುವಾಸನೆಯು ಮನೆಯಿಡೀ ಹಬ್ಬಿತ್ತು. ಕೆಲವರು ಕೊನೆಯ ನೋಟವನ್ನು ನೋಡಲು ಬಂದು ಹೋಗುತಿದ್ದರು.

'ಪೋಸ್ಟ್ ಮಾರ್ಟಂ ಮಾಡುವುದಾ? ಅಲ್ಲಾ ನೇರವಾಗಿ ದಫನ್ ಮಾಡುವುದಾ? ಎಂದು ಒಬ್ಬ ಪ್ರಶ್ನಿಸಿದಾಗ 'ಹೂಂ... ಒಳ್ಳೆಯದು ಹೇಳಿದೆ ಮೋನೇ... ನಾಳೆ ಜೈಲಿನಲ್ಲಿ

ನೀ ಕೂತ್ಕೊಳ್ಳಿತ್ತೀಯಾ?' ಎಂದು ಸೇಠ್‌ರು ಪ್ರಶ್ನಿಸಿ ಕೂಡಲೇ ಸಂಬಂಧ ಪಟ್ಟವರಿಗೆ ಫೋನ್ ಮಾಡಿ ವಿಷಯ ತಿಳಿಸಿದರು.

ಮುಂದೆ ಕೆಲವೇ ತಾಸುಗಳ ನಂತರ ಅಂಬುಲೆನ್ಸ್‌ನಲ್ಲಿ ಪಾತುಮ್ಮಳ ಮೈಯತ್‌ನ್ನು ಇರಿಸಲಾಯಿತು. ಶೇಠ್‌ರು ಇದು ತನ್ನದೇ ಆದ ಕರ್ತವ್ಯವೆಂದು ಬಗೆದು ಅಂಬುಲೆನ್ಸ್ ಹತ್ತಿ ಕೂತು, ತನ್ನ ದೊಡ್ಡ ಮಗನನ್ನು ಹತ್ತಿರ ಕರೆದು 'ನೋಡು ಕಬರ್ ಗುಂಡಿ ತೋಡಿಸು... ಹಾಗೆ ಹಾರೆ-ಪಿಕ್ಕಾಸು ರೂಮಲ್ಲಿದೆ. ಇಗೋ ಚಾವಿ ಎನ್ನುತ್ತಾ ತನ್ನ ಸೊಂಟಕ್ಕೆ ಬಿಗಿಯಾಗಿ ಸುತ್ತಿದ್ದ ಚರ್ಮದ ಬೆಲ್ಟಿನ ಒಂದು ಸಣ್ಣ ಕಿಸೆಯಿಂದ ತೆಗೆದು ಕೊಟ್ಟಾಗ ಅಲ್ಲೇ ಇದ್ದ ಹೈದ್ರೋಸ್ 'ಕೊಡಿ ಕಾಕ' ಎನ್ನುತ್ತಾ ಎಳೆದು ಕೊಳ್ಳುವಷ್ಟರಲ್ಲಿ 'ನಿಲ್ಲು ಹೈದ್ರೋಸ್...' ಎಂದು ಸ್ವರ ತೇಲಿಬಂದ ಕಡೆಗೆ ಎಲ್ಲರೂ ಕಣ್ಣು ಹಾಯಿಸಿದರು. ರಾತ್ರಿಯಲ್ಲಿ ತನ್ನೊಟ್ಟಿಗಿದ್ದ ಇಬ್ಬರ ಹಿಂದೆಯೇ ನಾಲ್ಕೈದು ಖಾಕಿ ಧಾರಿಗಳಿದ್ದುದನ್ನು ಕಂಡ ಹೈದ್ರೋಸ್ ಹೆದರಿ ಬಳಲಿ ಗಡಗಡನೆ ನಡುಗಿದಾಗ ತನ್ನ ಹೆಬ್ಬೆರಳಲ್ಲಿ ಸಿಕ್ಕಿಸಿದ್ದ 'ಚಾವಿ' ಕೆಳಗೆ ಬಿತ್ತು. ಸೇಠ್‌ರ ಸಹಿತ ಎಲ್ಲರೂ ಪಿಳಿಪಿಳಿ ಕಣ್ಣು ಬಿಟ್ಟು 'ಏನು?' ಅನ್ನುವಂತೆ ಹೈದ್ರೋಸ್‌ನಲ್ಲಿ ಪ್ರಶ್ನಿಸುತ್ತಿದ್ದಂತೆಯೇ ಖಾಕಿಧಾರಿಗಳು ಹೈದ್ರೋಸ್‌ನನ್ನು ಸುತ್ತುವರಿದು 'ನಿಜ ಹೇಳು? ಏನು ಮಾಡಿದೆ? ಎಂದು ಕೇಳಿದರು. ಈ ಒಂದು ಸಣ್ಣ ವಿಷಯಕ್ಕೆ ಅವಳು ಆತ್ಮಹತ್ಯೆ ಮಾಡಿಕೊಂಡಳು' ಎಂದು ಹೈದ್ರೋಸ್ ನುಡಿದು ಬಳಲಿದಾಗ 'ಇಲ್ಲಾ ಸಾರ್... ಇದು ಆತ್ಮಹತ್ಯೆಯಲ್ಲ. ಕೊಲೆ, ಬರ್ಬರ ಕೊಲೆ... ಹೆಣ್ಣು ಹೊನ್ನು, ಮಣ್ಣಿಗಾಗಿ' ಎಂದೂ ಇಬ್ಬರೂ ಒಕ್ಕೊರಳ ಧ್ವನಿ ಎತ್ತಿದಾಗ 'ಲಾ ಹೌವ್ಲವಲಾ ಕುವ್ವತ್...' ಎನ್ನುತ್ತಾ ಸೇಠ್‌ರು ಅಂಬುಲೆನ್ಸ್‌ನಿಂದಿಳಿದು ಖಾಕಿಧಾರಿಗಳ ಬಳಿ ಬಂದಾಗ 'ನೀವು ಹೋಗಿ, ಮುಂದಿನ ಕಾರ್ಯ ಮಾಡಿ ಇವರೇ?' ಎನ್ನುತ್ತಾ ಅವರು ಹೈದ್ರೋಸ್‌ನ ಎರಡು ಕರಿ, ಉದ್ದದ ಕೈಗಳಿಗೆ ಬೇಡಿ ತೊಡಿಸಿದರು.

ಅರಸ್ತಾನ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಪಾತುಮ್ಮಳು ಪೋಸ್ಟ್ ಮಾರ್ಟಂ ಮಾಡಿಸುವುದರ ಹಾಗೂ ವಿವಿಧ ವಾರ್ತಾ ಮಾಧ್ಯಮದಲ್ಲಿ ಸುದ್ದಿ ಪ್ರಕಟಿಸುವುದರ ಮೂಲಕ ನೂತನ ದಾಖಲೆಯೊಂದನ್ನು ಸ್ಥಾಪಿಸಿಕೊಂಡಳು.

ಮುಂದಿನ ಮೂರು ದಿನದವರೆಗೆ ಇಬ್ಬರ ಬಗ್ಗೆ ನಿಗೂಢವಾಗಿತ್ತಾದರೂ ತನ್ನೂರಿನಲ್ಲಿ ಹೀಗಾಗಲು ಕಾರಣವೇನೆಂದು ತಿಳಿಯಲು ಸೇಠ್‌ರು ಠಾಣೆಗೆ ಹೋಗಿ ಮಾಹಿತಿ ಕೇಳಿದಾಗ 'ನೋಡಿ ಇವರಲ್ಲೊಬ್ಬ ಪಾತುಮ್ಮಾಳ ತಮ್ಮ. ಮತ್ತೊಬ್ಬ ಅವನ ಗೆಳೆಯ. ತನ್ನ ಬಾವ ಇನ್ನೊಂದು ಮದ್ವೆಯಾಗಿದ್ದಾನೆ ಎಂಬ ವಿಷಯ ತಿಳಿದ ಇವ ಬಾವನನ್ನು ಜೋರು ಮಾಡಲು ಸಮಯ ಕಾಯುತ್ತಿದ್ದನಂತೆ. ಹಾಗೆ ಎರಡನೆ ಹೆಂಡತಿ ಈಗ ಇಲ್ಲಿದ್ದಾಳೆಂದು ಯಾರೋ ಒಬ್ಬರು ಹೇಳಿದಾಗ ಅವಳನ್ನು ಕೊಲ್ಲಲೆಂದು ತನ್ನ ಗೆಳೆಯನ ಕೂಡಿ ಊರಿಗೆ ಬಂದರಂತೆ, ಅದಲ್ಲದೆ ಇವರಿಗೆ ಕುಡಿತದ ಹುಚ್ಚು ಇದ್ದುದರಿಂದ ಊರಿನ ಗಡಂಗಿಗೆ ಹೋದಾಗ ಅಲ್ಲಿ

ತನ್ನ 'ಭಾವ' ಇದ್ದುದನ್ನು ಕಂಡು ಅವರನ್ನು ಪುಸಲಾಯಿಸಿ ಮನೆಗೆ ಹೋದರಂತೆ. ಭಾವ ನಿದ್ರೆ ಮಾಡಿಯಾದ್ಮೇಲೆ ಅವಳನ್ನು ಕೊಲ್ಲಬೇಕೆಂದು ಹುನ್ನಾರ ಹೂಡಿದ ಇವರಿಗೆ 'ನಾನೇ ಅವಳನ್ನು ಕೊಂದೆ ಎಂದು ಭಾವ ಹೇಳಿದಾಗ ಮೊದಲು ಹೆದರಿದರೂ ನಂತರ ಅವ ಹೇಳಿದಂತೆಯೇ ಆ ಶವವನ್ನು ಮರಕ್ಕೆ ನೇತು ಹಾಕಿ ಬಿಟ್ಟರಂತೆ. ಆದರೆ ಬೆಳಿಗ್ಗೆ ಇವರು ನೋಡಿದಾಗ ವಿಧಿ ಬದಲಾಗಿತ್ತಂತೆ' ಎನ್ನುತ್ತಾ ಸಬ್ ಇನ್ಸ್‌ಪೆಕ್ಟರರು ನುಡಿದಾಗ ಸೇಠ್‌ರು ಗಂಭೀರತೆಯಿಂದ 'ಮತ್ತೆ ಇವರನ್ನು ಇನ್ನು?' ಎಂದು ಪ್ರಶ್ನಿಸಿದಾಗ ಸಬ್ ಇನ್ಸ್‌ಪೆಕ್ಟರರು 'ಕೊಲೆ ಆರೋಪ ಸಾಬೀತು ಆಗುವವರೆಗೂ ಇವರು ಇರಬೇಕಾದ ಕಡೆ ಇರುತ್ತಾರೆ ಎನ್ನುತ್ತಾ ಉದ್ದದ ಬಿಗಿ ನಿಟ್ಟುಸಿರು ಬಿಟ್ಟರು.

❖ ❖ ❖

ಮುಂಗಾರು ದೈನಿಕ - 21-5-1995

# ಫಕೀರ್

ಮುಸ್ಸಂಜೆಯಾಗಿತ್ತು. ಮಗ್ರಿಬ್ ಬಾಂಗ್ ಮೊಳಗಿದಂತೆಯೇ ಅರಸ್ತಾನದ ಉತ್ಸಾಹಿಗಳೆಲ್ಲಾ ಪಡುವಣಕ್ಕೆ ಕಣ್ಣು ಹಾಯಿಸಿ ಚಂದ್ರನ ಅಸ್ತಿತ್ವವನ್ನು ಹುಡುಕತೊಡಗಿದರು. ಎಳೆಯರಲ್ಲಿ ಕೆಲವರು ಮಸ್ಜಿದ್‌ನ ಮಿನಾರಿಗೆ ಹತ್ತಿ ಕಣ್ಣಲ್ಲಿ ಕಣ್ಣಿಟ್ಟು ತದೇಕಚಿತ್ತದಿಂದ ನೋಟ ಬೀರಿದರು. ಗಂಡೆದೆಯವರೆಲ್ಲಾ ಮಸೀದಿ ಬಳಿಯ ಬಾವಿದಿಂಡೆಯಲ್ಲಿ ಕೂತು (ಅಲ್ಲಿ ಕೂರಲು ಸಮತಟ್ಟಾದ ಜಾಗವಿದೆ) ರೇಡಿಯೋವನ್ನು ಕಿವಿಗೆ ಹತ್ತಿರವಾಗಿಟ್ಟು ಚಂದ್ರನ ಸುಳಿವಿನ ಬಗ್ಗೆ ನಗರದ ಖಾಝಿಯವರು ಹೊರಡಿಸುವ ಸುದ್ದಿಗಾಗಿ ಕಾತರದಿಂದ ಆಲಿಸುತ್ತಿದ್ದರು. ಆದರೆ ರಾತ್ರಿಯ ಹತ್ತು ಹೊಡೆದಿದ್ದರೂ ಈ ಬಗ್ಗೆ ಸ್ಪಷ್ಟ ಸುದ್ದಿ ಲಭಿಸದ್ದರಿಂದ ಸೇರಿದಾಳುಗಳೆಲ್ಲರೂ ನಿರಾಶೆಯಿಂದ ತಮ್ಮ ತಮ್ಮ ಮನೆಯ ದಾರಿ ಹಿಡಿದರು.

"ಉಮ್ಮಾ... ಇಂದು ಮಾದ ಕಂಡರೆ ನಾಳೆ ನೋಂಬು ಅಲ್ವಾ? ಹಾಗಾದಲ್ಲಿ ಅತ್ತಾಳಕ್ಕೆ ನನ್ನನ್ನು ಎಬ್ಬಿಸಿ" ಎಂದು ಜಲೀಲ್ ತನ್ನ ಉಮ್ಮನಲ್ಲಿ ಯಾಚಿಸಿದ. "ಆಯ್ತು ಮೋನೇ" ಎಂದು ಖದೀಜಾಬಿ ನುಡಿದು ಮಡಲು ತಟ್ಟಿಯ ಬಾಗಿಲನ್ನು ಮುಚ್ಚಿದೀಪವನ್ನು ಆರಿಸಿ ಚಾಪೆಯಲ್ಲಿ ಮುದುಡಿದಳು.

ಪ್ರಾತಃಕಾಲದ ನಾಲ್ಕು ಹೊಡೆದಿದೆ. ಪ್ರಕೃತಿ ಹಾಯಾಗಿ ನಿದ್ದೆ ಹೋಗಿದ್ದು, ಗಾಳಿಯು ತನ್ನ ಚಲನೆಯ ಶಕ್ತಿಯನ್ನು ಕಳಕೊಂಡಿತ್ತು. ಖದೀಜಾಬಿ ತಟ್ಟನೆ ಎಚ್ಚೆತ್ತು ಎದ್ದು ಕೂತು ದೀಪ ಉರಿಸಿ 'ಯಾ ಅಲ್ಲ' ಎನ್ನುತ್ತಾ ತನ್ನ ಜಡವನ್ನು ಬಿಡಿಸಿದಳು. ಅಷ್ಟರಲ್ಲಿ ಎಲ್ಲೋ ದೂರದಿಂದ ಅತ್ತಾಯ ಕೋಟಿಗಳು ದಪ್ಪು ಬಾರಿಸುವ ಶಬ್ದದಿಂದ ಎಚ್ಚೆತ್ತ ಖದೀಜಾಬಿ "ಮಾದ ಕಂಡಿರಬೇಕು, ಹಾಗಾದಲ್ಲಿ ನಾಳೆ ನೋಂಬು" ಎಂದು ತನ್ನಲ್ಲೇ ನುಡಿದು ಮಗನ ಕಡೆ ಕಣ್ಣು ಹಾಯಿಸಿದಳು. ಜಲೀಲ್ ಗಾಢ ನಿದ್ದೆಯಲ್ಲಿ ಗೊರಕೆ ಹೊಡೆಯುತ್ತಿದ್ದ. ಅವಳು ಮಡಲು ತಟ್ಟಿಯ ಬಾಗಿಲನ್ನು ತೆರೆದು ಅಂಗಳಕ್ಕೆ ಇಳಿದಾಗ ಅತ್ತಾಳ ಕೋಟಿಗಳು ಹತ್ತಿರದಲ್ಲಿ ದಪ್ಪು ಬಾರಿಸುತ್ತಿದ್ದುದು ಕೇಳಿಸಿತು. ಅವಳಿಗೆ ಪಳ್ಳಿಯಿಂದ ಬಾಂಗ್ ಮೊಳಗುವುದು ಕೇಳಿಸುತ್ತಿಲ್ಲ. ಯಾಕೆಂದರೆ ನಡುವೆ ಒಂದು ಗಿಡ್ಡ ಗುಡ್ಡ ಅಡ್ಡ! ಖದೀಜಾಬಿ ನೆರೆಯ ಕೋಯಾರ ಮನೆಗೆ ಕಣ್ಣು ಹಾಯಿಸಿ, ಅವರು ಸಹರಿ ಉಣ್ಣುವ ತರಾತುರಿಯಲ್ಲಿ ಮುಳುಗಿದ್ದನ್ನು ಗಮನಿಸಿದಳು.

ಖದೀಜಾಬಿ ತನ್ನ ಮನೆಯ ಒಳಹೊಕ್ಕು ರಾತ್ರಿ ಬೇಯಿಸಿಟ್ಟ ತಿಳಿಗಂಜಿ ಮತ್ತು ಸುಟ್ಟ ಒಣಮೀನಿನ ತುಂಡನ್ನು ಮಣ್ಣಿನ ಪಾತ್ರೆಗೆ ಹಾಕಿ ಕಣ್ಮುಚ್ಚಿ ನುಂಗತೊಡಗಿದಳು. ನಿದ್ದೆಯ ಮಂಪರು, ಹೊಟ್ಟೆ ತುಂಬಾ ತಿನ್ನಲಾಗದು. ಆದರೆ ಸಹರಿ ಉಣ್ಣದಿದ್ದಲ್ಲಿ ನೋಂಬು

ಹಿಡಿಯಲು ಅಸಾಧ್ಯ. ಬಗೆಬಗೆಯ ರುಚಿಸುವ ತಿಂಡಿಗಳಿದ್ದಲ್ಲಿ ಹೊಟ್ಟೆ ತುಂಬಾ ತಿನ್ನಬಹುದು. ನೆರೆಯ ಕೋಯಾರ ಮನೆಯಿಂದ ಹಪ್ಪಳ, ಕಾಯಿಸಿದ ಬಂಗುಡೆಯ ಪರಿಮಳ, ಕೊಯ್ದು ಮಾವಿನ ಹಣ್ಣಿನ ಘಾಟು ಖದೀಜಾಬಿಯ ಮೂಗನ್ನು ಕೊರೆಯತೊಡಗಿತು. ಅವಳು ತನ್ನ ಕೊನೆಯ ತುತ್ತನ್ನು ನುಂಗುವಾಗಲೂ 'ಮಗನಿಗೆ ಅನ್ಯಾಯ ಮಾಡಿದೆನೇ' ಎಂದು ತನ್ನಲ್ಲೇ ನುಡಿದು ಒಂದು ಗುಟುಕು 'ಕನ್ನ'ವನ್ನು ಕುಡಿದು ಬೀಡಿ ಹೊತ್ತಿಸಿ ಬಾಯಿಗಿಟ್ಟಳು.

ಅವಳು ಬೀಡಿ ಸೇದಲು ಒಂದು ಬಲವಾದ ಕಾರಣವಿದೆ. ಸುಮಾರು ಐದಾರು ವರ್ಷಕ್ಕು ಂಚೆ ಅವಳಿಗೆ ಎಲ್ಲಿಲ್ಲದ ಹಲ್ಲುನೋವು ಶುರವಾಗಿ ಅದನ್ನು ತಾಳಲಾರದೆ ನಿದ್ದೆಗೆಡುತ್ತಿರುವುದನ್ನು ಕಂಡ ನೆರೆಯ ಕೋಯಾರ ಹೆಂಡತಿ 'ಬೀಡಿ ಎಳೆದು ನೋಡು ಇವಳೇ' ಎಂದು ಪರಿಹಾರ ಸೂಚಿಸಿದಾಗ ಖದೀಜಾಬಿ ಮೊಂಡು ಧೈರ್ಯ ತಂದು ಒಂದು ಬೀಡಿ ಸೇದಿದ್ದಳು. ಆದರೆ ಹಲ್ಲು ನೋವು ವಾಸಿಯಾದರೂ, ಕೂಡಾ ಈಗಲೂ ಅವಳು ತನ್ನ ಚಟವನ್ನು ಬಿಡಲಿಲ್ಲ. ಅವಳು ತನ್ನ ಮಗನಿಗೆ ಕಾಣದಂತೆ ಕದ್ದು ಬೀಡಿ ಸೇದಿದ್ದು ಅದೆಷ್ಟು ಬಾರಿಯೋ? ಖದೀಜಾಬಿ ಬೀಡಿಯ ಕೊನೆಯ ದಮ್ಮು ಎಳೆದು ದೊಂಡೆಯೊಳಗಿನ ಕಫವನ್ನೆಲ್ಲಾ ಉಗುಳುವಷ್ಟರಲ್ಲಿ ಸುಬಹ್ ಬಾಂಗ್ ಮೊಳಗಿತು.

ಜಲೀಲ್ ಬೆಳಿಗ್ಗೆ ಎದ್ದವನೇ ಚಂದ್ರದರ್ಶನದ ಬಗ್ಗೆ ಪ್ರಶ್ನೆ ಎತ್ತಿದಾಗ ಖದೀಜಾಬಿಗೆ 'ಇಲ್ಲ ಮೋನೇ' ಎನ್ನಲು ಗಂಟಲಾರಿತ್ತು. ಅವಳು ಈ ಬಗ್ಗೆ ತನಗೇನೂ ತಿಳಿದಿಲ್ಲವೆಂಬಂತೆ ನಟಿಸಿ ಒಂದಿಷ್ಟು ತಿಳಿಗಂಜಿ ಬಡಿಸಿ ಜಲೀಲ್‌ನ ಮುಂದಿಟ್ಟಳು.

ಖದೀಜಾಬಿ ಎಂದಿನಂತೆ ಭತ್ತ ಕುಟ್ಟಲು ತ್ಯಾಂಪಣ್ಣ ಶೆಟ್ಟರ ಮನೆಯತ್ತ ಕಾಲೆಳೆದಳು. ಅವಳು ರಮ್ಜಾನ್ ತಿಂಗಳಲ್ಲಿ ದಿನಾ ಮಧ್ಯಾಹ್ನದವರೆಗೆ ಅಲ್ಲಿ ದುಡಿಯುವುದು ವಾಡಿಕೆ. ಅಸರ್ ಬಾಂಗ್ ಮೊಳಗಿತು. ತನ್ನ ಗೆಳೆಯರೆಲ್ಲಾ ಪಳ್ಳಿಗೆ ಕಾಲಿಡುತ್ತಿರುವುದನ್ನು ಕಂಡ ಜಲೀಲ್ ಸ್ನಾನ ಮಾಡಿ ಬಿಳಿ ಟೊಪ್ಪಿಯನ್ನು ಕೈಗೆತ್ತಿ ಉಮ್ಮನಲ್ಲಿ ತಿಳಿಸುತ್ತಾ ಅಂಗಳವಿಳಿದ. ಅಲ್ಲೇ ಪಳ್ಳಿ ಬಳಿಯ ಗೇರು ಮರದ ಗೆಲ್ಲಿನಲ್ಲಿ ಕೂತು ಹರಟೆ ಹೊಡೆಯುವ ಗೆಳೆಯರ ಗುಂಪಿನ ಬಳಿ ಕಾಲೆಳೆದ. ಜಲೀಲ್‌ನನ್ನು ಕಾಣುತ್ತಲೇ ಜಮಾತ್ ಅಧ್ಯಕ್ಷರ ಮಗ "ಜಲೀಲ್ ನಿಂಗೆ ನೋಂಬು ಉಂಟಾ?" ಎಂದು ಪ್ರಶ್ನಿಸಿದಾಗ, ಜಲೀಲ್ ಗಲಿಬಿಲಿಗೊಂಡು "ಹಾಂ... ಇವತ್ತು ನೋಂಬಾ, ನನ್ನ ಉಮ್ಮಾ..." ಎನ್ನುತ್ತಾ ತೊದಲಿದ. "ಸಾಕು... ಸಾಕು...ನಿನ್ನ ಉಮ್ಮಳಿಗೆ ಇದ್ದರೆ ಅಲ್ವಾ, ಮತ್ತೆ ನಿನಗೆ" ಎಂದು ಅವರೆಲ್ಲಾ ನುಡಿದು "ಹ್ಹೋ ಹ್ಹೋ" ಮಾಡಿ ಪಳ್ಳಿಯೊಳ ಹೊಕ್ಕರು.

ಮಗ್ರಿಬ್ ಬಾಂಗ್ ಮೊಳಗಿತು. ಸೇರಿದವರೆಲ್ಲಾ 'ಬಿಸ್ಮಿ' ಉಚ್ಚರಿಸಿ ಒಂದು ಲೋಟ ನೀರು ಕುಡಿದು ಖರ್ಜೂರದ ತುಂಡನ್ನು ಜಗಿದು ಪ್ರಭುವನ್ನು ಸ್ತುತಿಸಿದರು. ಈ ಮಧ್ಯೆ

ಜಲೀಲ್ ಕೂಡಾ ಹೊಟ್ಟೆ ತುಂಬಿಸುವಾಸೆಯಿಂದ 'ತೆಂಗಿನ ಕಾಯಿಯ ಗಂಜಿ'ಯನ್ನು ಕುಡಿಯುತ್ತಿದ್ದುದನ್ನು ಕಂಡ ಎಳೆಯರು 'ತುಕ್, ನೋಂಬಿಲ್ಲದವ' ಎನ್ನುತ್ತಾ ಮುಸಿಮುಸಿ ನಕ್ಕಾಗ ಜಲೀಲ್ ಎದುರುತ್ತರ ನೀಡದೆ ಉಮ್ಮಳನ್ನು ಗದರಿಸಬೇಕೆಂದು ತನ್ನಲ್ಲೇ ನುಡಿದ. ಮುಂದೆ ಎಲ್ಲರೂ ನಮಾಜ್ ಪೂರೈಸಿ ತಣಿದ ಹೊಟ್ಟೆಗೆ ಹಿಟ್ಟು ಹಾಕಲು ಅವಸರದಿಂದ ತಮ್ಮ ತಮ್ಮ ಮನೆಯತ್ತ ಕಾಲೆಳೆದರು.

"ಉಮ್ಮಾ... ಈವತ್ತು ನೋಂಬು ಇತ್ತಲ್ಲಾ... ಮತ್ತೆ ನೀವು ನನ್ನನ್ನು ಯಾಕೆ ಅತ್ತಾಳಕ್ಕೆ ಎಬ್ಬಿಸಿಲ್ಲ?" ಎಂದು ಅಂಗಳದಲ್ಲೇ ಪ್ರಶ್ನಿಸುತ್ತಾ ಜಲೀಲ್ ಒಳಸೇರಿದಾಗ ಖದೀಜಾಬಿ ಗಲಿಬಿಲಿಗೊಂಡು ತಾನು ತಿನ್ನುವ ರೊಟ್ಟಿಯ ತುಂಡನ್ನು ಕೊಟ್ಟು "ನಾಳೆ ಖಂಡಿತ ಮೋನೇ" ಎನ್ನುತ್ತಾ ಮಗನನ್ನು ಸಮಾಧಾನ ಪಡಿಸಿದಳು.

"ಉಮ್ಮ ನನ್ನ ಅಬ್ಬ ಎಲ್ಲಿ?" ಎಂದು ಜಲೀಲ್ ತನ್ನ ತಾಯಿಯಲ್ಲಿ ಪ್ರಶ್ನಿಸಿದಾಗ ಖದೀಜಾಬಿ ಸಂಪೂರ್ಣವಾಗಿ ಸೋತು ಬೇರೆ ಮಾತೆತ್ತಿದರೂ ಕೂಡಾ, ಜಲೀಲ್ ಮತ್ತೆ ಮತ್ತೆ ಯಾಚಿಸಿದಾಗ ಅವಳು ನಿರ್ವಾಹವಿಲ್ಲದೆ "ಮೋನೆ ನಿನ್ನ ಅಬ್ಬ, ಮೀನು ಹಿಡಿಯಲು ಕಡಲಿಗೆ ಹೋಗಿದ್ದಾರೆ" ಎಂದು ಸುಳ್ಳಾಡಿದಳು. "ಹಾಗಾದರೆ ಅವರಿನ್ನು ಯಾವಾಗ ಬಂದಾರು. ನಾನು ನೋಡ್ಲೇ ಇಲ್ಲವಲ್ಲ" ಎಂದು ನುಡಿದಾಗ ಖದೀಜಾಬಿ ನೋವುಂಡು "ಮೋನೆ, ನೀನು 'ಓ' ಇಷ್ಟು ಎತ್ತರಕ್ಕೆ ಬೆಳೆದು ಗಡ್ಡ ಮೀಸೆ ಬಿಟ್ಟು ಒಂದು ಮದ್ವೆಯಾದಾಗ ನಿನ್ನ ಅಬ್ಬ ಬಂದೇ ಬರ್‍ತಾರೆ" ಎನ್ನುತ್ತಾ ಸಲಾತನ್ನು ರಾಗವಾಗಿ ಹಾಡುತ್ತಾ "ಅಲ್ಲಾ... ಇವ ನಾಳೆ ನನಗೆ ತಿಳಿಯದಂತೆ ಅತ್ತಾಳ ಉಣ್ಣದೆ ನೋಂಬು ಹಿಡಿದಲ್ಲಿ... ಹಾಗೆ ಕತ್ತಲವರೆಗೂ ದೊಂಡೆಯಲ್ಲಿ ನೀರಿನ ಪಸೆಯಿಲ್ಲದೆ ಮರಣ ಹೊಂದಿದರೆ? ಕಳೆದ ಬಾರಿ ಉಳ್ಳಾಲದಲ್ಲಿ ಐದು ವರ್ಷದ ಹುಡುಗಿ, ಅತ್ತಾಳವಿಲ್ಲದೆ ಆಸೆಯಿಂದ ನೋಂಬು ಹಿಡಿದು ಏನೆಲ್ಲಾ ಆಗಿತ್ತಂತೆ. ಅದೇ ರೀತಿ ಇವ ಕೂಡಾ ಮಾಡಿದರೆ?" ಖದೀಜಾಬಿ ಆತಂಕಗೊಂಡಳು.

ಕಾಲ ನಾಗಾಲೋಟಕ್ಕಿಳಿದಿತ್ತು. ಊರವರ ಉತ್ಸಾಹ ದಿನದಿಂದ ದಿನಕ್ಕೆ ಹೆಚ್ಚುತ್ತಲಿತ್ತು. "ಉಮ್ಮಾ... ನಾನಿನ್ನು ನೋಂಬಿನ ಸದಕ ಪಡೆಯಲು ಊರೂರು ಹೋಗಲಾ? ಹಾಗೆ ಹೋದರೆ ಕೈ ತುಂಬಾ ಕಾಸು ಸಿಗುತ್ತದೆ." ಎಂದು ಜಲೀಲ್ ಯಾಚಿಸಿದಾಗ ಖದೀಜಾಬಿ ಚಕಿತಗೊಂಡು "ಬೇಡ ಮೋನೇ... ನೀನು ದೂರದ ಊರಿಗೆ ಹೋಗುವುದಾ? ನೋಡು ಅಲ್ಲಿ ಅದುಂಟು-ಇದುಂಟು" ಎನ್ನುತ್ತಾ ಮಗನನ್ನು ಹೆದರಿಸಿದಳು. "ಉಮ್ಮಾ... ಈ ಊರಿನಿಂದ ನಾನೊಬ್ಬನೆ ಹೋಗುವುದಲ್ಲ. ಆ ಕಾದ್ರಿ ಮೋನು, ಪೊಡಿಮೋನು ಕೂಡಾ ಪ್ರತಿ ವರ್ಷ ಹೋಗಿ ಕೈ ತುಂಬಾ ಕಾಸು ತರುತ್ತಿದ್ದುದನ್ನು ನೀ ಕಂಡಿಲ್ವಾ? ಹೂಂ... ನಾನು ಕೂಡಾ ಹಾಗೇ ಹೋಗಿ ನಿಮಗೆ ಕುಪ್ಪಸ, ಸೀರೆ, ಪಟ್ಟಿನ ಎಲ್ಸರ ತರುತ್ತೇನೆ. ಅದು ಅಲ್ಲದಿದ್ದಲ್ಲಿ ನನಗೆ ಈ ಪೆರ್ನಾಳಿಗೆ ಬಟ್ಟೆ-ಬರೆ ಮಾಡ್ಲೇಬೇಕು." ಎನ್ನುತ್ತಾ ತನ್ನ ಉಮ್ಮಳನ್ನು

ಜಲೀಲ್ ಆಸೆಗೊಳಪಡಿಸಿದ.

ಮುಂದೆ ಖದೀಜಾಬಿ ಅರೆ ಮನಸ್ಸಿನಿಂದ "ಮೋನೇ... ಹೋಗುವುದಾದರೆ ಹೋಗಿ ಬಾ... ಆದರೆ 20ನೇ ದಿನದಂದು ನೀನು ಎಲ್ಲಿದ್ದರೂ ಕೂಡಾ ಇಲ್ಲಿಗೆ ಬಂದು ಮುಟ್ಲೇಬೇಕು. ಯಾಕೆಂದರೆ ನಿನಗೀಗ ಆರು ವರ್ಷವಾಗುತ್ತಿದೆ. ಈ ಬಾರಿ ಸುನ್ನತ್ ಮಾಡಬೇಕು" ಎಂದಾಗ ಜಲೀಲ್ ಹ್ಞೂಂ ಕೂಡಿಸಿದ. ಹಾಗೆ ಉಮ್ಮನ ಅನುಮತಿ ಪಡೆದು ಬಿಳಿ ಲುಂಗಿ-ಟೊಪ್ಪಿಯನ್ನು ತೊಟ್ಟು, ಒಂದೆರಡು ಜೋಡಿ ಬಟ್ಟೆ-ಬರೆಯನ್ನು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಅಂಗಳ ದಾಟಿದ. ಜಲೀಲ್ ತನ್ನ ಊರಾದ 'ಅರಸ್ತಾನ'ದಿಂದ ಉಡುಪಿಯ ಕಡೆಗೆ ಕಣ್ಣು ನೆಟ್ಟ.

ಜಲೀಲ್ ಕಾಲುದಾರಿ, ಟಾರುರಸ್ತೆ, ಸಣ್ಣಪುಟ್ಟ ಕಾಡುಮೇಡು, ಮರುಭೂಮಿ, ಮರಳುಗಾಡು, ಗುಡ್ಡೆಯನ್ನೆಲ್ಲಾ ಏರಿಳಿದ. ಹೀಗೆ ನೂರಾರು ಊರನ್ನೆಲ್ಲಾ ಬಳಸಿ ಸದಾ ಝಕಾತ್ ಪಡೆಯುವತ್ತ ಗಮನಹರಿಸಿ ಎಚ್ಚರಿಕೆ ವಹಿಸುತ್ತಾ ಮುಸ್ಲಿಮರ ಮನೆಯನ್ನು ಗುರುತಿಸಿ, ಅವರು ಕೊಟ್ಟ ಝಕಾತನ್ನು ಪಡೆದು 'ಪಡೆದವ ಕಾಪಾಡಲಿ' ಎನ್ನುತ್ತಾ ಮುನ್ನಡೆಯುತ್ತಿದ್ದ. ತಾನು ಕಾಲೆಳೆಯುವ ಊರಲ್ಲಿ ಮಿನಾರು ಕಂಡಲ್ಲಿ ಅದನ್ನು 'ಪಳ್ಳಿ' ಎಂದು ಗುರುತಿಸಿ, ಅತ್ತ ಆಸೆಯಿಂದ ಹೆಜ್ಜೆ ಹಾಕಿ, ಲಗುಬಗನೆ ಒಳಸೇರಿ 'ತಸ್ಬೀಹ್' ಪಠಿಸುತ್ತಾ ಕುರಾನ್ ಓದುತ್ತಾ, ಅಲ್ಲಿದ್ದವರು ಕೊಟ್ಟ ಪಾವಲಿಯನ್ನು ಕೈ ಚೀಲದಿಂದ ತುಂಬಿಸಿ ಪಡೆಯುತ್ತಿದ್ದ.

ಒಂದು ಹೊತ್ತಿನ ಬಾಂಗ್ ಮೊಳಗಿದಾಗ ಒಂದು ಮಸೀದಿಯಲ್ಲಿರುತ್ತಿದ್ದರೆ, ಮತ್ತೊಂದು ಹೊತ್ತಿನ ಬಾಂಗ್ ಮೊಳಗಿದಾಗ ಇನ್ನೊಂದು ಮಸೀದಿಯಲ್ಲಿರುತ್ತಿದ್ದ. ಮಗ್ರಿಬ್ ಬಾಂಗ್ ಮೊಳಗಿದಾಗ ಯಾವ ಪಳ್ಳಿಯಲ್ಲಿರುತ್ತಾನೋ, ಅಲ್ಲಿ ಮೌಲವಿಯು ಕೊಟ್ಟ ಅನ್ನವನ್ನು ತಿಂದು ಆ ರಾತ್ರಿಯನ್ನು ಅಲ್ಲೇ ಕಳೆಯುತ್ತಿದ್ದ. ನಂತರ ಬೆಳಗ್ಗೆ ಎದ್ದು ಊರೂರು ಅಲೆಯುತ್ತಿದ್ದ.

ಜಲೀಲ್ ದಿನದಲ್ಲಿ ನಾಲ್ಕೈದು ಹಳ್ಳಿಗಳನ್ನು ಕ್ರಮಿಸದ ದಿನವಿಲ್ಲ. ಕೆಲವೊಂದು ಪಳ್ಳಿಗಳಲ್ಲಿ ತನ್ನಂತೆ ಬಂದ ಎಳೆಯರು, ಹಳಬರು, ಇದ್ದಾಗ ಅವನಿಗೆ ತುಂಬಾ ನಿರಾಶೆಯಾಗುತ್ತಿತ್ತು. ಯಾಕೆಂದರೆ ಅವನಿಗೆ ಆ ಸಮಯದಲ್ಲಿ ಝಕಾತ್‌ನ ಪಾಲಲ್ಲಿ ಕಡಿಮೆ ಹಣ ಸಿಗುತ್ತಿತ್ತು.

ಹಾಸನದ ದೊಡ್ಡ ಮಹಲ್‌ನ ಮುಂದೆ ಜನ ಸೇರಿದುದನ್ನು ಕಂಡ ಜಲೀಲ್ ಮೊಂಡು ಧೈರ್ಯ ತಂದು ಅವರೆಲ್ಲಾ ಅಕ್ಕಿ ಮತ್ತು ಕಾಸನ್ನು ಪಡೆಯುತ್ತಿರುವುದನ್ನು ಕಂಡು ಸಣ್ಣಗೇಟಿನ ಬಾಗಿಲನ್ನು ದೂಡಿ ಆ ಸಾಲಲ್ಲಿ ಸೇರಿಕೊಂಡ. ಈ ಮೊದಲು ಅವನು

ಚಿಕ್ಕಮಗಳೂರಲ್ಲಿ ಝಕಾತ್ ಪಡೆಯಲು ಇಂಥ ಮಹಲ್‌ನ ಮುಂದೆ ನಿಂತ ಅನುಭವವಿದೆ. ಆದರೆ ಅಲ್ಲಿ ಇಷ್ಟು ಜನರಿರಲಿಲ್ಲ. ಕುಳ್ಳರು, ಕುಂಟರು, ಗುಳಿಬಿದ್ದ ಹಳಬರು, ಕೋಲು ಮುಖದ, ಹಲ್ಲಿಲ್ಲದ ಅಗಲಬಾಯಿಯ ಮಹಿಳೆಯರು, ಕಣ್ಣು ಮಂದವಾದರು... ಹೀಗೆ ನೂರಾರು ರೂಪ, ಗುಣ, ಆಕಾರವುಳ್ಳವರು ಬಲು ಆಸೆಯಿಂದ ಆ ಸಾಲಲ್ಲಿ ನಿಂತು ತಮ್ಮ ಸರದಿಯನ್ನು ಎದುರು ನೋಡುತ್ತಿದ್ದರು.

ಅಂದು ರಮ್ಜಾನ್ ತಿಂಗಳ ವಿಶೇಷತೆಯನ್ನು ಎತ್ತಿ ತೋರಿಸುವ ಬದ್ರಿಂಜಳೇ ಆಂಡ್‌ನ ದಿನವಾದದ್ದರಿಂದ ಆ ಮಹಲ್‌ನ ಒಣಮೀನು ವ್ಯಾಪಾರಸ್ಥರಾದ ಕಾದ್ರಾಜಿಯವರು ತನ್ನ ಸದಕಾ ಕೊಡುವುದು ವಾಡಿಕೆ. ಅಷ್ಟರಲ್ಲಿ ತನ್ನ ಹಿಂದೆ ಯಾರೋ ಒಬ್ಬ ಬಂದು ನಿಂತುದನ್ನು ಜಲೀಲ್ ಅರಿತುಕೊಂಡ. ಕಣ್ಣು ಬತ್ತಿದ, ಗಂಟಲು ಒಣಗಿದ, ಕೈಕಾಲು ಹುಣ್ಣಿನಿಂದಾಗಿ ಕರಗಿದ, ರಕ್ತವಿಲ್ಲದೆ ನಿತ್ರಾಣಗೊಂಡಿರುವ ಆ ಬಾಗಿದ ದೇಹಕ್ಕೆ ನೆಟ್ಟಗೆ ನಿಲ್ಲು ಈ ಊರುಗೋಲೇ ಆಧಾರ. ಗಲೀಜಿನಂತೆ ಕಾಣುವ ಆ ವ್ಯಕ್ತಿಯ ತಲೆಯಲ್ಲಿ ಕಿರುಚಲು ಮುಂಡಾಸು ಇತ್ತು. ಬಂದವರಿಗೆಲ್ಲಾ ಸದಕಾ ಕೊಟ್ಟ ಮೇಲೆ ಕಾದ್ರಾಜಿಯವರು ಮುಗುಳ್ನಗುತ್ತಾ "ನನ್ನ ಸಹೋದರರೇ, ಬರುವ ವರ್ಷಕ್ಕೂ ಬನ್ನಿ, ಅವ ಇನ್ನಷ್ಟು ಕೊಡಲು ಅನುವು ಮಾಡಲಿ' ಎಂದಾಗ ಎಲ್ಲರೂ'ಆಮೀನ್' ಎಂದರು.

ಜಲೀಲ್ ನಗರದ ಪಳ್ಳಿಯೊಳ ಹೊಕ್ಕು ದ್ರಿಕ್ಸ್ ಪಠಿಸತೊಡಗಿದ. ಅಷ್ಟರಲ್ಲಿ 'ಆತ' ಬಂದು ಸಲಾಂ ಹೇಳುತ್ತಾ ಜಲೀಲ್‌ನ ಬಳಿ ಕೂತ. 'ಆತ'ನನ್ನು ಜಲೀಲ್ ಆಗ ತಾನೆ ಮಹಲಲ್ಲಿ ತನ್ನ ಹಿಂದೆ ಬಂದು ನಿಂತವನೆಂದು ಗುರುತಿಸಿದ. ಆತ ಬಂದು ತನ್ನ ಬಳಿ ಕೂತುದು ಜಲೀಲ್‌ನಿಗೆ ಇಷ್ಟವಿಲ್ಲದ್ದರಿಂದ ಕೋಪಿಸಿಕೊಂಡು 'ನನ್ನ ಪಾಲನ್ನು ಕಸಿಯಲು ಈ ಹಳಬ ಇಲ್ಲಿಗೂ ಬಂದರಾ' ಎಂದು ತನ್ನಲ್ಲೇ ನುಡಿದು ಹಲ್ಲು ಮಸೆದ. ಮುಂದೆ ಜಲೀಲ್ ಪಳ್ಳಿಯಿಂದ ಹೊರಗಿಳಿದು 'ಝಕಾತ್' ಪಡೆಯಲು ಮುನ್ನಡೆದ.

ಮಟಮಟ ಮಧ್ಯಾಹ್ನ! ನಡೆದೂ ನಡೆದು ಸುಸ್ತಾಗಿದ್ದ ಜಲೀಲ್ ದಣಿವಾರಿಸಲೆಂದು ನಿರ್ಜನ ಪ್ರದೇಶದಲ್ಲಿದ್ದ ಒಂದು ಗೋಳಿ ಮರದಡಿ ಸೇರಿದ. ಹಾಗೆ ತನ್ನ ಕಾಸನ್ನು ಎಣಿಸಲು ಮುಂದಾದ. ಅಷ್ಟರಲ್ಲಿ 'ಆತ' ಬಂದು ಅದೇ ಮರದಡಿ ಸೇರಿ ನುಂಗುವಂತೆ ನೋಡಿದಾಗ ಜಲೀಲ್ ಹೆದರಿ ತನ್ನ ಗಂಟುಮೂಟೆಯನ್ನು ಲಗುಬಗನೆ ಕಟ್ಟಿ ಹೊರಡಲು ಸಿದ್ಧನಾದಾಗ "ನಿಲ್ಲು ಮೋನೇ ಈ ಮಟ ಮಧ್ಯಾಹ್ನ ಎಲ್ಲಿಗೆ ಹೋಗುತ್ತಿರುವೆ? ನಾನು ನಿನಗೆ ಏನೂ ಮಾಡುವುದಿಲ್ಲ" ಎನ್ನುತ್ತಾ 'ಆತ' ತನ್ನ ಗುಳಿಬಿದ್ದ ಕಣ್ಣನ್ನು ಅರಳಿಸಿ ನಕ್ಕಾಗ, ಆ ನಗುವಿನಲ್ಲಿನ ಮಮತೆಯನ್ನು ಅರಿತ ಜಲೀಲ್ ಧೈರ್ಯದಿಂದ "ಕಾಕಾ ಆ ಮಹಲಲ್ಲಿ ನಿಮಗೆ ಎಷ್ಟು ಕಾಸು ಸಿಕ್ಕಿದೆ?" ಎಂದು ಕೇಳಿದ 'ಆತ' ಕಣ್ಮುಚ್ಚಿ 'ನಿನ್ನಷ್ಟೇ' ಎಂದ.

"ಹುಡುಗಾ.. ನಿನ್ನ ಹೆಸರೇನು?"

"!"

"ಊರು?"

"ಅರಸ್ತಾನ"

'ಆತ' ಆ ಊರಿನ ಹೆಸರನ್ನು ಕೇಳುತ್ತಲೇ ಉತ್ಸಾಹಗೊಂಡು ಜಲೀಲ್‌ನಿಂದ ಇನ್ನಷ್ಟು ವಿಷಯ ತಿಳಿಯ ಬಯಸಿ "ಮೋನೇ, ನಿನ್ನ ಉಮ್ಮಳ ಹೆಸರು ಹೇಗೆ?" ಎಂದು ಪ್ರಶ್ನಿಸಿದ. ಜಲೀಲ್ ತನ್ನ ಉಮ್ಮಳ ಹೆಸರು ಹೇಳಿದಾಗ ಆತ ಸಂತಸಪಟ್ಟು, "ಮೋನೇ ನಿನ್ನ ಅಬ್ಬ ಎಲ್ಲಿ? ನಿನ್ನ ಉಮ್ಮ ಏನು ಮಾಡುತ್ತಾಳೆ?" ಎಂದು ಪ್ರಶ್ನಿಸಿದಾಗ ಜಲೀಲ್ ಗಲಿಬಲಿಗೊಂಡರೂ, ಆ ಪ್ರಶ್ನೆಯಲ್ಲಿ ಮುಗ್ಧತೆಯನ್ನರಿತು, "ಉಮ್ಮ, ತ್ಯಾಂಪಣ್ಣ ಶೆಟ್ಟರ ಬಳಿ ಕೆಲಸಕ್ಕೆ ಹೋಗುತ್ತಾರೆ" ಎಂದಾಗ 'ಆತ' ಜಲೀಲ್‌ನನ್ನು ಪ್ರೀತಿಯಿಂದ ಹಿಡಿದೆಳೆದು ತನ್ನ ಮಡಿಲಲ್ಲಿರಿಸಿದ. 'ಆತ' ಜಲೀಲ್‌ನ ಮುಖವನ್ನು ತದೇಕ ಚಿತ್ತದಿಂದ ದಿಟ್ಟಿಸಿ ಶೆಟ್ಟರನ್ನು ಜ್ಞಾಪಿಸುತ್ತಾ ತನ್ನ ಮನವನ್ನು ಹಿಂದಕ್ಕೋಡಿಸಿದ.

ಖದೀಜಾಬಿ ಮತ್ತು ಇದಿನಬ್ಬ ಎಂಬ ದಂಪತಿಗಳು ತಮಗೆದುರಾದ ದಿನವನ್ನು ಬಲು ಸಂತಸದಿಂದ ಕಳೆಯುತ್ತಿದ್ದರು. ಖದೀಜಾಬಿ ತನ್ನ ಗಂಡನನ್ನು ಬಲು ಸಂತಸದಿಂದ ಮರದ ಮಿಲ್ಲಿನಲ್ಲಿ ಕೂಲಿ ಕೆಲಸ ಮಾಡಿ ದಣಿದು ಬರುವ ತನ್ನ ಗಂಡನನ್ನು ಆದರದಿಂದ ಎದುರುಗೊಂಡು, ಸ್ನಾನ ಮಾಡಲು ಬಿಸಿ ನೀರು ಕಾಯಿಸಿಟ್ಟು, ಅವರಿಗೆ ಇಷ್ಟವಾದ ಪದಾರ್ಥವನ್ನು ತಯಾರಿಸಿಟ್ಟು ಸದಾ ಉಪಚಾರದಲ್ಲಿ ಮುಳುಗುತ್ತಿದ್ದಳು.

ಇಬ್ಬರು ಮಕ್ಕಳನ್ನು ಹಡೆದಿದ್ದ ಖದೀಜಾಬಿ ಮುಂದೆ ರಜಿಯಾ ಎಂಬ ಮಗುವಿಗೆ ಜನ್ಮವಿತ್ತಿದ್ದಳು. ಆ ಮಗುವು ಅಂಬೆಗಾಲಿಡುತ್ತಿದ್ದಂತೆಯೇ, ಆ ದಂಪತಿಗಳ ಮೂರು ಮಕ್ಕಳು ಮಲೇರಿಯಾ ರೋಗಕ್ಕೆ ಬಲಿಯಾಗಿ ಇನ್ನಿಲ್ಲವಾದಾಗ ತುಂಬಾ ನೋವುಂಡಿದ್ದರು. ಮಕ್ಕಳ ಅಗಲಿಕೆಯಿಂದ ಮಾನಸಿಕವಾಗಿ ತೊಳಲಾಡಿದ ಇದಿನಬ್ಬ ಕೆಲಸಕ್ಕೆ ಹೋಗದೆ ಸೋಮಾರಿತನ ಬೆಳೆಸಿದಾಗ ಖದೀಜಾಬಿ ತನ್ನ ಗಂಡನಿಗೆ ಹಿತವಚನ ನುಡಿಯುತ್ತಾ ಬಂದಳು.

ಹೆಂಡತಿಯ ಕಿರಿಕಿರಿಯಿಂದ ಬೇಸತ್ತ ಇದಿನಬ್ಬ ಶರಾಬು ಅಂಗಡಿಯ ಸಹವಾಸ ಬೆಳೆಸಿ ಮುಂದೆ ಕೈಯಲ್ಲಿ ಕಾಸಿಲ್ಲದೆ ಹೋದಾಗ ಹೆಂಡತಿಯನ್ನು ಪೀಡಿಸತೊಡಗಿದ. ಕೊನೆಗೆ ರಾತ್ರೋ ರಾತ್ರಿ ಕುಡಿದು ಬಂದು ದಿನಾ ಚರ್ಮದ ಬೆಲ್ಟಿನಲ್ಲಿ ಹೊಡೆಯುತ್ತಿದ್ದ. ಆದರೂ ಖದೀಜಾಬಿ ತಾಳ್ಮೆ ವಹಿಸಿದಳು.

ಹೀಗೆ ಒಂದು ಕರಾಳ ರಾತ್ರಿ ಇದಿನಬ್ಬ ಕಂಠಪೂರ್ತಿ ಕುಡಿದು ಬಂದು ತನ್ನ ಹೆಂಡತಿಯ ಜುಟ್ಟು ಬಲವಾಗಿ ಹೊಡೆಯುತ್ತಿದ್ದುದನ್ನು ಕಂಡ ನೆರೆಯ ಶೇಕಬ್ಬ ಎಂಬಾತ ಓಡಿ ಬಂದು ಇದಿನಬ್ಬನಿಗೆ ಬುದ್ಧಿವಾದದ ಬೈಗುಳನ್ನು ಸುರಿಸಿ, ಪ್ರಾಮಾಣಿಕತೆಯಿಂದ ಖದೀಜಾಳಿಗೆ ರಕ್ಷಣೆ

ಕೊಡುವ ಸಲುವಾಗಿ ಅವಳನ್ನು ತನ್ನ ಮನೆಯತ್ತ ಕರೆದೊಯ್ದ. ಹೆಂಡತಿಯ ಈ ನಡತೆಯನ್ನು ಕುಡಿತದ ಅಮಲಿನಿಂದಲೇ ಗ್ರಹಿಸಿಕೊಂಡು ಇವಳಿಗೂ ಆ ಶೇಕಬ್ಬನಿಗೂ ಅನೈತಿಕ ಸಂಬಂಧವಿದೆ ಎಂದು ಬಗೆದು ಗತಿಕಾಣದೆ ಊರಿಗೆ ವಿದಾಯ ಹೇಳಿದ್ದ.

"ಹೌದು... ಇದು ನನ್ನ ಮಗ, ಅಂದು ನಾನು ಊರು ಬಿಟ್ಟಾಗ ಅವಳು ಇವನಿಗೆ ಗರ್ಭ ಧರಿಸಿದ್ದಳು. ನನಗೆ ಮತ್ತೆ ನನ್ನವಳನ್ನು ಕಾಣಬೇಕು" ಎಂದು ಆತ ತನ್ನಲ್ಲೇ ನುಡಿದ.

ಈ ಮಧ್ಯೆ 'ಆತ'ನ ಮಡಿಲಲ್ಲಿ ನಿದ್ದೆ ಹೋದ ಜಲೀಲ್‌ನಿಗೂ ಒಂದು ಕನಸು ಬಿತ್ತು. ತನ್ನ ಉಮ್ಮ 'ವಸ'ನನ್ನು ಕರೆತಂದಾಗ ನಾನು ಹೆದರಿ ಗುಡ್ಡೆ ಹತ್ತಿ ಕಲ್ಲು ಬಂಡೆಗಳ ಎಡೆಯಲ್ಲಿ ಅಡಗಿ ಕೂರುವುದೂ, ನಾಲ್ಕೈದು ಯುವಕರು ನನ್ನನ್ನು ರಟ್ಟೆಯಲ್ಲಿಡಿದು ಮನೆಗೆ ಕರೆದೊಯ್ಯುವುದೂ, ನೆರೆಯ ಸೂಫಿಯಾಕರ ಮನೆಯಿಂದ ಎತ್ತರದ ಹಳತ್ತು ಸ್ಟೂಲನ್ನು ತಂದು ಅದರ ಮೇಲೆ ತನ್ನ ತೊಡೆ ಅಗಲಿಸಿ ಕೂರಿಸಿ ತನ್ನ ಕಣ್ಣಿಗೆ ಅಡ್ಡವಾಗಿ ಹಮಿದಾಕ, ಮೊೖದಿನಾಕ ಮುಂತಾದವರು ತಮ್ಮ ದಡ್ಡು ಕಟ್ಟಿದ ಕೈಗಳಿಂದ ಹಿಡಿಯುವುದೂ, ಮುಂದೆ ವಸನು 'ಅಲ್ಲಾಹು ಅಕ್ಬರ್' ಎನ್ನುತ್ತಾ ಮುಂಜಿ ಮಾಡುತ್ತಾನೆ.

ಮೂರು ದಿನ ಕಳೆದ ಮೇಲೆ ನನ್ನ ಆ ಹುಣ್ಣನ್ನು ಇಬ್ರಾಕ ಬಂದು ಪುಸಲಾಯಿಸಿ ತೊಳೆದಾಗ ನಾನು ನೋವು ತಾಳಲಾರದೆ ಕೋಪದಿಂದ ಅವರ ಮೈ ಪರಚುತ್ತೇನೆ. ಮತ್ತೆ ಕೋಳಿಸಾರಿನೊಂದಿಗೆ ದಪ್ಪ ರೊಟ್ಟಿಯ ತುಂಡನ್ನು ಉಮ್ಮ ನನ್ನ ಬಾಯಿಗೆ ಬಲವಾಗಿ ತುರುಕುತ್ತಾಳೆ.ನನ್ನನ್ನು ಕಾಣಲು ಬಂದ ನೆರೆಯವರೆಲ್ಲಾ ಕೊಟ್ಟ ಕಾಸನ್ನು ಆಸೆಯಿಂದ ನನ್ನ ತಲೆದಿಂಬಿನಡಿಯಲ್ಲಿ ಬಚ್ಚಿಟ್ಟು ಕೊಳ್ಳುತ್ತೇನೆ. ಈ ಮಧ್ಯೆ ನನ್ನ ಅಬ್ಬ ಕಡಲಿನಿಂದ ತಂದ ಮೀನನ್ನು ಕಾಸು ಸಂಪಾದಿಸುವಾಸೆಯಿಂದ ಊರೂರು ಮಾರಲು ಹಟವಿಡಿಯುವುದೂ, ಮುಂದೆ ನಾನು 'ಸುನ್ನತ್‌ಪುದಿಯಾಪ್ಲೆ'ಯಾಗಿ 'ಪಳ್ಳಿ'ಗೆ ಹೊರಟಾಗ ತಲೆದಿಂಬಿನ ಅಡಿಯಲ್ಲಿಟ್ಟ ಕಾಸು ಮಾಯವಾದುದನ್ನು ಕಂಡು 'ಪಳ್ಳಿ'ಗೆ ಹೋಗದೆ ತೆಪ್ಪಗೆ ಕೂರುತ್ತೇನೆ. ಆಗ ಉಮ್ಮ ಬಂದು 'ಹುಡುಗನ ಕಾಸು ವಾಪಾಸು ಕೊಟ್ಟುಬಿಡಿ' ಎಂದಾಗ ಹುಣ್ಣಿಮೆಗೆ ಬಂದ ಅಬ್ಬ, ಉಮ್ಮಳ ಕೆನ್ನೆಗೆ ಬಾರಿಸುತ್ತಾರೆ.

ಹೀಗೆ ಜಲೀಲ್ ತಾನು ಕಂಡ ಕನಸನ್ನು ಆತನಲ್ಲಿ ಹೇಳಿದ. ಅಷ್ಟರಲ್ಲಿ 'ಮೋನೇ ನಿನ್ನ ಅಬ್ಬ ಎಲ್ಲಿ? ಎಂದು 'ಆತ ತಡೆಯಲಾರದೆ ಪ್ರಶ್ನಿಸಿದಾಗ "ಹಾಂ... ಕಡಲಿಗೆ ಹೋಗಿದ್ದಾರಂತೆ. ಕಾಕಾ ನಾನು ಅವರನ್ನು ಕನಸಲ್ಲಿ ಕಂಡೆ" ಎಂದಾಗ 'ಆತ'ನಿಗೆ ದುಃಖ ಉಮ್ಮಳಿಸತೊಡಗಿತ್ತು.

"ಹೂಂ... ಮೋನೇ, ನಾವು ಇನ್ನು ಮಡಿಕೇರಿಗೆ ಹೋಗುವ, ನೋಡು ಅಲ್ಲೊಬ್ಬರು ಸಾಹುಕಾರರು 27ರಂದು ತಮ್ಮ ಫಿತ್ತ್‌ರ್ ಝಕಾತ್ ಕೊಡುತ್ತಾರೆ" ಎಂದು 'ಆತ' ನುಡಿದು ಜಲೀಲ್‌ನನ್ನು ಆಸೆಗೊಳಪಡಿಸಿದಾಗ 'ನನ್ನ ಮುಂಜಿ ಬರುವ ವರ್ಷ ಮಾಡಿಸಿದರಾಯಿತು' ಎಂದು ಜಲೀಲ್ ತನ್ನಲ್ಲೇ ತೀರ್ಮಾನಿಸಿ "ಸರಿ ಕಾಕಾ" ಎನ್ನುತ್ತಾ ಒಪ್ಪಿಗೆ ನೀಡಿದ.

ಖದೀಜಾಬಿ ಈಗ ಶರೀರದಲ್ಲಿ ತುಂಬಾ ಕ್ಷೀಣಿಸಿದ್ದಾಳೆ. ಅದಲ್ಲದೆ ಅವಳು ಎಡೆಬಿಡದೆ ನೋಂಬು ಹಿಡಿದಿದ್ದರಿಂದ ಅವಳ ಆ ಕೋಲು ಶರೀರ ಇನ್ನಷ್ಟು ಒಣಗಿತ್ತು. ಸಾಲದಕ್ಕೆ ತನ್ನ 'ಮೋನು' ಇಲ್ಲದೆ ಆ ಮನೆಯಲ್ಲಿ ಒಂಟಿ ಜೀವನ ನಡೆಸಿದ ಅವಳ ಮನ ತಳಮಳಗೊಂಡಿತ್ತು. ಈ ಮಧ್ಯೆ ಅವಳು ತನ್ನ ಹೊಟ್ಟೆ ತಣಿಸಲೆಂದು ದಿನಾ ಮಧ್ಯಾಹ್ನದವರೆಗೆ ಶೆಟ್ಟರ ಮನೆಯಲ್ಲಿ ದುಡಿಯುತ್ತಿದ್ದಳು. ಅವಳು ತನ್ನ ಮಗನನ್ನು ಎದುರು ನೋಡುತ್ತಾ ಕಾದು ಕೂತು ಸೋತು ಹೋದಳು. ತನ್ನ ಮಗ ತಂದ ಕಾಸಿನಿಂದ ಸೀರೆ, ಕುಪ್ಪಸವನ್ನು ತೊಟ್ಟು ಕೊನೆಯ ಪೆರ್ನಾಳ್ ಆಚರಿಸಲು ಅವಳು ಕಾತರದಿಂದಿದ್ದಳು. ಅವಳು ಚಾಪೆಯಲ್ಲಿ ಮುದುಡಿ 'ಷಹದತ್ ಕಲ್ಮಾ'ವನ್ನು ಉಚ್ಚರಿಸುತ್ತಿದ್ದಳು.

"ಕಾಕಾ... ಇನ್ನು ನಾನು ಊರಿಗೆ ಹೋಗುತ್ತೇನೆ. ಹಾಗೆ ನನ್ನ ಉಮ್ಮಳಿಗೆ ಸೀರೆ, ಕುಪ್ಪಸ ತೆಗೆಯಲಿಕ್ಕಿದೆ" ಎಂದು ಜಲೀಲ್ ನುಡಿದಾಗ 'ಆತ' ಅದನ್ನು ತೆಗೆಯಲು ಮುಂದೆ ಬಂದ. ಮುಂದೆ ಆತ ಕೂಡಾ ಜಲೀಲ್‌ನೊಡನೆ ಊರಿಗೆ ಹೊರಡಲು ಅನುವಾದಾಗ "ಕಾಕಾ... ನನ್ನನ್ನು ಬಸ್ಸು ಹತ್ತಿಸಿದರೆ ಸಾಕು. ಮತ್ತೆ ನಿಮಗೆ ಯಾಕೆ ಸುಮ್ಮನೆ ತೊಂದರೆ" ಎಂದು ನುಡಿಯುತ್ತಾನೆ. 'ಮಗನ ಜೊತೆ ಹೊರಟು ನನ್ನವಳನ್ನು ಸೇರಬೇಕು. ಮತ್ತೆ ಎಂದಿನಂತೆ ಸಂಸಾರ ಜೀವನ ಸಾಗಿಸಬೇಕು' ಎಂದು ದೃಢಮನಸ್ಸು ಮಾಡಿ ಕೊಂಡಿದ್ದ. 'ಆತ' ಜಲೀಲ್‌ನೊಡನೆ ಕೆಂಪು ಬಸ್ಸು ಹತ್ತಿದ.

ಬಸ್ಸು ಟಾರು ರಸ್ತೆಯಲ್ಲಿ ಓಡುತ್ತಿತ್ತು. ಜಲೀಲ್ ತನ್ನ ಕಂಕುಳಲ್ಲಿಟ್ಟ 'ಗಂಟು' ಭದ್ರವಾಗಿದೆಯೋ, ಇಲ್ಲವೊ ಎನ್ನುತ್ತಾ ಜಾಗ್ರತೆ ವಹಿಸುತ್ತಿದ್ದ. ಒಮ್ಮೊಮ್ಮೆ ಅವನಿಗೆ 'ಆತ' ರಕ್ಕಸದಂತೆ ಕಂಡು ಬಂದರೆ, ಮಗದೊಮ್ಮೆ ಆದರ್ಶ ವ್ಯಕ್ತಿಯಂತೆ ಕಂಡುಬಂದ.

ಸುಮಾರು ಏಳು ಗಂಟೆ. ನಾಡಿನ ಮುಸ್ಲಿಮರು ಅಂದಿನ ಪೆರ್ನಾಳ್ ಹಬ್ಬವನ್ನು ಆಚರಿಸಲಿರುವುದರಿಂದ ಊರಿಡೀ ಸಂಭ್ರಮದಲ್ಲಿ ಮುಳುಗಿತ್ತು. ಜಲೀಲ್ ತನ್ನ ಮನೆಯತ್ತ ಕಾಲೆಳೆಯುತ್ತಿದ್ದಂತೆಯೇ ಹತ್ತಿರದ ಮನೆಯಂಗಳದಲ್ಲಿ ಎಳೆಯ ಮಕ್ಕಳು ಅಂದದ ಬಟ್ಟೆ ಬರೆ ತೊಟ್ಟು ತಮ್ಮದೇ ಲೋಕದಲ್ಲಿ ತೇಲಿ ಹೋದುದನ್ನು ಗಮನಿಸಿದ. ಈ ಮಧ್ಯೆ 'ಆತ' ಜಲೀಲ್‌ನನ್ನು ಹಿಂಬಾಲಿಸುತ್ತಿದ್ದ.

ಜಲೀಲ್ ತನ್ನ ಮನೆಯಂಗಳ ಹತ್ತಿದಾಗ ಮಡ್ಲು ತಟ್ಟಿಯನ್ನು ಹಗ್ಗದಿಂದ ಬಿಗಿಯಾಗಿ ಕಟ್ಟಿದುದನ್ನು ಕಂಡು ಗಲಿಬಿಲಿಗೊಳ್ಳುತ್ತಾ 'ಉಮ್ಮಾ... ಉಮ್ಮಾ' ಎನ್ನುತ್ತಾ ಕೂಗತೊಡಗಿದ. "ಛೇ... ಎಲ್ಲಿ ಹೋದರಿವರು. ಪೆರ್ನಾಳ್ ಅಂತ ಗೊತ್ತಿಲ್ಲವಾ?" ಎಂದು ಜಲೀಲ್ ಕೋಪದಿಂದ ಪ್ರಶ್ನಿಸುವಷ್ಟರಲ್ಲಿ ನೆರೆಯ ಇಬ್ರಾಕ ಬಂದು "ಮೋನೇ, ಇಲ್ಲಿ ಬಾ... ಕೂಗಿ ಬೇಜಾರು ಮಾಡಬೇಡ. ನಿನ್ನ ಉಮ್ಮ ಮೊನ್ನೆ **27**ರಂದು ರಾತ್ರಿ ಮೌತ್ ಆಗಿರುವಳು. ಆ ಪ್ರಕಾರ ಇಂದು ಅವಳ 'ದುವಾ' ಮಾಡಬೇಕಿತ್ತು. ಆದರೆ ಆದನ್ನೆಲ್ಲಾ ಮಾಡಲು ಇಲ್ಲಿ

ಯಾರಿದ್ದಾರೆ? ಹೇಗಾದರೂ ಮಾಡಿ ನಾವೆಲ್ಲಾ ಸೇರಿ ದಫನ್ ಮಾಡಿದೆವು. ನೋಡು ಅವಳು ಒಳ್ಳೆಯ ರಾತ್ರಿ ನಿಧನಳಾಗಿ ಸ್ವರ್ಗಸ್ಥಳಾದಳು" ಎಂದಾಗ ಜಲೀಲ್ ಬಿಕ್ಕಿಬಿಕ್ಕಿ ಅಳತೊಡಗಿದ.

"ಕಾಕಾ... ನನ್ನ ಅಬ್ಬ ಬಂದಿದ್ದರಾ?" ಜಲೀಲ್ ಮೆತ್ತಗೆ ಪ್ರಶ್ನಿಸಿದಾಗ ಖದೀಜಾಬಿಯನ್ನು ಚಿಕ್ಕಂದಿನಲ್ಲೇ ಚೆನ್ನಾಗಿ ಅರಿತಿದ್ದ ಇಬ್ರಾಕ "ಎಲ್ಲಿ ಹಾಳಾಗಿ ಹೋದ ಈ ಇದ್ದೀನ್? ನಿನ್ನ ಉಮ್ಮಳನ್ನು ತೊರೆದು ಇಂದಿಗೆ ಐದಾರು ವರ್ಷಗಳಾಯಿತು. ಎಲ್ಲಿಂದಲೋ ದಿಕ್ಕು-ದೆಸೆಯಿಲ್ಲದೆ ಬಂದವರಿಗೆ ಒಟ್ರಾಸಿ ಹೆಣ್ಣು ಕೊಟ್ಟಲ್ಲಿ ಹೀಗೆ ಆಗುವುದು" ಎಂದಾಗ 'ಆತ' ಆ ಮಾತನ್ನು ಕೇಳಲಾಗದೆ ನೋವಿನಿಂದ ತನ್ನ ಬೈರಾಸಿನಿಂದ ಕಣ್ಣೀರೊರೆಸಿದ.

ಜಲೀಲ್‌ನ ಕಂಕುಳಲ್ಲಿ ಕಾಸಿನ ಕಟ್ಟು ಇರುವುದನ್ನು ಕಂಡ ಇಬ್ರಾಕ "ಮೋನೇ ಇದು ಎಂತದು? ಇಲ್ಲಿ ಕೊಡು, ನೋಡು ನಿಮ್ಮ ಮನೆಯಿಂದ ಪಳ್ಳಿಗೆ ತುಂಬಾ ಕಾಸು ಪಾವತಿಸಲು ಬಾಕಿಯಿದೆ. ಅದನ್ನಾದರೂ ಕೊಟ್ಟು ಬಿಡುವ. ಅದು ನಮ್ಮೆಲ್ಲರ ಕರ್ತವ್ಯ. ಅದನ್ನು ಕೊಡದೆ ಪಿಟ್ರಾಸಿ ಮಾಡಿದಲ್ಲಿ ನಾಳೆ ಹಾವು ಚೇಳುಗಳು ಕಬರ್‌ನಲ್ಲಿ ನಿನ್ನ ಉಮ್ಮಳ ಎಲ್ಬು-ಮುಳ್ಳನ್ನು ಬೇರೆ ಬೇರೆ ಮಾಡಲು ಹೊಂಚು ಹಾಕಿತು... ಮತ್ತೆ ನಿನ್ನಿಂದಾಗಿ ನಿನ್ನ ಉಮ್ಮಳ ಮನಕ್ಕೆ ಶಾಂತಿ ದೊರಕದು" ಎಂದಾಗ ಜಲೀಲ್ ತತ್ತರಿಸಿ ಹೋಗಿದ್ದ.

"ಹೂಂ ಕಾಕಾ... ನನ್ನ ಉಮ್ಮ ಸ್ವರ್ಗವಾಸಿಯಂತೆ. ಮತ್ತೆ ಅಂಥವರಿಗೆ ಹಾವಿನ ತೊಂದರೆಯಾ?" ಎಂದು ಜಲೀಲ್ ತೊದಲಿದಾಗ, ಕೋಪಗೊಂಡ ಇಬ್ರಾಕ ಅವನನ್ನು ನುಂಗುವಂತೆ ನೋಡಿದರು. ಈ ಎಲ್ಲಾ ಮಾತುಕತೆಯನ್ನು ಆಲಿಸುತ್ತಿದ್ದ 'ಆತ' ನಿರಾಶೆಗೊಂಡು ಎಲ್ಲವೂ ನನ್ನಿಂದಾಗಿ ಎಂದು ತನ್ನಲ್ಲೇ ನುಡಿದು ತಪ್ಪಿತಸ್ಥನಂತೆ ಭೂಮಿಗಿಳಿದಿದ್ದ. ಜಲೀಲ್ ಕಾಸಿನ ಕಟ್ಟನ್ನು ಕೈಗೆತ್ತಿಕೊಂಡು ಹಿಂದಿರುಗಿ ನೋಡುತ್ತಾ "ಕಾಕಾ... ಇದು ನಿಮಗಿರಲಿ, ನನ್ನ ಉಮ್ಮ ನನ್ನಿಂದ ದೂರವಾದರು. ಅವರಿದ್ದಿದ್ದರೆ ನಾವಿಲ್ಲಿ ಪೆರ್ನಾಳನ್ನು ಚಂದದಲ್ಲಿ ಆಚರಿಸಬಹುದಿತ್ತು. ನೀವು ಯಾರೋ, ನಾನು ಯಾರೋ? ಆ ಅಲ್ಲಾಹನೇ ಬಲ್ಲ... ನನ್ನ ದುಃಖದಲ್ಲಿ ನೀವು ಭಾಗಿಯಾಗ್ಬೇಡಿ" ಎನ್ನುತ್ತಾ ಆ ಕಟ್ಟನ್ನು ಆತನ ಕೈಗಿತ್ತು 'ಬೇಗ ಹೋಗಿ' ಎನ್ನುವಂತೆ ಕೈ ಸನ್ನೆ ಮಾಡಿದ.

"ಹೇ ಹುಡುಗಾ... ನಿಂಗೆ ಹುಚ್ಚಾ? ಯಾರು ಈತ? ನಿಂಗೂ-ಇವನಿಗೂ ಅದೆಂತಹ ಕಾಗೆ ಸಂಬಂಧ. ಆ ಕಾಸನ್ನು ನೀ ಯಾಕೆ ಅವನಿಗೆ ಕೊಡತ್ತಿರುವೆ' ಎಂದು ಇಬ್ರಾಕ ಪ್ರಶ್ನಿಸಿದಾಗ "ಅದೂ... ಅದೊಬ್ಬ ಫಕೀರ್" ಎನ್ನುತ್ತಾ ಜಲೀಲ್ ನಿಟ್ಟುಸಿರುಬಿಟ್ಟ.

ಆ ಕ್ಷಣ ಆತನ ಕಣ್ಣಲ್ಲಿ ಕಣ್ಣೀರು ಆಟವಾಡತೊಡಗಿತು. ಸ್ವತಃ ತನ್ನ ತಾನು ಹುಟ್ಟಿಸಿದ ಮಗನಿಂದ ಈ ಮಾತು ಕೇಳಬೇಕಾದುದು 'ಆತ'ನಿಗೆ ನೋವು ತಂದಿತ್ತು. 'ಮೋನೇ ನಾ ನಿನ್ನ ಅಬ್ಬ' ಎನ್ನಲಾಗದೆ ಆತ ಸೋತು ಹೋದ. ಆದರೂ 'ಆತ' ಮಮತೆಯಿಂದ ಮಗನ

ಬಳಿ ಕಾಲೆಳೆದಾಗ ಜಲೀಲ್ ತನಗರಿವಿಲ್ಲದಂತೆ ಹಿಂದೆ ಸರಿಯತೊಡಗಿದ. ಆತನ ಬಾಯಿಕಟ್ಟಿ ಹೋಗಿತ್ತು. ಇಬ್ರಾಕನಲ್ಲಿ 'ನಾನು ನಿಮ್ಮ ಇದ್ದಿನ್' ಎಂದೂ ಹೇಳಲು ಕೂಡಾ ಅವನಿಂದಾಗಲಿಲ್ಲ.

'ಕಾಕಾ... ನನ್ನ ಉಮ್ಮಳನ್ನು ಎಲ್ಲಿ ದಫನ್ ಮಾಡಿರುವಿರಿ? ತೋರಿಸುವಿರಾ?' ಎಂದು ಇಬ್ರಾಕನಲ್ಲಿ ಪ್ರಶ್ನಿಸಿದ. ಆ ಕ್ಷಣ ಪೆರ್ನಾಳ್ ನಮಾಜ್ ಮಾಡುವ ಮೊದಲು ಎಲ್ಲರೂ ಪಳ್ಳಿಯಲ್ಲಿ ಮಂಡಿಯೂರಿ ಕೂತು 'ಲಾ ಇಲಾಹ ಇಲ್ಲಲ್ಲಾಹು ಅಲ್ಲಾಹು ಅಕ್ಬರ್' ಎಂದು ತಕ್ಬೀರ್‌ನ ಧ್ವನಿ ಮೊಳಗಿಸುತ್ತಿರುವುದು ಜಲೀಲ್‌ನಿಗೆ ಕೇಳಿಸಿತು. ಅವನು ತಾನುಟ್ಟ ಬಟ್ಟೆಬರೆಯನ್ನು ಲೆಕ್ಕಿಸದೆ ಧ್ವನಿ ಮೊಳಗುವ ಮತ್ತು ಮಿನಾರು ಕೈ ಬೀಸಿ ಕರೆಯುವ ಕಡೆಗೆ ಓಡಿ ಹೋದ.

❖ ❖ ❖

ಅಲ್ ಅನ್ಸಾರ್ ವಾರಪತ್ರಿಕೆ - 14-1-1997

# ಯಾರಿಗೆ ಯಾರುಂಟು?

ಇದೊಂದು ಕತೆಯೋ ಅಥವಾ ವ್ಯಥೆಯೋ ಎಂದು ನನಗೆ ಗೊತ್ತಾಗುತ್ತಿಲ್ಲ. 97 ವರ್ಷಗಳು ಕಾಲ ಬದುಕಿದ ಈ ದೇಹ ಕೊನೆಗೆ ಕಣ್ಮುಚ್ಚಿದಾಗ ಕಾನೂನು ನಡುವೆ ಬ್ಬಾಯಿ ಹಾಕಿದ್ದು ಮಾತ್ರ ನೂರಕ್ಕೆ ನೂರು ಸತ್ಯ. ಈ ದೇಹಕ್ಕೆ ಒಂದಲ್ಲ, ಎರಡು ಹೆಸರು ಇವೆ. ಕೆಲವರು ಪಾತುಮ್ಮ ಎಂದು ಕರೆದರೆ, ಇನ್ನೂ ಕೆಲವರು ಸುಬ್ಬಕ್ಕ ಎಂದು ಕರೆಯುತ್ತಾರೆ. ಆದರೆ ಈ ದೇಹಕ್ಕೆ ಯಾವಾಗ ಹೇಗೆ ದನಿಗೂಡಿಸಬೇಕೆಂದು ಗೊತ್ತಾಗುತ್ತಿಲ್ಲ.

ವಯಸ್ಸಿನ ಹಿರಿತನದಿಂದಾಗಿ ಕಣ್ಣು ಕಿವಿ, ಅಷ್ಟೇಕೆ ದೇಹ ಕೂಡಾ ಚುರುಕಾಗುತ್ತಿಲ್ಲ. ಹಿಂದೊಮ್ಮೆ ಈ ದೇಹವನ್ನು ಎಚ್ಚರಗೊಳಿಸಲು ಎರಡು ಹೆಸರಿನಿಂದ ಕರೆದುದರಿಂದ ಎರಡು ಸಮುದಾಯದ ನಡುವೆ ಪುಟ್ಟ ಹೊಯಿಕೈ ಕೂಡಾ ನಡೆದಿತ್ತು.

ಆದರೆ ಈ ಪಾತು-ಸುಬ್ಬಕ್ಕ ಅತ್ತ ಪೂಜೆಯಾಗಲೀ ಇತ್ತ ಪ್ರಾರ್ಥನೆಯಾಗಲೀ ಮಾಡದೆ ಹೋದಾಗ ಎರಡೂ ಸಮುದಾಯ ಒಂದು ದೇಹಕ್ಕಾಗಿ ನಾಲಗೆ ಸವೆಸುವ ಕೃತ್ಯಕ್ಕೆ ಮುಂದಾಗಲಿಲ್ಲ. ಆ ದೇಹಕ್ಕೆ ತಾನು ಯಾವ 'ದೇವ'ನಿಗೆ ತಲೆಬಾಗಬೇಕೆಂಬ ಸಾಮಾನ್ಯ ಪ್ರಜ್ಞೆಯೂ ಇರಲಿಲ್ಲ.

ನಿಮ್ಮನ್ನು ಹೂಳುವುದೋ ಅಥವಾ ಸುಡುವುದೋ.ಎಂದು ಗಂಭೀರವಾಗಿ ಪ್ರಶ್ನಿಸಿದರೆ 'ಸತ್ತ ಜೀವಕ್ಕೆ ಏನಾದರೇನು?' ಎಂದು ಪ್ರಶ್ನಿಸಿ ಬಿಡುತ್ತಾಳೆ.

ಈ ದೇಹದ ಹುಟ್ಟೂರು ಇದಲ್ಲ. ಪರ ಊರಲ್ಲಿ ಹುಟ್ಟಿ ಬೆಳೆದ ಈ ದೇಹ ಈ ಊರಿಗೆ ಕಾಲಿಟ್ಟು ಸುಮಾರು 6 ದಶಕಗಳೇ ಕಳೆದಿವೆ.

ಈ ದೇಹ ಒಂದು ಸೋಗೆ ಮಾಡಿನ ಗುಡಿಸಲಿನೊಳಗೆ ಬಿದ್ದುಕೊಂಡಿದೆ. ಅಲ್ಲೊಂದು ಊರುಗೋಲಿದೆ. ಎಲೆ ಅಡಿಕೆಯ ಚೀಲವಿದೆ. ಉಗುಳು ಪಾತ್ರೆಯಿದೆ. ಈ ದೇಹದ ತಲೆಗೂದಲು ಹಣ್ಣಾಗಿದೆ. ಮೈ ಇಡೀ ನರೆತಿದೆ. ಕುಪ್ಪಾಯ ಎಂಬ ಬಿಳಿ ಬಟ್ಟೆ ಮತ್ತು ಹಸಿರೋ, ಕೇಸರಿ ಬಣ್ಣದ್ದೋ ಸೀರೆ ತೊಡುತ್ತಾಳೆ.

ಈ ದೇಹ ಅಥವಾ ಜೀವ ಗೊಟಕ್ ಎನ್ನುವ ಮೊದಲು ಒಂದು ತೊಟ್ಟು ನೀರು ಕೊಡುವ ಗತಿ ಇಲ್ಲ. ಏನಾದರೂ ಹೆಚ್ಚು ಕಮ್ಮಿಯಾದಲ್ಲಿ ಆಸ್ಪತ್ರೆಯೇ ಗತಿ. ಈ ದೇಹವನ್ನು ನಾನು ಹತ್ತಿರದಿಂದ ಬಲ್ಲೆ. ಇದರ ಬೇಕು-ಬೇಡ ನನಗೆ ಗೊತ್ತಿದೆ. ಇದರ ಆತ್ಮಕಥೆ ನನಗೆ ಸುಮಾರು ಐದೂವರೆ ದಶಕಗಳಿಂದ ತಿಳಿದಿದೆ.

1902ರಲ್ಲಿ ಇಚ್ಚಾಲಿ ಬ್ಯಾರಿ ಮತ್ತು ಕುಂಞಾಮಾ ಎಂಬವರ ಬಡ ಮಗಳಾಗಿ ಪಾವೂರು

ಎಂಬಲ್ಲಿ ಹುಟ್ಟಿದ ಪಾತು 2ನೇ ಕ್ಲಾಸು ಮದರಸದ 'ಓತು' ಕಲಿತವಳು. ನಂತರ ಎಳೆಯ ಪ್ರಾಯದಲ್ಲೇ ನೆರೆಯ 'ಇಬ್ಬಿ'ಯ ಜತೆ ಮದುವೆಯ ಮಾತುಕತೆ ನಡೆದಿತ್ತು. ಆದರೆ ತಲೆ ಸರಿ ಇಲ್ಲದ ಕಾರಣ ಅದು ತಪ್ಪಿ ಹೋಗಿತ್ತು.

ಮುಂದೆ ಪಾತು ತನ್ನ 7ನೇ ವಯಸ್ಸಿನಲ್ಲಿ ಹತ್ತಿರದ ಊರೊಂದಕ್ಕೆ ಮದುಮಗಳಾಗಿ ಹೊರಟು ಹೋಗಿದ್ದರೂ ಅಲ್ಲೇನೋ ರಂಪಾಟ ಮಾಡಿರಬೇಕು. ಆಕೆ ಈ ಗುಟ್ಟನ್ನು ತನ್ನಲ್ಲಿ ಬಚ್ಚಿಟ್ಟಿದ್ದರೂ ಅವಳ ಮಾತಿನಿಂದ ನಾನದನ್ನು ತಿಳಿದುಕೊಂಡಿದ್ದೆ. ಅಂತೂ ಪಾತು ಗಂಡನಿಂದ ದೂರವಾಗಿ ತವರು ಮನೆ ಸೇರಿದ್ದಳು.

ಮನೆಯವರ ಕಿರಿ ಕಿರಿ ದಿನಗಳೆದಂತೆ ಹೆಚ್ಚಾಗತೊಡಗಿತ್ತು. ಅಲ್ಲದೆ ಬಾಲ್ಯ ವಿವಾಹ ನಡೆಯುತ್ತಿದ್ದ ಆ ದಿನದಲ್ಲಿ 'ಪಾತು' ಆ ಮನೆಗೊಂದು ಬೆಳೆದು ನಿಂತ ಹೆಣ್ಣಾಗಿದ್ದಳು. ಹಾಗಾಗಿ ಕೊನೆಗೂ ಪಾತು ಸ್ಥಳೀಯ ಪೊಕ್ರಚ್ಚು ಎಂಬಾತನ ಎರಡನೇ ಹೆಂಡತಿಯಾಗಿ ಅವನ ಮನೆ ಸೇರಿದಳು.

ಪಾತು ಎಂಥ ನತದೃಷ್ಟೆ ಹೆಣ್ಣು. ಅವಳಿಗೆ 2ನೇ ಮದುವೆಯೂ ಹೆಚ್ಚು ಫಲ ಕೊಡಲಿಲ್ಲ. ಅಂದರೆ ಪೊಕ್ರಚ್ಚು ಮದುವೆಯಾದ ಕೆಲವೇ ದಿನಗಳಲ್ಲಿ ಶವವಾಗಿ ಪತ್ತೆಯಾದ. ಆ ಮೂಲಕ ಪಾತುವಿನ ಸಹಿತ ಆತನ ಮೊದಲ ಹೆಂಡತಿ ರುಕಿಯಾ ಕೂಡಾ ವಿಧವೆಯಾದಳು.

ಪೊಕ್ರಚ್ಚು ನೆರೆಯ ಸುಬ್ರಾಯ ಕಾಮತರ ಪ್ರೇರಣೆಯಿಂದ ಗಾಂಧೀಜಿ ಬೋಧಿಸಿದ ಅಹಿಂಸಾ ತತ್ವದ ನಡುವೆಯೂ ಬ್ರಿಟಿಷರಿಗೆ ಅಲ್ಲಲ್ಲಿ ಕಿರುಕುಳ ಕೊಡುವ ಕೆಲಸದಲ್ಲಿ ತೊಡಗಿದ್ದ ವೇಳೆ ಅದೊಂದು ದಿನ ಅವರಿಗೆ ನೇರ ಸೆರೆ ಸಿಕ್ಕಿ, ಕೊನೆಗೆ ಅವರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಓಡಿ ಹೋಗುತ್ತಲೇ ಕೆರೆಯೊಂದಕ್ಕೆ ಹಾರಿ ಬಿಟ್ಟ.

ಆದರೆ ಹಾಗೆ ಹಾರಿಹೋದ 'ಆತ' ಮತ್ತೆ ಮೇಲೇರಲಿಲ್ಲ. ಆತ ಮೇಲೇರಿದ್ದು ಮರುದಿನ ಸಂಜೆ ನಾಲ್ಕು ಗಂಟೆಗೆ!

ಪೊಕ್ರಚ್ಚುವಿನ ಮೃತದೇಹ ದಫನ್ ಆದ ಅದೇ ದಿನ ರಾತ್ರಿ ಪಾತು ಮತ್ತೆ ತನ್ನ ತವರು ಮನೆ ಸೇರಿ 4 ತಿಂಗಳು 10 ದಿನ ಅವಧಿಯ ಇದ್ದತ್ ಆಚರಿಸಿದಳು.

ಮಗಳ ವಿಧವೆಯಿಂದ ಕೊರಗಿದ ಅವಳ ತಾಯಿ ಕೆಲವೇ ದಿನದೊಳಗೆ ಕಣ್ಮುಚ್ಚಿ ಇಹಲೋಕ ತ್ಯಜಿಸಿದರು. ಆದರೆ ಮರು ದಿವಸ 'ಪಾತು'ವಿನ ತಂದೆ ಕೂಡಾ ಸಾಯುತ್ತಾನೆಂದು ಯಾರು ಕೂಡಾ ನಿರೀಕ್ಷಿರಲಿಲ್ಲ. ಆತನ ಬಾಯಿಯಿಂದ ಬಿಳಿನೊರೆ ಕಂಡು ಬಂದಾಗಲೇ ಆತ ವಿಷ ಕುಡಿದು ಸತ್ತಿರಬೇಕೆಂದು ಸ್ಥಳೀಯರು ಬಲವಾಗಿ ಶಂಕಿಸಿದ್ದರು.

ಪಾತು ಅನಾಥೆಯಾದಳು. ಕಂಡಕಂಡವರ ಮನೆಯ ಮುಸುರೆ ತಿಕ್ಕಿ ಹೊಟ್ಟೆ

ತುಂಬಿಸಿದಳು. ನಂತರ ಊರಿನ ಮಸ್ಜಿದ್ ಅಧ್ಯಕ್ಷರ ಮನೆಯಲ್ಲಿ ಕೆಲಸಕ್ಕೆ ಸೇರಿ ಅವರು ಕೊಟ್ಟಿದ್ದನ್ನು ತಿಂದು ಕೆಟ್ಟದಾಗಿ ತೇಗಿ ಬಿಟ್ಟಳು.

ಹೀಗೆ ಇದ್ದಕ್ಕಿದ್ದಂತೆ ಅದೊಂದು ದಿನ ಸಂಜೆ ಅಧ್ಯಕ್ಷರ ಮನೆಗೆ ಬಿಳಿ ದೇಹದ ಬಿಳಿ ಪೈಜಾಮು ಹಾಕಿದ ಅರಬಿಯಂತೆ ಕಾಣುವ ವ್ಯಕ್ತಿಯೋರ್ವ ಬಂದ. ಮನೆಯ ಎಲ್ಲೆಡೆ ಪುಟ್ಟ ಸಂಭ್ರಮ. ಮನೆ ಯಜಮಾನಿಯ ಆಣತಿಯಂತೆ ಪಾತು ಕೋಳಿಚೋರು ತಯಾರಿಸಿದಳು. ಅವಳಿಗೆ ಆ ಮನೆಯಲ್ಲಿ ಏನು ನಡೆಯುತ್ತದೆ ಎಂದೇ ಗೊತ್ತಾಗಲಿಲ್ಲ.

ಪಾತು ನೆಲ ಗುಡಿಸುತ್ತಿದ್ದಳು. ತನ್ನ ಬಳಿ ಬಂದ ಮಸ್ಜಿದ್ ಅಧ್ಯಕ್ಷರು 'ಪಾತು...ಅವರನ್ನೊಮ್ಮೆ ನೋಡಿ ಬಿಡು' ಅಂದರು. ಪಾತುವಿಗೆ ಏನೆಂದು ಅರ್ಥವಾಗಲಿಲ್ಲ. ಮನೆ ಯಜಮಾನಿ ಪಾತುವಿಗೆ ಆ ದಿನದ ಸಂಭ್ರಮದ ಬಗ್ಗೆ ವಿವರಿಸಿದಳು.

ಪಾತು ಕಿಟಕಿ ಸರಿಸಿ ಇಣುಕಿ ನೋಡಿದಳು. ವಯಸ್ಸು ಸರಿ ಸುಮಾರು 50 ದಾಟಿದೆ. ಪಾತುವಿಗೆ ಅದು ಇಷ್ಟವಾಗಲಿಲ್ಲ. ಆದರೆ ಮನಸ್ಸಿಲ್ಲದ ಮನಸ್ಸಿನಿಂದ ಮನೆಯವರ ಒತ್ತಾಯಕ್ಕೆ ಮಣಿದಳು.

ಪಾತು ತನ್ನ ಮೊದಲ ರಾತ್ರಿಯನ್ನು ಕಳೆಯಲು ರೂಮಿನೊಳ ಹೊಕ್ಕಳು. ಮಂಚದಲ್ಲಿ ಕಾಲೂರಿ ಧಡೂತಿ ದೇಹದ ಆ ವ್ಯಕ್ತಿ ಕುಳಿತಿದ್ದ. ಸಿಗರೇಟಿನ ಹೊಗೆ ರೂಮಿನೊಳಗೆ ಹಬ್ಬಿತ್ತು. ಪಾತು ಎಡಕಡೆ ಮುಖ ತಿರುಗಿಸಿ ಮುಸುಕು ಹಾಕಿ ಗೋಡೆಗೊರಗಿ ನಿಂತಿದ್ದಳು. ಆತ ಅವಳ ಕೈ ಹಿಡಿದೆಳೆದ.

ಹಣ್ಣಾದ ಆ ಮುಖವನ್ನು ಕಂಡು ತತ್ತರಿಸಿದ ಪಾತು ನನ್ನನ್ನು ಮುಟ್ಟಬೇಡಿ ಎಂದು ದೂರವಾದಳು. ಆದರೆ ಆತನಿಗೆ ಭಾಷೆ ಅರ್ಥವಾದರೆ ತಾನೆ? ಮತ್ತೊಮ್ಮೆ ಆತ ಅವಳನ್ನು ಹಿಡಿದೆಳೆದ. ಪಾತು ಗಟ್ಟಿ ದೇಹಕ್ಕೆ ತಲೆಬಾಗಿದಳು.

ಮರುದಿನ ಬೆಳಗಾಗುತ್ತಲೇ ಆತ ಎದ್ದು ಹೋದ. ಹೀಗೆ ಮೂರ್‍ನಾಲ್ಕು ದಿವಸ ಸಾಗಿತು. ಆತ ಮುಸ್ಸಂಜೆಗೆ ಬಂದು ಬೆಳಗಾಗುತ್ತಲೇ ಹೋಗುತ್ತಿದ್ದ. ಆ ನಾಲ್ಕು ದಿನ ರಾತ್ರಿ ಕೋಳಿ ಚೋರು ತಿಂದು ಎಲ್ಲರೂ ಕೆಟ್ಟದಾಗಿ ತೇಗು ಬಿಟ್ಟರು.

ಅರಬಿ ಪರಕೀಯನಾದರೂ ಗಂಡ ತಾನೆ. ಕರೆದಾಗ ಬರುವುದಿಲ್ಲವೆನ್ನಲಾಗದು. ಒಂದು ದಿನ ಆತ ಅವಳನ್ನು ಎಲ್ಲಿಗೋ ಕರೆದೊಯ್ದ.

ಪಾತು ಪಿಳಿಪಿಳಿ ಕಣ್ಣಿಟ್ಟು ನೋಡುತ್ತಾಳೆ. ತಾನು ಈವರೆಗೂ ಕಾಣದ ಸುಂದರ ನಗರ. ತಾನಿರುವ ಕೋಣೆಯ ಕೆಳಗಡೆ ಕಪ್ಪು ರಸ್ತೆಯಿದೆ. ನೂರಾರು ವಾಹನಗಳು ಓಡಾಡುತ್ತಿವೆ. ಜನ ಅತ್ತಿತ್ತ ಅಲೆದಾಡುತ್ತಿದ್ದಾರೆ.

ರಾತ್ರಿಯಾಗುತ್ತಾ ಬಂತು. ಪಾತು ತಾನು ಮಲಗಿದ್ದ ಹಾಸಿಗೆಯನ್ನೇ ತದೇಕಚಿತ್ತದಿಂದ ನೋಡಿದಳು. ಇದರ ಮೇಲೆ ನಾನೆಷ್ಟು ದಿನ ಮಲಗುವುದು? ನಿಜವಾಗಿಯೂ ನಾನು ಗೆದ್ದೆನೇ? ನಾನು ಯಾವಾಗಲೂ ಹೀಗೆ ಆರಾಮವಾಗಿ ಬಿದ್ದುಕೊಂಡಿರುವೆನೇ? ಅವಳು ತನ್ನಲ್ಲೇ ಪ್ರಶ್ನಿಸಿದಳು.

ಗಂಡ ತನ್ನ ತಂದೆಗೆ ಸಮಾನ ವಯಸ್ಕ ಎಂಬುದೊಂದು ಬಿಟ್ಟರೆ ಬೇರೆ ಯಾವುದೇ ಕೀಳರಿಮೆ ಅವಳಿಗಾಗಲಿಲ್ಲ. ಹೀಗೆ ತಿಂಗಳು ಕಳೆಯಿತು.

ಆತ ಪಾತುವನ್ನು ಮತ್ತೆ ಮಸ್ಜಿದ್ ಅಧ್ಯಕ್ಷರ ಮನೆಗೆ ಕರೆತಂದ. ಆ ದಿನ ರಾತ್ರಿ ಅಲ್ಲೇ ಉಳಿದ. ಮರುದಿನ ರಾತ್ರಿ ಬೆಳಗಾಗುತ್ತಲೇ ಆತ ಎದ್ದು ಹೋದ. ಹಾಗೆ ಹೋದ ಆತ ಮತ್ತೆ ಬರಲಿಲ್ಲ.

ಪಾತು ಅವನ ಬರುವಿಕೆಗಾಗಿ ಮೂರ್‍ನಾಲ್ಕು ದಿನ ಸಂಜೆ ಹೊತ್ತು ಕಾದು ಕುಳಿತಳು. ಕೊನೆಗೆ ಅವ ಕಾಣದೆ ಹೋದಾಗ 'ಎಲ್ಲಿ ಹೋದರು ಅವರು?' ಎಂದು ಅಧೈರ್ಯದಿಂದಲೇ ಮನೆ ಯಜಮಾನಿಯಲ್ಲಿ ಕೇಳಿದಳು. 'ಯಾಕೆ?' ಅವಳು ಪ್ರಶ್ನಿಸಿದಳು. ಪಾತುವಿಗೆ ಮತ್ತೆ ನಾಲಗೆ ಹೊರಡಲಿಲ್ಲ. ಮರುದಿನವೂ ಕಾದಳು. ಪಾತುವಿಗೆ ಮನಸ್ಸು ತಡೆಯಲಿಲ್ಲ. 'ಅವರ ಹೆಸರೇನೆಂದು?' ಕೇಳಿದಳು. ಮನೆ ಯಜಮಾನಿ ನಕ್ಕು 'ನೀನೂ ಒಂದು ಹೆಣ್ಣಾ?' ಎಂದು ಪ್ರಶ್ನಿಸಿದಳು.

'ಪಾತು'ವಿಗೆ ಈಗ ತಾನು ನಡು ನೀರಲ್ಲಿ ಸಿಲುಕಿರುವುದು ತಿಳಿಯಿತು. ತಾನೆಂಥ ಹೆಡ್ಡಿ? ಅವರ ಹೆಸರನ್ನಾದರೂ ಕೇಳಿ ತಿಳಿಯಬಾರದಿತ್ತಾ? ಎಂದು ತನ್ನಲ್ಲೇ ಪ್ರಶ್ನಿಸಿ ನಾಲಗೆ ಕಚ್ಚಿಕೊಂಡಳು.

ದಿನಗಳೆದಂತೆ ಪಾತುವಿನ ಮೈಮೇಲಿದ್ದ ಕೆಲವು ಒಡವೆಗಳು, ಕೈಯಲ್ಲಿದ್ದ ಅಲ್ಪಸ್ವಲ್ಪ ಹಣ ಎಲ್ಲವೂ ಆ ಮನೆ ಯಜಮಾನಿಯ ಪಾಲಾಯಿತು. ಪಾತು ಕೈ ಖಾಲಿ ಮಾಡಿಕೊಂಡು ಸತತ ಕಿರುಕುಳದಿಂದಾಗಿ ಉಪಾಯವಿಲ್ಲದೆ ಮನೆ ಬಿಟ್ಟಳು.

ಹಾಗೇ ಹೊರ ನಡೆದ ಪಾತು ಸೇರಿದ್ದು ಮಾತ್ರ ಗೀತಮ್ಮ ಎಂಬಾಕೆಯ ಮನೆಗೆ. ಗೀತಮ್ಮ ಒಂಟಿ ಹೆಂಗಸಾದ ಕಾರಣ ಪಾತುವನ್ನು ತನ್ನ ಮನೆಯಲ್ಲೇ ಸೇರಿಸಿಕೊಂಡರು. ಅದ್ಹೇಗೋ ಇಬ್ಬರೂ ಅನ್ಯೋನ್ಯವಾಗಿ ಬಿಟ್ಟರು. 'ಪಾತು'ವನ್ನು ಗೀತಮ್ಮ ಪ್ರೀತಿಯಿಂದ 'ಸುಬ್ಬು ಎಂದು ಕರೆಯತೊಡಗಿದಳು.

ಕಾಲ ಉರುಳಿತು. ಹಳೆ ಜನ ಅಳಿದು ಹೊಸ ಜನ ಬಂದರು. ಹಳೆಯ ಜನರು ಪಾತುವಿನ ಬಗ್ಗೆ ಅಷ್ಟೇನೂ ತಲೆಕಡೆಸಿಕೊಳ್ಳಲಿಲ್ಲ. ಪಾತು ಅತ್ತ ಮುಸ್ಲಿಮರ ಸಂಪ್ರದಾಯದಂತೆ ನಮಾಜು ಮಾಡಲಿಲ್ಲ. ಇತ್ತ ಹಿಂದೂ ಸಂಪ್ರದಾಯದಂತೆ ಪೂಜೆ ಕೂಡಾ ಮಾಡಲಿಲ್ಲ.

ಕಾಲಕ್ಕೆ ತಕ್ಕ ಹೊಂದಾಣಿಕೆ ಮಾಡುತ್ತಾ ಬಂದಳು. ದೇಹದಲ್ಲಿ ಬಲವಿದ್ದಾಗ ಪಾತು ಎಂದು ಕರೆದಾಗ ಅಥವಾ ಸುಬ್ಬು ಎಂದು ಕರೆದಾಗ 'ಓ' ಎಂದು ದನಿಗೂಡಿಸುತ್ತಿದ್ದಳು. ಆದರೆ ದಿನಗಳೆದಂತೆ ಆಕೆಯ ದೇಹ ಬತ್ತತೊಡಗಿದಂತೆಯೇ 'ಪಾತು' ಕಣ್ಣು-ಕಿವಿ ಬಿಡತೊಡಗಿದಳು.

ಈ ಮಧ್ಯೆ 'ಪಾತು'ವಿನ ಬಗ್ಗೆ ತಿಳಿದುಕೊಂಡ ಹೊಸ ತಲೆಮಾರಿನ ಯುವಕರು ಆಕೆ ಗೀತಮ್ಮಳ ಮನೆಯಲ್ಲಿ ವಾಸಿಸುವುದು, 'ಸುಬ್ಬು' ಎಂಬ ಹೆಸರಿಗೆ ದನಿಗೂಡಿಸಿದುದರ ಬಗ್ಗೆ ಅಪಸ್ವರ ಎತ್ತಿದರು.

ಕೆಲವು ಯುವಕರು ಪಾತುವನ್ನು ಗೀತಮ್ಮಳ ಮನೆಯಿಂದ ವಿಮೋಚನೆಗೊಳಿಸುವ ಬಗ್ಗೆ ಯೋಚಿಸಿದರು. ಇನ್ನು ಕೆಲವರು ಏನಾದರಾಗಲಿ? ನಮಗೇನು? ಅಂತ ಪ್ರಶ್ನಿಸಿ ಸುಮ್ಮನಾದರು.

ಮುಸ್ಲಿಂ ಯುವಕರ ಇತ್ತೀಚಿನ ವರ್ತನೆಯ ಬಗ್ಗೆ ಅವರ ಪ್ರಾಯ ಸಮಾನರಾದ ಕೆಲವು ಹಿಂದೂ ಯುವಕರು ಕಿಡಿಕಾರಿದರು. 'ಪಾತು'ವಿನ ಬಗ್ಗೆ ವಿಶೇಷ ನಿಗಾ ಇಟ್ಟರು.

ಇದಾಗಿ ಹತ್ತಾರು ವರ್ಷ ಕಳೆದಿವೆ. ಗೀತಮ್ಮ ಮಣ್ಣು ಪಾಲಾಗಿದ್ದಾಳೆ. 'ಪಾತು'ವಿಗೆ ಆಕೆಯ ಗುಡಿಸಲು ಆಸರೆಯಾಯಿತು. ನಂತರ ವಯಸ್ಸಾಗುತ್ತಾ ಬಂದ 'ಪಾತು'ವಿಗೆ ಹಲವರು ದಾರಿ ದೀಪವಾದರು.

ಕಾಲಚಕ್ರ ಉರುಳುತ್ತಲಿದ್ದಂತೆಯೇ ಅದೊಂದು ದಿನ ಪಾತು ಕಣ್ಮುಚ್ಚಿದಳು. ಆವಾಗ ಶುರುವಾಯಿತು ದೊಡ್ಡದಾದ ಒಂದು ರಗಳೆ!

'ಅವಳು ಮುಸ್ಲಿಮಳಾಗಿ ಜೀವಿಸದಿದ್ದರೂ ಚಿಂತಿಲ್ಲ. ಶವಸಂಸ್ಕಾರ ಮಾತ್ರ ಮುಸ್ಲಿಂ ಸಂಪ್ರದಾಯದಂತೆ ನಡೆಯಬೇಕು' ಗುಡಿಸಲ ಮುಂದೆ ಸೇರಿದ ಗುಂಪೊಂದರಿಂದ ಒಬ್ಬ ಹೇಳಿದ.

'ಅದ್ಹೇಗೆ ಹಾಗೆ ಮಾಡುವುದು? ಅವಳು ನೆಮ್ಮದಿಯ ಬದುಕು ಬಾಳಿದ್ದು ಅವಳಿಗೆ ಆಸರೆ ನೀಡಿದ್ದು ನಮ್ಮ ಜನ ಅಲ್ವಾ? ಅವಳ ಸತ್ತ ಆ ಮನಸ್ಸಿಗೆ ನೆಮ್ಮದಿ ಸಿಗಬೇಕಾದರೆ ನಮ್ಮ ಸಂಪ್ರದಾಯದಂತೆ ಶವಸಂಸ್ಕಾರ ನಡೆಯಬೇಕು?' ಅಲ್ಲೇ ಇದ್ದ ಮತ್ತೊಂದು ಗುಂಪಿನಿಂದ ಧ್ವನಿಯೊಂದು ಕೇಳಿ ಬಂತು.

ಅಲ್ಲಲ್ಲಿ ಗುಸುಗುಸು ಆರಂಭವಾಯಿತು. ಚರ್ಚೆಯ ವ್ಯಾಪ್ತಿ ಹೆಚ್ಚಿತು. ಇದನ್ನೆಲ್ಲ ಕೇಳಿಯೂ ಕೇಳಿಸದಂತೆ ಪಾತು ಯಾನೆ ಸುಬ್ಬು ಕಣ್ಮುಚ್ಚಿ ಮಲಗಿದ್ದಾಳೆ. ಒಂದೆಡೆ ಅವಳನ್ನು ಧಫನ ಮಾಡಲು ಇನ್ನೊಂದೆಡೆ ದಹನ ಮಾಡಲು ಜನ ಮುಂದಾದ ಬಗ್ಗೆ, ಪರಿಸ್ಥಿತಿ ವಿಕೋಪಕ್ಕೆ ಹೋಗಬಹುದಾದ ಅಪಾಯದ ಬಗ್ಗೆ ಸ್ಥಳೀಯ ಪೊಲೀಸರಿಗೆ ಮಾಹಿತಿ

ಹೋಯಿತು.

ಕೂಡಲೇ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸ್ ಅಧಿಕಾರಿ ಎರಡೂ ಗುಂಪಿನ ಮುಖಂಡರ ಜತೆ ಮಾತುಕತೆ ನಡೆಸಿದರು. ಆದರೆ ಪೊಲೀಸರ ಮನ ಒಲಿಸುವಿಕೆ ಪ್ರಯತ್ನ ಫಲ ನೀಡಲಿಲ್ಲ.

ಪಾತು ಯಾನೆ ಸುಬ್ಬುವಿನ ಮೃತದೇಹವನ್ನು ಯಾವುದೇ ಒಂದು ಗುಂಪಿಗೆ ಬಿಟ್ಟುಕೊಟ್ಟರೂ ಕೂಡಾ ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತದೆಯೋ ಹೊರತು ತಿಳಿಯಾಗವುದಿಲ್ಲವೆಂದು ಅವರು ಮನಗಂಡರು.

ಮೃತದೇಹವನ್ನು ಜಿಲ್ಲಾಸ್ಪತ್ರೆಯ ಶವಗಾರಕ್ಕೆ ಅಂಬ್ಯುಲೆನ್ಸ್ ಮುಖಾಂತರ ಸಾಗಿಸುವುದೆಂದು ತೀರ್ಮಾನವಾದಾಗ ಏನೋ ಕಳಕೊಂಡವರಂತೆ ಇತ್ತಂಡದವರೂ ಕೈ ಕೈ ಹಿಸುಕಿಕೊಂಡರು.

❖ ❖ ❖

ಉದಯವಾಣಿ ದೈನಿಕ - **16-5-1999**

# ಮದರಂಗಿ

ಕತ್ತಲೆಂದರೆ ಕತ್ತಲು; ತಾಳಿಹಿಂಡು ಕೇರಿಯಿಡೀ ಕತ್ತಲಲ್ಲಿ ಮುಳುಗಿತ್ತು. ಕಣ್ಣಿಗೆ ಕಣ್ಣು ತಾಗಿಸಿದರೂ ಕಾಣದು. ಸೂರ್ಯ ಕಡಲನ್ನು ಚುಂಬಿಸಿ ನೂರಾರು ಘಳಿಗೆ ಆಗಿರಬಹುದು. ಗಾಳಿಯು ತನ್ನ ಚಲನೆಯನ್ನು ಅರ್ಧ ಮಟ್ಟಕ್ಕಿಳಿಸಿತ್ತು. ಮಳೆಗಾಲವಂತು ಅಲ್ಲವೇ ಅಲ್ಲ. ಕಳೆದ ಮೂರು ತಿಂಗಳಿಂದ ಕೇರಿಯ ಜನರಿಗೆ ಕರೆಂಟ್ ಕೈಕೊಟ್ಟಿದ್ದರಿಂದ ಅವರೆಲ್ಲಾ ಮಿಲಮಿಲನೆ ಒದ್ದಾಡುವಂತಾಗಿತ್ತು. ಕೇರಿ ಸೇರುವಾಗ ಮೊದಲು ಸಿಗುವ ಮನೆಯೆಂದರೆ ಇಸ್ಮಾಯಿಲ್‌ರದ್ದು. ಅವರ ಮನೆಗೆ ಕರೆಂಟು ಹಾಯಿಸಿ ಎರಡು ವಾರವಾದುದಷ್ಟೆ... ಅಂತಹದರಲ್ಲಿ ಈಗ ಚಿಮಿಣಿ-ಸೀಮೆಎಣ್ಣೆ ಅಂತ ಪರದಾಡಬೇಕಾದಾಗ ಅವರಿಗೆ ಬಹಳ ಕಷ್ಟವಾಯಿತು. ಜಮೀಲ ತನ್ನ ಎಂಟು ತಿಂಗಳ 'ಸಕೀನಾ'ಳಿಗೆ ಮೊಲೆ ಹಾಲು ಕೊಡುತ್ತಿದ್ದಳು, ಜೈನಾಬು ಬೀಡಿ ಸುರುಟುತ್ತಿದ್ದಳು. ಪುಟ್ಟ ಸಾದಿಕ್ ಕುರಾನ್ ಪಠಿಸುತ್ತಿದ್ದ. ಇಸ್ಮಾಯಿಲ್ ಬೆಂಚೊಂದರಲ್ಲಿ ಕೂತು ಆಯಾಸ ನೀಗಿಸುತ್ತಿದ್ದರು. ದಿನವಿಡೀ ಊರೂರು ಅಲೆದು ಮೀನು ಮಾರುವ ದೇಹವಲ್ಲವೇ ಅವರದ್ದು....? ಹೀಗೆ ಸದ್ದು -ಗದ್ದಲವಿಲ್ಲದೆ ಕ್ರಿಯೆ-ಪ್ರಕ್ರಿಯೆಗೊಳ್ಳುತ್ತಿತ್ತು...

ರಾತ್ರಿ ಒಂಬತ್ತು ಹೊಡೆದಿದ್ದರೂ ಕರೆಂಟಿನ ಸುಳಿವಿರಲಿಲ್ಲ. ಇಸ್ಮಾಯಿಲ್ ಗೊಣಗುತ್ತಲೇ ಮಸೀದಿಯಲ್ಲಿ ನಮಾಜ್ ಮಾಡಲೆಂದು, ಒಂದು ಗ್ಲಾಸು ಬಿಸಿ ನೀರು ಕುಡಿದು ಅಂಗಲಕ್ಕಿಳಿದು ಊರನ್ನೊಮ್ಮೆ ನುಂಗುವಂತೆ ನೋಡಿದಾಗ ಅದು ಅವರಿಗೆ 'ಇರಾಗುಹೆ'ಯಂತೆ ಕಂಡು ಬಂತು. ಇಸ್ಮಾಯಿಲ್‌ರ ಮನೆಯಿರುವುದೂ ಕೂಡಾ ಒಂದು ಗುಡ್ಡೆಯ ನೆತ್ತಿಯ ಮೇಲೆಯೇ... ಅವರ ಮನೆಯ ಸುತ್ತ ಹೆಚ್ಚೆಂದರೆ ಒಂದು ನಾಲ್ಕು ಮನೆ ಇದ್ದೀತು. ಅವರು ಮಸೀದಿಗೆ ಸೇರಬೇಕಾದರೆ ಧೂಮಣ್ಣನ ಗದ್ದೆಯ ಹುಣಿಯನ್ನು ಬಳಸಬೇಕಿತ್ತು. "ಕತ್ತಲಲ್ವಾ? ಹೇಗೆ ಆ ಗದ್ದೆಯ ಹುಣಿಯಲ್ಲಿ ನಡೆಯುತ್ತೀರಿ. ಈ ವಯಸ್ಸಿನ ದಿನಗಳಲ್ಲಿ ಯಾಕಿಷ್ಟು ಹಟ. ಇಲ್ಲೇ ನಮಾಜು ಮಾಡ್ಬಾರದಾ...? ಎನ್ನುತ್ತಾ ಜಮೀಲಾ ತನ್ನ ಮುಖವನ್ನು ಜಡಿದಳು.

ಇಸ್ಮಾಯಿಲ್ ಎಂದೂ ಮಸೀದಿಯಲ್ಲದೆ ಮನೆಯಲ್ಲಿ ನಮಾಜು ಮಾಡಿದವರಲ್ಲ. ಅಂತಹ ಆಪತ್ತು ಒದಗಿ ಬಂದಲ್ಲಿ ಮಾತ್ರ ಮನೆಯಲ್ಲಿ ನಮಾಜು ಮಾಡಿಯಾರು... ಸಾಧಾರಣ ಹನ್ನೆರಡು ಹೊಡೆದಾಗ ಮೀನಿನ ಖಾಲಿ ಬುಟ್ಟಿಯನ್ನು ಅಂಗಳದಲ್ಲಿಟ್ಟು, ಹಸನ್

ಹಾಜಿಯ ತೋಟದ ಬಳಿ ಇರುವ ಕೊಳದಲ್ಲಿ ಸ್ನಾನ ಮಾಡಿ ಬಂದು, ಒಂದು ಹನಿ ಅತ್ತರನ್ನು ಪೂಸಿ ಮಸೀದಿಗೆ ಕಾಲಿಟ್ಟಾಗ ಬಾಂಗ್ ಮೊಳಗುತ್ತದೆ. ನಂತರ ಮಸೀದಿಯಿಂದ ಮನೆಸೇರಿ ಮೀನು ಸಾರಿನ ಊಟವಾದ್ಮೇಲೆ ಪಡಸಾಲೆಯಲ್ಲಿ ಬೀಡಿಕಟ್ಟಲು ಕೂತರೆ, ಮುಸ್ಸಂಜೆ ಏಳು ಗಂಟೆಗೆ ಏಳುವಾಗ ಒಂದು ಆರು ನೂರು ಬೀಡಿಯಾದರೂ ಬುಟ್ಟಿಯಲ್ಲಿ ರಾಶಿ ಬಿದ್ದಿರುತ್ತದೆ.

ಜಮೀಲ ಹೇಳಿದಂತೆಲ್ಲಾ ಕೇಳಲು ಇಸ್ಮಾಯಿಲ್ ಎಂದೂ ತಯಾರಿಲ್ಲ. ಅವಳ ಸ್ವಭಾವ ಕೂಡ ಅವರಿಗೆ ಹೊಸತೇನಲ್ಲ. ನಿಖಾಹ್ ಆದ ನಾಲ್ಕೇ ತಿಂಗಳಲ್ಲಿ ಅವಳನ್ನು 'ಬಜ್ಜಾಲಿ ಹೆಂಗ್ಸು' ಎಂದು ಅವರು ಗುರುತಿಸಿದ್ದಾರೆ. ಸಾಧಾರಣವಾಗಿ ನಿಖಾಹ್ ಆಗಿ ನಾಲ್ಕು ತಿಂಗಳವರೆಗೂ ನನ್ನ ಗಂಡ.. ಎಂದೇಳಿ ಕೊಂಡಾಡುತ್ತಿದ್ದವಳು ಮುಂದೆ ತನ್ನ ಮಾತನ್ನು ಬದಲಿಸತೊಡಗಿದಾಗ ಇಸ್ಮಾಯಿಲ್ ತನ್ನಲ್ಲೇ ನೋವುಂಡವರು.ಅವಳನ್ನು ಕಟ್ಟಿಕೊಂಡು ಹದಿನೇಳು ತಿಂಗಳು ಸಂದಿವೆಯಾದರೂ ಅವರು ಗಂಟಲಲ್ಲಿ ಬಿಸಿ ತುಪ್ಪವಿಟ್ಟು ಕೊಂಡಂತೆ ದಿನದೂಡುತ್ತಾ ಬಂದಿದ್ದರು.

ಜಮೀಲ ಇಸ್ಮಾಯಿಲ್‌ರ ಎರಡನೇ ಹೆಂಡತಿ. ಮೊದಲ ಹೆಂಡತಿ ಮೈಮುನಾಳ ಅನಿರೀಕ್ಷಿತ ಮೌತ್‌ನ ನಂತರ ಇಸ್ಮಾಯಿಲ್‌ರ ಮನೋವೇದನೆಯನ್ನು ಅರ್ಥಮಾಡಿಕೊಂಡ ನೆರೆ ಮನೆಯ ಬಶೀರ್ ಎಂಬಾತ ಅವರು ಹೋದಲ್ಲಿ ಬಂದಲ್ಲಿ ಅವರ ಹಿಂದೆಯೇ ಕಾಲೆಳೆದು ಪುಸಲಾಯಿಸುತ್ತಾ ಇಂತಿಷ್ಟು ವರದಕ್ಷಿಣೆ ಕೊಡಿಸ್ತೇನೆಂದು ಭರವಸೆ ನೀಡಿ ಉಳ್ಳಾಲದ ವಿಧವೆ ಜಮಿಲಾಳ ಬಾಳನ್ನು ಹೊಸ ದಾರಿಗೆ ಕೊಂಡೊಯ್ದಿದ್ದ.

ಜಮೀಲಳಿಗೆ ತನ್ನ ಗಂಡನ ಮೇಲೆ ಸ್ವಲ್ಪವೂ ಮಮತೆ ಇಲ್ಲ. ವಿಧವೆಯಾಗಿದ್ದು ಕೊಂಡ ಅವಳಿಗೆ ಅನಿರೀಕ್ಷಿತವಾಗಿ ಈ ಸಂಬಂಧ ಕೂಡಿ ಬಂದಾಗ್ಲೆ ತನ್ನ ತಂದೆ-ತಾಯಿಯರಿಗೆ ತಾನೊಂದು ಹೊರೆಯಾಗುತ್ತಿದ್ದೇನೆ ಎಂದು ಭಾವಿಸಿ ಹ್ನೂಂ ಕೂಡಿಸಿ ಒಪ್ಪಿಕೊಂಡಿದ್ದಳು. ಜಮೀಲಳ ಮೊದಲ ಗಂಡ ಕುಡಿತಕ್ಕೆ ಬಲಿಯಾಗಿದ್ದರಿಂದ ಸ್ವತ ಇವಳೇ 'ಖುಲಾ' ಬರೆಯುವುದರ ಮೂಲಕ ವಿವಾಹ ವಿಚ್ಛೇದನ ಪಡೆಯಬೇಕಾಯಿತು. ಸಾಧ್ವಿ ಮಣಿ, ತಾಳ್ಮೆ ಸ್ವಭಾವದ ಗುಣ ಸಂಪತ್ತುಳ್ಳ ಇಸ್ಮಾಯಿಲ್‌ರ ಮೇಲೆ ಅವಳಿಗೆ ಮಮತೆ ಬೀಳದಿರಲು ಒಂದು ಕಾರಣವೂ ಇದೆ. ಇಪ್ಪತ್ತೆರಡು ದಾಟುತ್ತಿರುವ ಜಮೀಲಳಿಗೂ ಐವತ್ತೆರಡು ದಾಟಿದ ಇಸ್ಮಾಯಿಲ್‌ರಿಗೂ ಹೇಗೆ ಸರಿಸಾಟಿಯಾದೀತು? ಅವರು ಮೊದಲು ಜಮೀಲಳ ಮುಂದೆ ನಿಂತು ತನ್ನಾಸೆಯನ್ನು ವ್ಯಕ್ತಪಡಿಸಿದಾಗಲೆಲ್ಲಾ ಛೇ... ನಾನು ಜೈನಾಬಿಗೆ ಅನ್ಯಾಯ ಮಾಡಿದೆನೇ....? ಅವಳು ಈಗ ತನ್ನ ಗಂಡನ ಮುಂದೆ ನಿಂತು ಸುಃಖ ದುಃಖ

ಹಂಚಿಕೊಳ್ಳಬೇಕಾದವಳಲ್ಲವೆ? ಎನ್ನುತ್ತಾ ಹಲವಾರು ಬಾರಿ ನೋವುಂಡಿದ್ದಾರೆ.

ಒಂದು ಮಧ್ಯಾಹ್ನ ಇಸ್ಮಾಯಿಲ್ ಆಯಾಸದಿಂದ ಚಾಪೆಯಲ್ಲಿ ಬಿದ್ದುಕೊಂಂಡಿದ್ದಾಗ ಜಮೀಲಾ ಅದನ್ನು ಲೆಕ್ಕಿಸದೆ ಅಡ್ಡ ದಾಟಿ ಹೋದುದನ್ನರಿತು ಕೊಂಡು 'ಏನು ಇವಳೇ... ನಾನು ನಿನ್ನ ಗಂಡ ಅಲ್ಲವಾ? ನನಗೇಕೆ ನೀ ಈ ರೀತಿಯ ಹಿಂಸೆ ಕೊಡ್ತಿಯಾ? ನಾ ಮುದುಕ ಅಂತ ಭಾವಿಸಿಯಾ? ನನ್ನ ಮೈಮುನಾಳಂತೆ ನಿನಗೇಕೆ ಆಗ್ಬಾರದು? ಅವಳೆಷ್ಟು ಮರ್ಯಾದೆಯನ್ನಿಟ್ಟು ನಡೆದು ಕೊಳ್ಳುತ್ತಿದ್ದಳು... ಎನ್ನುತ್ತಾ ಇದ್ದಂತೆಯೇ ಎಂತಾದ್ದು? ಎಲ್ಲಿದ್ದ ಮೈಮುನಾ? ಮಾತು-ಮಾತಿಗೆ ಮೈನಾ ಅಂತೆ... ಅಷ್ಟೊಂದು ಪ್ರೀತಿ ಇದ್ದಿದ್ದರೆ ನಿಮಗೂ ಅವಳೊಟ್ಟಿಗೆ ಹೋಗ್ಬಾರದಿತ್ತಾ? ಅಥವಾ ಕಬರ್‌ನಿಂದ ಎಬ್ಬಿಸಿ ತರಬಾರದಿತ್ತಾ? ಎನ್ನುತ್ತಾ ಜಮೀಲಾ ಮುಖವುಬ್ಬಿಸಿದಾಗ ಇಸ್ಮಾಯಿಲ್ ಸಂಪೂರ್ಣ ತಾಳ್ಮೆ ಕಳಕೊಂಡು ಕೈ ಎತ್ತಿದರೂ ಮನಸ್ಸು ಬಾರದೆ ತನ್ನ ಕರ್ತವ್ಯವನ್ನು ನೆನೆಸಿ ನೋವುಂಡಿದ್ದರು.

ಇಸ್ಮಾಯಿಲ್ ನಮಾಜು ಮಾಡಿ ವಾಪಾಸು ಮನೆ ಮುಟ್ಟಲು ಗುಡ್ಡೆ ಏರುತ್ತಿದ್ದಂತೆಯೇ ಕಾಲಲ್ಲಿ ಶಕ್ತಿ ಕಳಕೊಂಡಿದ್ದರಿಂದ ಆಯಾಸಗೊಂಡು ಅಲ್ಲೇ ಕಲ್ಲೊಂದರಲ್ಲಿ ಕೂತರು. ಕೈಯಲ್ಲಿದ್ದ ಟಾರ್ಚ್ ಲೈಟಿನ ಬೆಳಕಿನಿಂದ, ಹತ್ತುಗಂಟೆಯಾಯಿತೆಂಬುದನ್ನು ತಿಳಿದುಕೊಂಡರು. ಮರದ ಗುಡ್ಡವೊಂದರಿಂದ ನರಿಗಳ ಕೂಗಾಟ ಕೇಳಿ ಬರುತ್ತಿತ್ತು. ಅವರು ತನ್ನ ಹೆಂಡ್ತಿ ಜಮೀಲಾಳ ನಡೆನುಡಿಗಳನ್ನು ನೆನೆದಾಗ ಮೈಮುನಾಳ ನೆನಹು ಕಾಡತೊಡಗಿತು. ಸುಮಾರು ಎರಡು ವರ್ಷಕ್ಕುಂಚೆ ಇಸ್ಮಾಯಿಲ್ ಮುಂಜಾವಿಗೆದ್ದು ಮಾರುಕಟ್ಟೆಯಿಂದ ಮೀನು ತರಲು ಹೋಗುವುದಕ್ಕೆ ಮುಂಚೆ ಸುಬಹ್ ನಮಾಜ್ ಮಾಡಿ ಚಾಪೆಯಲ್ಲಿ ಬಿದ್ದು ಕೊಂಡಿದ್ದ ತನ್ನ ಪ್ರೀತಿಯ ಹೂವಾದ ಮೈನಾಳನ್ನು ತಟ್ಟಿ 'ಮೈನಾ... ಮೈನಾ..., ಏಳು ಬೇಗ....' ಎಂದು ಕರೆದಾಗ ಉತ್ತರವಿಲ್ಲದನ್ನು ಗಮನಿಸಿ 'ಏನಾಯಿತು ಇವಳಿಗೆ? ನಮಾಜು, ಮನೆಗೆಲಸ, ಎಂದೆಲ್ಲಾ ಹೇಳಿ ನಾನು ಏಳುವ ಮುಂಚೆಯೇ ಏಳುತ್ತಿದ್ದಳಲ್ಲಾ...? ಎನ್ನುತ್ತಾ ಹೆದರಿಕೊಂಡು ಎದೆ ನಾಡಿ ನರಗಳಿಗೆ ಕೈ ಇಟ್ಟು ದೇಹವಿಡೀ ಮರಗಟ್ಟಿದ್ದನ್ನು ಅರಿತು ಕೊಂಡು 'ಯಾ ರಬ್ಬೇ... ನನ್ನ ಮೈನಾ ಇನ್ನಿಲ್ವಾ...? ಏಕಾ ಏಕಿ ಪ್ರಶ್ನಿಸಿ ತನ್ನ ಮಗಳನ್ನು ಎಬ್ಬಿಸಿ ಕೂಗಾಡತೊಡಗಿದರು.

ಆಚೆ ಮನೆಯಿಂದ ಕೂಗು ರಂಪಾಟ ಕೇಳಿ ಬರುತ್ತಿರುವುದನ್ನು ಗಮನಿಸಿದ ಆಮಿನಾ ಓಡಿ ಬಂದು ಏನು ಕಾಕಾ? ಏನು ಜೈನಾಬು...? ಎಂದು ಪ್ರಶ್ನಿಸಿ ಮೈಮುನಾಳ ಅಂಗಾತ ದೇಹವನ್ನು ಕಂಡು ಅರ್ಥಮಾಡಿಕೊಂಡು ಕೇರಿಯವರಿಗೆಲ್ಲಾ ಸುದ್ದಿ ಮುಟ್ಟಿಸಿದಳು. 'ಹೀಗೆ

ಅಂದಿನ ಪ್ರತಿಯೊಂದು ಕ್ಷಣಗಳು ಕಣ್ಮುಂದೆ ತೇಲಿಬಂದವು. 'ಈ ಜಮೀಲಾಳಿಗೆ ನನ್ಮೇಲೆ ಯಾಕಿಷ್ಟು ಕೋಪ? ನಾನವಳ ಗಂಡ ಎಂದು ಯಾಕೆ ತಿಳಿದು ಕೊಳ್ಳುವುದಿಲ್ಲ....' ಎಂದು ಪ್ರಶ್ನಿಸಿ ಗಲಿಬಿಲಿಗೊಂಡರು. ಪಾಪ...! ತನ್ನ ಹಾಗೂ ಜಮೀಲಾಳ ವಯಸ್ಸಿನ ಅಂತರವನ್ನು ಅವರು ಗಣನೆಗೆ ತೆಗೆದುಕೊಳ್ಳಲೇ ಇಲ್ಲ?

ಇಸ್ಮಾಯಿಲ್ ಪ್ರತಿದಿನ ಮೀನು ಮಾರಿ ಬಂದು, ಬುಟ್ಟಿ ತೊಳೆಯಲು ಸಾದಿಕ್‌ನಲ್ಲಿ ಒಂದು ತುಂಡು ಸಾಬೂನು ಕೊಟ್ಟು, ಪಕ್ಕದ ತೋಡಿನ ಬಳಿ ಕಳುಹಿಸಿ ಕೊಡುತ್ತಿರುವುದು ಕಳೆದ ನಾಲ್ಕೈದು ತಿಂಗಳಿನಿಂದ ಬಂದ ವಾಡಿಕೆ. ಅವರು ಕೂಡಾ ಅಷ್ಟೇ... ಒಂದು ರೂಪಾಯಿಯ ಚಾಕ್ಲೇಟ್ ಕೊಟ್ಟು ಅವನನ್ನು ಒಳ್ಳೆಯದು ಮಾಡಿಟ್ಟಿದ್ದಾರೆ. ಹೀಗೆ ಒಂದು ದಿನ ಬುಟ್ಟಿ ತೊಳೆಯಲು ಮಗನನ್ನು ಕರೆದಾಗ 'ನಾ ಬರುವುದಿಲ್ಲ... ನಂಗೆ ತುಂಬಾ ಓದ್ಲಿಕ್ಕುಂಟು ಎಂದಾಗ ಅವರು ಸಂಪೂರ್ಣ ಸೋತಿದ್ದರೂ, ತೋರ್ಪಡಿಸದೆ 'ಬಾ ಮೋನೇ... ಇವತ್ತು ಒಂದೇ ದಿನ ಎನ್ನುತ್ತಾ ಎರಡು ರೂಪಾಯಿ ತೋರಿಸಿ ಆಸೆಗೊಳಪಡಿಸಿದಾಗ ಸಾದಿಕ್ ದೀನಿಯಾತ್ ಪುಸ್ತಕವನ್ನು ಮುಚ್ಚಿ ಎದ್ದೋಡಿ ಬಂದ. ಇದನ್ನು ನೋಡಿದ ಜಮೀಲಾ ಕೋಪಿಸಿ 'ಏ ಸಾದಿಕ್ ನೀನು ನಿನ್ನ ಬಾಪನಂತೆ ಮೀನು ಮಾರಿ ಕುರ್ತೆಲ್ ಆಗ್ತಿಯಾ?, ಬಾ... ಇಲ್ಲಿ, ಒಂದಿದ್ದೇ... ಮೀನಿನ ವಾಸನೆ ತಡೆಯಲಿಕ್ಕಾಗುವುದಿಲ್ಲ. ನೀನು ಚೆನ್ನಾಗಿ ಓದಿ ದೊಡ್ಡ ಮೌಲವಿಯಾಗ್ಬೇಕು ಎನ್ನುತ್ತಾ ಬೆತ್ತ ಹಿಡಿದು ಮುಂದೆ ನಡೆದಾಗ ಸಾದಿಕ್ ಹೆದರಿ ಒಳಹೊಕ್ಕು ಆಲಿಫ್, ಬ. ತ. ಸ. ಅ. ರ. ಇ. ರ. ಎಂಬ ಶಬ್ದಗಳನ್ನು ಪಠಿಸ ತೊಡಗಿದ.

ಮುಂದೆ ಇಸ್ಮಾಯಿಲ್ ಉಪಾಯವಿಲ್ಲದೆ ತೋಡಿನ ಬಳಿ ಕಾಲೆಳೆದು ಬುಟ್ಟಿ ತೊಳೆಯುತ್ತಾ 'ಛೆ... ಇವಳಿಗೇನಾಗಿದೆ? ಇವಳಿಗೆ ಯಾರಾದರೂ ಮಾಟ ಮಾಡಿದ್ದಾರಾ..? ಜೈನಾಬು, ಸಾದಿಕ್ ನನ್ನ ಮೈನಾಳಿಂದಾಗಿ ಹುಟ್ಟಿ ಬಂದಿದ್ದರೂ ಇವಳೇಕೆ ಇಷ್ಟು... ಅವರ ಮೇಲೆ ಆಧಿಕಾರ ಚಲಾಯಿಸುತ್ತಾಳೆ' ಎಂದು ತನ್ನಲ್ಲೇ ಪ್ರಶ್ನಿಸಿ ಅವುಡು ಕಚ್ಚಿದರು.

ಜೈನಾಬು ಅಂಗಳದಲ್ಲಿ ನಿಂತ್ಕೊಂಡು, ತಲೆಗೂದಲನ್ನು ಬಿಚ್ಚಿ ಏನನ್ನೋ ದಿಟ್ಟಿಸುತ್ತಿದ್ದಳು. ತನ್ನ ನೋಟದಲ್ಲಿ ಏಕಾಗ್ರತೆ ಇಲ್ಲದಿದರೂ ಅದರಲ್ಲೇ ಮುಳುಗಿರುತ್ತಿದ್ದಳು. ಅವಳು ಈಗ ಮಂಕಾಗಿದ್ದಾಳೆ. ತನ್ನ ತಾಯಿಯ ಅಗಲಿಕೆಯಿಂದಾಗಿ ಮಾನಸಿಕ, ಶಾರೀರಿಕವಾಗಿಯೂ ಬಳಲಿದ್ದಾಳೆ. ಈಗ ಕೆಲಸ ನಮಾಜು, ಕುರಾನ್ ಓದುವುದು, ಸ್ನಾನ ಮಾಡುವುದೂ... ಅಪರೂಪಕ್ಕೊಮ್ಮೆ. ತನ್ನ ತಾಯಿ ಇದ್ದಾಗ ಹೊತ್ತು ಹೊತ್ತಿಗೆ ನಮಾಜು, ಕುರಾನು, ಕೆಲಸ... ಸಲಹೆಗಳನ್ನೆಲ್ಲಾ ನೀಡಿ ಅವಳನ್ನು ಅಚ್ಚ ಸಂಸ್ಕೃತಿಗೆ

ಒಳಪಡಿಸುತ್ತಿದ್ದಳು. 'ಏ.... ಮೋಳೇ... ಅಲ್ಲೇಕೆ ನಿಂತಿದ್ದೀಯಾ? ಬಾ ಒಳಗೆ...' ಎಂದು ಇಸ್ಮಾಯಿಲ್ ಮೆತ್ತಗೆ ಕರೆದು ನನ್ನ ಮೋಳು ಎಷ್ಟು ಬೆಳೆದಿದ್ದಾಳೆ... ನಾನೇಕೆ ಅವಳ ಮದ್ವೆಯ ಬಗ್ಗೆ ಇನ್ನೂ ಚಿಂತಿಸಿಲ್ಲ. ನನ್ನ ಮೈನಾ ಇದ್ದಿದ್ದರೆ ಅವಳ ಹಟದಿಂದಲೇ ಅದ್ಯಾವತ್ತೋ ಇವಳು ತನ್ನ ಗಂಡನ ಮನೆ ಸೇರುತ್ತಿದ್ದಳು...' ಎಂದು ತನ್ನಲ್ಲೇ ನುಡಿದು ಮಗಳ ಮೇಲೆ ಕನಿಕರ ಪಡತೊಡಗಿದಳು. 'ಅದ್ಹೇಗೆ... ಒಳಗೆ ಬರುವುದು? ತನ್ನ ಚಂದವನ್ನು ಹೊರಗಿನವರಿಗೆ ತೋರಿಸಬೇಡವಾ? 'ಎಂದು ಜಮೀಲಾ ಕೊಂಕು ನುಡಿದಾಗ ಕೋಪಗೊಂಡ ಇಸ್ಮಾಯಿಲ್' ಸಲ್ಲಾನತ್ತುಲ್ಲ ಪೋ... ನಿನಗೇನು ತಲೆ ಕೆಟ್ಟಿದೆಯಾ? ಎಂದು ಪ್ರಶ್ನಿಸಿ ಅಲ್ಲಿಂದ ಎದ್ದು ಹೊರಟು ಹೋದರು.

ದಿನಗಳಿರುಳಿದವು. ಇಸ್ಮಾಯಿಲ್ ಗಂಡು ಹುಡುಕುತ್ತಲೇ ತನ್ನ ಮೆಟ್ಟು ಸವೆಸಿದರು. ಎಲ್ಲಿ ಹೋದರೂ ಸರಿಗಟ್ಟಾಗಿ ಸಿಗಲಿಲ್ಲ. ಸಂಬಂಧವೊಂದು ಕೂಡಿ ಬಂದಿದ್ದರೆ ಯಾರಿಂದಲಾದರೂ ಸ್ವಲ್ಪ ಕೈಕಡ ಮಾಡಿ ಖಾನತ್ ಮಾಡ್ತೇನೆಂಬ ಧೈರ್ಯ ಕೂಡಾ ಅವರಿಗಿತ್ತು. ಅಲ್ಲದೆ ಅವರು ತನ್ನ ಹೆಂಡ್ತಿಯ ಮೈಮೇಲಿದ್ದ ಒಂದಿಷ್ಟು ಆಭರಣಗಳನ್ನು ಕೇಳಿದ್ದರು. ಆದರೆ ಅವಳು 'ಹ್ಞೊ... ನಿಮಗಿದು ಕುಶಾಲು? ಇದನ್ನು ಮಾಡಿಸ್ಬೇಕಿದ್ದರೆ ನಾನೆಷ್ಟು ಕಷ್ಟ ಬಂದಿದ್ದೇನೆ ಗೊತ್ತಾ?' ಎಂದು ಪ್ರಶ್ನಿಸಿ ನಯವಾಗಿ ಜಾರಿದ್ದಳು.

ಇತ್ತಿಚೆಗೆ ತಾಳಿಹಿಂಡು ಕೇರಿಯ ಉತ್ಸಾಹಿ ನವತರುಣರ ಪ್ರಯತ್ನದಿಂದಾಗಿ, ಊರ ಅರೇಬಿಕ್ ಶಾಲೆಯಲ್ಲಿ ಮೌಲಾನಾ ಹೊಲಿಗೆ ತರಬೇತಿ ಕೇಂದ್ರವೊಂದು ಸ್ಥಾಪಿತಗೊಂಡಿತ್ತು. ಜಾತಿ, ಮತ, ಭೇದವಿಲ್ಲದೆ ಕೇರಿಯ ಎಲ್ಲಾ ಯುವತಿಯರು ತರಬೇತಿ ಪಡೆಯಬೇಕೆಂಬುದು ತರುಣರ ಮಹತ್ವಾಕಾಂಕ್ಷೆಯಾಗಿತ್ತು. ಇದಕ್ಕಾಗಿ ಕೇರಿಯ ಮನೆಮನೆ ಬಾಗಿಲಿಗೆ ಕಾಲೆಳೆದು 'ಅಣ್ಣಾ.. ಕಾಕಾ...' ಎಂದು ಯಾಚಿಸಿ, ಹುರಿದುಂಬಿಸಿ ಸಮಾಜದ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದರು.

ಹದಿಹರೆಯದವರು ತಮ್ಮ ಆಸೆ-ಆಕಾಂಕ್ಷೆಗಳನ್ನು ಬದಿಗೊತ್ತಿ ನಿಂತ ಕಾಲವನ್ನು, ಅದೆಷ್ಟು ದಿನ ಸಹಿಸಿ ಕಾದು ಕೂತಾರು? ಛೇ... ನಾನೀಗ ಗಂಡನ ಮನೆ ಸೇರಬೇಕಾದವಳು... ತನ್ನ ಅಕ್ಕಪಕ್ಕದವರೆಲ್ಲಾ ಈಗಾಗ್ಲೇ ಗಂಡನ ಮನೆ ಸೇರಿಯಾಗಿಲ್ವಾ? ನನ್ನ ತಾಯಿ ಇಲ್ಲದ್ದಿದ್ದರೆ ನಾನಿಲ್ಲಿ ಇರುತ್ತಿದ್ದೇನೇ?.... ಬಾಪಾನ ಪ್ರಯತ್ನಕ್ಕೆ ಚಿಕ್ಕಮ್ಮ ತಡೆಯೊಡ್ಡುತ್ತಿದ್ದಾಳೆ. ನಾನು ಈಗ ಅದೆಷ್ಟು ದಿನ ಕಾದು ಕೂರಬೇಕು? ಜೈನಾಬು ತನ್ನಲ್ಲೇ ಪ್ರಶ್ನಿಸಿದಳು.

ಮಗಳು ಮಂಕಾಗಿರುವುದನ್ನು ಗಮನಿಸಿದ ಇಸ್ಮಾಯಿಲ್ ಜೇರಿಗೆ ಮೆಣಸಿನಂತೆ

ಚುರುಕಾಗಿರಲಿ ಎಂದು ಭಾವಿಸಿ 'ಟೈಲರಿಂಗ್ ಸ್ಕೂಲ್'ಗೆ ಕಳುಹಿಸಿ ಕೊಟ್ಟಿದ್ದರು. ಅವಾಗಲೂ ಜಮೀಲ ಅಡ್ಡ ಬಂದು ಸ್ವಲ್ಪ ಫೌಡ್ರು ಕೂಡಾ ತೆಗೆದು ಕೊಡಿ... 'ವಾರಕ್ಕೊಂದು ಡಬ್ಬ ಬೇಕಾದೀತು' ಎನ್ನುತ್ತಾ ನಂಜು ಕಾರಿದ್ದಳು.

ನಾಲ್ಕೈದು ತಿಂಗಳು ಸತ್ತಿತ್ತು. ಜೈನಾಬು ಟೈಲರಿಂಗ್ ಸ್ಕೂಲ್‌ಗೆ ಹೋಗಿ ಬರುತ್ತಿದ್ದಳು. ಹತ್ತಾರು ಹುಡುಗಿಯರೊಡನೆ ಕೂಡಿ ಬೆರೆಯತೊಡಗಿದ್ದರಿಂದ ತನ್ನ ಮಂಕುತನವನ್ನು ತೊಳೆದಿದ್ದಾಳೆ. ಅಪರೂಪಕ್ಕೊಮ್ಮೆ ಇಸ್ಮಾಯಿಲ್‌ರಿಗೆ ಗೊತ್ತಿಲ್ಲದಂತೆ ತನ್ನ ಗೆಳತಿಯರ ಮನೆಗೂ ಹೋಗಿದ್ದಾಳೆ. ಈಗವಳು ಮಾನಸಿಕವಾಗಿ ಶಾರೀರಿಕವಾಗಿ ಸಂಪೂರ್ಣ ತೃಪ್ತಿ ಹೊಂದಿರುವಳು. ಒಮ್ಮೊಮ್ಮೆ ತನ್ನ ಚಿಕ್ಕಮ್ಮಳಿಗೆ ಮಾತಿಗೊಂದರಂತೆ ಎದುರುತ್ತರ ನೀಡುತ್ತಾಳೆ. ಬಿಡುವಿದ್ದಾಗಲೆಲ್ಲಾ ಬೀಡಿ ಕಟ್ಟಿ ಕೂಡಿಟ್ಟ ಹಣದಿಂದ ಪೌಡ್ರು, ಸ್ನೋ, ಲಿಪ್ಟಿಕ್ಸ್... ಹೀಗೆ ಆಧುನಿಕ ಅಲಂಕಾರದ ಸಾಮಾಗ್ರಿಗಳನ್ನು ಖರೀದಿಸುತ್ತಿದ್ದಳು...

ಜೈನಾಬು ತನ್ನ ಸ್ಕೂಲಿಗೆ ಹೋಗಿ ಸೇರಬೇಕಾದರೆ 'ಪುತ್ತಾಕ'ರ ಅಂಗಡಿ ದಾಟಬೇಕಾಗಿತ್ತು. ಇತ್ತೀಚೆಗೆ ಅವರು 'ಪಕ್ಷವಾತ' ಸೀಕು ಹಿಡಿದು ಮೂಲೆಯಲ್ಲಿ ಬಿದ್ದುಕೊಂಡಿದ್ದರಿಂದ ಜೀನಸಿ ಅಂಗಡಿಯನ್ನು, ಹಿರಿಯ ಮಗ ಉಬೇದ್ ನೋಡಿಕೊಳ್ಳುತ್ತಿದ್ದ. ದಿನಾಲು ಅಂಗಡಿಯ ಮುಂದೆ ಹಾದು ಹೋಗುವ ಹತ್ತೊಂಬತ್ತು ಹರೆಯದ 'ಚೆಂದುಳ್ಳಿ'ಯಲ್ಲಿ ಮಾತನಾಡಬೇಕೆಂಬ ತವಕ... ಆದರೆ ಮಾತೆತ್ತಲು ಒಂದು ವಸ್ತು ಬೇಕಲ್ವಾ? ಆದರೂ ಅಂಗಡಿಯ ಮರೆಯಲ್ಲಿ ನಿಂತು ಅವಳ ಸೌಂದರ್ಯವನ್ನು ಸವಿಯುತ್ತಾ ತೃಪ್ತಿಪಟ್ಟುಕೊಳ್ಳುತ್ತಿದ್ದ... ಮುಂದೆ ಓರೆಗಣ್ಣಿನ ನೋಟ, ಕೈಸನ್ನೆಯ ಮಾತುಗಳೆಲ್ಲವೂ ಪ್ರೇಮಾಂಕುರವಾಗಿ ಬೆಳೆಯಲು ಹೆಚ್ಚು ದಿನಗಳೇನು ಬೇಕಾಗಲಿಲ್ಲ. ಮುಂದೆ ಯಾರೂ ಕಾಣದ (?) ಸ್ಥಳಗಳಲ್ಲಿ ಮರೆಯಾಗಿಕೊಂಡು ಭೇಟಿಯಾದದ್ದು ಅದೆಷ್ಟು ಬಾರಿಯೋ...

ಕಾಲಚಕ್ರ ತಿರುಗುತ್ತಿದ್ದಂತೆಯೇ, ಸಮಾಜದಲ್ಲಿ ನಡೆಯುವ ಘಟನೆಗಳು ಎಲ್ಲರಿಗೂ ತಿಳಿಯದಿರುವುದಿಲ್ಲ, ಅವರಿಗೆ ಆಹಾರವಾಗದಿರುಪುದಿಲ್ಲ... ಅಂತೆಯೇ ಇವರಿಬ್ಬರ ಪ್ರೇಮಹಗರಣವೂ ಇಡೀ ಕೇರಿ ಹಬ್ಬಿತ್ತು. ಅದನ್ನು ಕಂಡು ಹಿಡಿದು ಇಡೀ ಕೇರಿ ಚೆಲ್ಲಿದ್ದು ಇಬ್ಬರು ಪೋಕ್ರಿ ಹುಡುಗರೇ... 'ಅಂದು ಮಧ್ಯಾಹ್ನ.... ಸಾದಿಕ್ ತಮ್ಮ' ಹಿತ್ತಲಿನಲ್ಲಿ ಕತ್ತಿಯಿಂದ ಗೇರುಬೀಜ ಕೊಯ್ದು ತಿನ್ನುವುದರಲ್ಲೇ ತಲ್ಲೀನನಾಗಿದ್ದ... ತುಸು ದೂರದಿಂದ ಬಲವಾದ ಒಂದೆರಡು ಸಿಳ್ಳು ಅವನಿಗೆ ಕೇಳಿಸಿತು. ಸಾದಿಕ್ ಕಣ್ಣು ಹಾಯಿಸಿದಾಗ ಇಬ್ಬರು ತನ್ನನ್ನೇ ಕೈ ಬೀಸಿ ಕರೆಯುವುದನ್ನು ಗಮನಿಸಿ ಮೆಲ್ಲನೆ ಎದ್ದು ಕತ್ತಿಯನ್ನು ಅಲ್ಲೇ ಬಿಟ್ಟು

ಅವರ ಬಳಿ ಸೇರಿದ. ಮಟಮಟ ಮಧ್ಯಾಹ್ನ... ಸುಡುವ ನೆಲ... ಬಿಸಿಲಿನ ಹೊಡೆತ ತಿನ್ನುವ ತಲೆ... ಒಂದು ಲೆಕ್ಕದಲ್ಲಿ ಜನ ಈ ಬಿಸಿಲಿಗೆ ಹೆದರಿ ಮನೆಯೊಳಗೆ ಇರ್ಬೇಕಾಗಿತ್ತು? ಅಂತಹ ತೀಕ್ಷ್ಣ ಬಿಸಿಲು... 'ಬಾ ಸಾದಿಕೇ... ಬಾ... ಅನ್ನುತ್ತಾ ಒಬ್ಬಾತ ಸಾದಿಕ್‌ನ ಭುಜದಲ್ಲಿ ಕೈಯೂರಿದ. ಸಾದಿಕ್ ಕಣ್ಣಿನಿಂದಲೇ 'ಎಲ್ಲಿಗೆ?' ಅಂತ ಪ್ರಶ್ನಿಸಿ ಹಿಂದೆ ಮುಂದೆ ನೋಡತೊಡಗಿದ 'ಏನಿಲ್ಲ... ಬಾ, ಸಾದಿಕ್... ನಿನಗೆ ಹಕ್ಕಿಯ ಮರಿ ಅಂದ್ರೆ ತುಂಬಾ ಪ್ರೀತಿ ಅಲ್ವಾ? ಬಾ, ಓ... ಇಲ್ಲೆರಡು ಕುನ್ನಿ ಇದೆ...' ಅನ್ನುತ್ತಾ ಸಾದಿಕ್‌ನ ಕೈ ಹಿಡಿದು ದರದರನೆ ನಡೆಯತೊಡಗಿದ. ಸಾದಿಕ್.... ಬಲು ಉಲ್ಲಾಸದಿಂದ ಹಿಡಿದು ನನ್ನ ಕೈಯಲ್ಲೇ ಕೊಟ್ಟು ಬಿಡು' ಎನ್ನಲೂ ಮರೆಯಲಿಲ್ಲ.

'ಹೂಂ ನಿನ್ನ ಕೈಯಲ್ಲೇ ಕೊಡ್ತೇನೆ ಆದರೆ ಜೋರಾಗಿ ಮಾತನಾಡಬೇಡ. ಅದು ಹಾರಿ ಹೋದೀತು...' ಎನ್ನುತ್ತ ಮತ್ತೊಬ್ಬ 'ಓ... ಅಲ್ಲಿ, ನೋಡು ಸಾದಿಕ್...' ಎನ್ನುತ್ತಾ ಕೈ ತೂರಿದಾಗ ಸಾದಿಕ್ ಪಿಳಿಪಿಳಿ ಕಣ್ಣು ಬಿಟ್ಟು ನೋಡಿದ. ಸ್ವಲ್ಪದರಲ್ಲೇ ಆತನ ಮುಖ ಬಾಡಿದ್ದನ್ನು ಇಬ್ಬರೂ ಗಮನಿಸಿದರು. ಏನು ಸಾದಿಕ್... ಏನಾಯಿತು? ಎಂದು ಗಮನಿಸಿ ಇಬ್ಬರೂ ಮುಗುಳ್ನಕ್ಕರು ಸಾದಿಕ್ ಅವರ ಮುಗುಳ್ನಗೆಯನ್ನು ಅರ್ಥ ಮಾಡಿಕೊಂಡು ಕೋಪದಿಂದ ತನ್ನ ಶಕ್ತಿಯನ್ನೆಲ್ಲಾ ಒಗ್ಗೂಡಿಸಿ ಅಕ್ಕಾ....? ಎನ್ನುತ್ತಾ ಬಲವಾಗಿ ಕೂಗಿ ಅತ್ತ ಓಡಿದ. ಆ ಧ್ವನಿಗೆ ಎಚ್ಚೆತ್ತ ಜೈನಾಬು ಕಣ್ಣರಳಿಸಿ ಎಡಗಡೆ ತಿರುಗಿದಾಗ ಸಾದಿಕ್ ನಿಂತುದನ್ನು ಕಂಡು 'ಸಾದಿಕ್ ನೀನಿಲ್ಲಿ?' ಎನ್ನುತ್ತಾ ಭಯ ಆತಂಕದಿಂದ ಪ್ರಶ್ನಿಸಿ ತನ್ನೆಲ್ಲಾ ಸೆರಗನ್ನು ಸರಿಪಡಿಸಿ 'ಮೋನೇ.... ಬಾಪನಲ್ಲಿ ಹೇಳ್ಬೇಡ.... ನಡಿ ಮುಂದಕ್ಕೆ....' ಎನ್ನುತ್ತಾ ಉಬೇದ್‌ನ ಕಡೆ ಗಮನಹರಿಸದೆ ಸಾದಿಕ್‌ನ ಕೈ ಹಿಡಿದು ಲಗುಬಗೆಯಿಂದ ಹೆಜ್ಜೆ ಹಾಕಿದಾಗ ಅಕ್ಕಾ ಅಲ್ಲಿಂದ ಹೋಗುವುದು ಬೇಡ, ಅಲ್ಲೆರಡು ಮಕ್ಕಳಿದ್ದಾರೆ ಎನ್ನುತ್ತಾ ಸಾದಿಕ್ ಅಲ್ಲೇ ನಿಂತು ಅಡ್ಡ ದಾರಿ ಹುಡುಕುವಷ್ಟರಲ್ಲಿ 'ಇದಾ ಸಾದಿಕ್, ನಾವಿಲ್ಲಿ... ತುಕ್.... ನಿನ್ನ ಅಕ್ಕನ ವಿಷಯವೆಲ್ಲಾ ಗೊತ್ತಾಯಿತು.' ಎಂದು ಹೇಳುವ ಸ್ವರ ತೇಲಿ ಬಂದ ಕಡೆಗೆ ಜೈನಾಬು ಕತ್ತು ಎಸೆದಾಗ ಇಬ್ಬರೂ ಮುಸಿಮುಸಿ ನಗುತ್ತಿದ್ದರು. ಅವಳು ಬಲ ಕಡೆ ತಿರುಗಿ 'ಉಬೇದ್ ಎಲ್ಲಿರುವನು?' ಎಂದು ತಿಳಿಯಲು ಕತ್ತುದ್ದ ಮಾಡಿದಾಗ ಅವನ ಸುಳಿವಿರಲಿಲ್ಲ. ಅವ ಆಗ್ಲೇ ಕಣ್ಮರೆಯಾಗಿದ್ದ.

ಕೇರಿ ಇಡೀ ಹಬ್ಬಿದ ಸುದ್ದಿಯಿಂದಾಗಿ ಇಸ್ಮಾಯಿಲ್ ತತ್ತರಿಸಿದ್ದರು, ತುಂಬಾ ಬಳಲಿ ನೊಂದು ಕೊಂಡಿದ್ದರು ಪಕ್ಕಾ ಸುನ್ನಿ ಮುಸಲ್ಮಾನರಾಗಿದ್ದುಕೊಂಡ ಅವರಿಗೆ ಮಗಳ ಈ

ವರ್ತನೆ ಹಿಡಿಸಲಿಲ್ಲ. 'ಇಲ್ಲಾ... ಭಯವಿಲ್ಲ... ನನ್ನ ಮಗಳಿಗೆ ಅಲ್ಲಾಹನ ಭಯವಿಲ್ಲ... ನನ್ನ ಮಗಳನ್ನು ಕಟ್ಟಿಕೊಳ್ಳಲು ಇನ್ನು ಯಾರು ಮುಂದೆ ಬಂದಾರು? ನಾನು ಯಾವ ಮುಖ ಹೊತ್ತು ಮುಂದೆ ಸಂಬಂಧ ಗೊತ್ತುಪಡಿಸಲಿ?' ಎಂದು ಅವರು ತನ್ನಲ್ಲೇ ಪ್ರಶ್ನಿಸಿ ನೋವುಂಡರು. ಈ ಮಧ್ಯೆ ಜಮೀಲಾ ತುಟಿ ಪಿಟಿಕಿತ್ತಲಿಲ್ಲ... ಜೈನಾಬುಳ ಮೇಲೆ ಕನಿಕರ ಪಡದೆ ಅವಳು ತನ್ನಲ್ಲೇ 'ಒಳ್ಳೆದಾಯ್ತು' ಎನ್ನುತ್ತಾ ಹುಸಿ ನಗೆ ಬೀರಿದ್ದಳು...

ಮುಂದೆ ಇಸ್ಮಾಯಿಲ್ ತಾಳಿ ಹಿಂಡು ಕೇರಿಯ ಜುಮ್ಮಾ ಮಸೀದಿಯ ಅಧ್ಯಕ್ಷರಲ್ಲಿ 'ಹೀಗ್ಹೀಗೆ ಕಾಕಾ... ನನಗೆ ನ್ಯಾಯ ಬೇಕು... ನನ್ನ ಮಗಳನ್ನು ಕಟ್ಟಿಕೊಳ್ಳಲು ಯಾರು ಮುಂದೆ ಬರ್ತ್ತಾರೆ? ಆ ಪುತ್ತಾಕರಲ್ಲಿ ಈ ವಿಷಯದ ಬಗ್ಗೆ ಮಾತಾಡಿ, ನನ್ನ ಮಾನ ಮರ್ಯಾದೆ ಉಳಿಸಿ...' ಎಂದು ತನ್ನ ಅಳಲನ್ನು ತೋಡಿಕೊಂಡರು. ಇಸ್ಮಾಯಿಲ್‌ರ ಅಳಲನ್ನು ಅಧ್ಯಕ್ಷರು ಸಂಪೂರ್ಣ ಅರ್ಥಮಾಡಿಕೊಂಡಿದ್ದಿರಬೇಕು, ಇಲ್ಲವೇ ಅವರಿಗಂದು ಒಳ್ಳೆಯ ದಿನವಾಗಿರಬೇಕು, 'ನೋಡು... ಇವನೇ.... ನನ್ನಲ್ಲಿ ಆಗದವರು ನನ್ನ ಕಾಲರ್ ಹಿಡಿದು ನನ್ನ ಹೆಸರಿಗೆ ಕಳಂಕ ತಂದರೂ ಚಿಂತಿಲ್ಲ. ನಿನ್ನ ಮಗಳಿಗೆ ಅವನನ್ನೇ ನಾನು ಕಟ್ಟಿ ಕೊಡಿಸ್ತೇನೆ. ಅವ ಬೇರೆ ಯಾರ ಜೊತೆ ಚಕ್ಕಂದ ಮಾಡ್ತಾನೆಂದು ನಾ ನೋಡ್ತೇನೆ' ಎನ್ನುತ್ತಾ ಅಧ್ಯಕ್ಷರು ಇಸ್ಮಾಯಿಲ್‌ರಿಗೆ ಸಮಾಧಾನ ನುಡಿದರು.

ಪಕ್ಷವಾತ ರೋಗ ಹಿಡಿದು ಮೂಲೆ ಸೇರಿದ ಪುತ್ತಾಕರ ಬಳಿ ಅಧ್ಯಕ್ಷರು ಹೋಗಿ 'ಹೀಗ್ಹೀಗೆ ಆಗಿದೆಯಲ್ಲಾ? ಏನು ಮಾಡ್ತೀಯಾ? ಎಂದು ನೇರ ಪ್ರಶ್ನೆ ಹಾಕಿದರು. ಅಲ್ಲಾ... ಕಾಕಾ... ನೀವು ಹೇಳುವುದೆಲ್ಲ ಸರಿ.... ಅವಳೊಂದು ಹೆಣ್ಣಲ್ವಾ? ಮುಸುಕು ಹಾಕಿ ಒಳ್ಳೆಯ ಮರ್ಯಾದೆಯಲ್ಲಿ ಮನೆಯಲ್ಲಿರಬಾರದಾ? ಅದು ಬಿಟ್ಟು ಕೇರಿಯಿಡೀ ತಿರುಗಾಡಿ ಧರ್ಮವನ್ನು ಕಾಸಿಗಾಗಿ ಮಾರುವುದಾ?' ಎಂದು ಪುತ್ತಾಕ ಅಧ್ಯಕ್ಷರಿಗೆ ಸವಾಲು ಹಾಕಿದರು. 'ಅದೆಲ್ಲಾ ಇರ್ಲಿ... ನಿನ್ನ ಪುರಾಣ ಬೇಡ.... ಈಗೇನು ಮಾಡ್ತೀಯಾ ಹೇಳು? ನೀ ಗ್ರಹಿಸಿರಬಹುದು, ಅವಳದ್ದೇ ತಪ್ಪು ಎಂದು. ಆದರೆ ಜ್ಞಾಪಿಸಿಕೋ... ಎರಡು ಕೈ ತಟ್ಟಿದರೆ ಮಾತ್ರ ಚಪ್ಪಾಳೆಯಾಗ್ತದೆ ಎಂಬುದನ್ನು... ಒಂದು ವೇಳೆ ಇದೇ ಸ್ಥಾನದಲ್ಲಿ ನಿನ್ನ ಮಗಳು ನಿಂತಿದ್ದರೆ ನೀನೇನು ಮಾಡುತ್ತಿದ್ದಿ...' ಎನ್ನುತ್ತಾ ಅಧ್ಯಕ್ಷರು ತೀಕ್ಷ್ಣವಾದರು. ಅಧ್ಯಕ್ಷರ ಗಡಸುತನವನ್ನು ತಿಳಿದುಕೊಂಡ ಪುತ್ತಾಕ ಮುಂದೆ ಮೆತ್ತಗೆ ಮಾತಾಡತೊಡಗಿದರು. 'ಅಲ್ಲ ಕಾಕಾ... ಅವಳನ್ನು ನಾವೇ ನಮ್ಮ ಮನೆಯ ಸೊಸೆಯಾಗಿ ತೆಗೆದುಕೊಳ್ತೇವೆ. ಆದರೆ ಈಗಲ್ಲ.... ಒಂದೆರಡು ವರ್ಷದ ನಂತರ, ಸ್ವತ ನಾನೇ ನಿಂತು ಮದ್ವೆ ನಡೆಸಿಕೊಡ್ತೇನೆ.

ಯಾಕೆಂದರೆ ಇನ್ನೆರಡು ತಿಂಗಳಲ್ಲಿ ಉಬೇದ್ ಸೌದಿಗೆ ಹೋಗಲಿದ್ದಾನೆ. ಮತ್ತೆ ಅವ ಸೌದಿಗೆ ಹೋಗಿ ಬಂದ್ಮೇಲೆ ಗಡದ್ದಾಗಿ ಮದ್ವೆ ಮಾಡುವಾ ಅಷ್ಟರವರೆಗೂ ಹೀಗೆ ಇರ್ಲಿ' ಎನ್ನುತ್ತಾ ಪುತ್ತಾಕ ಅಧ್ಯಕ್ಷರ ಮುಖವನ್ನೇ ದಿಟ್ಟಿಸತೊಡಗಿದರು. 'ಇನ್ನು ಲಾಕುಗಟ್ಲೆ ವರ್ಷ ಮುಂದಕ್ಕೆ ಕೊಂಡ್ಹೋಗಿ ಅವಳ ಬಾಳು ಹಾಳು ಮಾಡುವುದು ಬೇಡಾ... ಈವತ್ತು ಗುರುವಾರ ಅಲ್ಲವಾ... ಏನಿದ್ದರೂ ಈವತ್ತೇ, ಇದ್ದವರಲ್ಲಿ ಖಾನತ್ ಮಾಡುವಾ... ಇದಕ್ಕೆ ನೀ ಒಪ್ಪದಿದ್ದರೆ ಮುಂದಿನದನ್ನು ನಾ ನೋಡಿಕೊಳ್ತೇನೆ' ಎನ್ನುತ್ತಾ ಅಧ್ಯಕ್ಷರು ಎದ್ದು ನಿಂತರು.

ಇದ್ದ ಅಲ್ಪ-ಸ್ವಲ್ಪವನ್ನು ಭರ್ತಿ ಮಾಡಿ ರಾತ್ರಿ ಎಂಟು ಗಂಟೆಗೆ ನಿಖಾಹ್ ಮಾಡುವುದೆಂದು ಊರವರಿಗೆಲ್ಲಾ ತಿಳಿದಾಗಿದೆ. ಇನ್ನು ವಿಶೇಷ ಆಮಂತ್ರಣವೇನಿಲ್ಲ. 'ಮಗಳು ಚೆನ್ನಾಗಿದ್ದರಾಯ್ತು' ಎಂದು ಬಗೆದಿದ್ದ ಇಸ್ಮಾಯಿಲ್ ಒಂದಿಪ್ಪತ್ತು ಲೋಟ ಲಿಂಬೆಹುಳಿ ಶರಬತ್ತು, ಒಂದು ಗೊನೆ ಬಾಳೆಹಣ್ಣನ್ನು ರೆಡಿಮಾಡಿಟ್ಟರು. ಈ ಮಧ್ಯೆ ಜಮೀಲಾ ಯಾವುದೋ ಒಂದು ನೆಪವೊಡ್ಡಿ ತವರು ಮನೆಗೆ ಹೋದವಳು ಇನ್ನೂ ಬಂದಿಲ್ಲ. ಅಂತೂ ನೆರೆಮನೆಯ ಬೂರ್ಖಾಗಳೆಲ್ಲಾ ಮಾಪಿಳ್ಳೆ ಹಾಡು ಹಾಡುತ್ತಾ ಜೈನಾಬುಳ ಪುಟ್ಟ ಬಿಳಿಬಿಳಿ ಕೈಗೆ ಮದರಂಗಿ ಹಚ್ಚತೊಡಗಿದರು. ಅತ್ತ ಪುತ್ತಾಕರ ಮನೆಯಲ್ಲೂ ಮಂದಗತಿಯಿಂದ ಕೆಲಸಗಳು ಸಾಗುತ್ತಿತ್ತು.

ಇಸ್ಮಾಯಿಲ್ ಬಿಳಿ ಶುಭ್ರ ಬಟ್ಟೆ ಧರಿಸಿ ಮಸೀದಿ ಬಳಿ ಸೇರಿದರು. ಈಗಾಗಲೇ ಕೆಲವೊಂದು ತೀಕ್ಷ್ಣ ಬುದ್ಧಿ ಹಾಗೂ ಮಂದ ಬುದ್ಧಿಯುಳ್ಳವರು ಬೀಡಿ ಚುಂಬಿಸುವುದರಲ್ಲಿ, ವೀಳ್ಯದ ಎಲೆಯ ರಸ ಹೀರುವುದರಲ್ಲಿ ಮಗ್ನರಾಗಿದ್ದರು. ಮಸೀದಿಯ ಒಂದು ಮೂಲೆಯಲ್ಲಿ ಹುಲಿಯಂತೆ ಕೂತಿರುವ ನಾಲ್ಕೈದು ಆನೆಯಾಕಾರದವರು ಮಾತಿನಲ್ಲಿ ಮುಳುಗಿದ್ದರು. ಅವರ ಹೊಟ್ಟೆ ನೆಲಕ್ಕೆ ತಾಗುವಂತಿತ್ತು. ಕಣ್ಣು ಕೆಂಪಾಗಿತ್ತು. ರಕ್ಕಸಿಗಳಂತೆ ಕೂದಲನ್ನು ಬೆಳೆಸಿದ್ದರು. ಬಂದವರೆಲ್ಲಾ ಮೊದಲು ದಿಟ್ಟಿಸಿ ನೋಡುವುದು ಅವರನ್ನೇ... ಅವರ ದೇಹವನ್ನು ನೋಡಿ 'ಯಾರಪ್ಪಾ ಇದು?' ಎಂದು ತನ್ನಲ್ಲೇ ಪ್ರಶ್ನಿಸಿ ಮುಖ ಸಣ್ಣದು ಮಾಡಿ ಒಳ ಹೋಗುತ್ತಲಿದ್ದರು. ಇಸ್ಮಾಯಿಲ್ ಕೂಡಾ ಮೊದಲು ಕಂಡದ್ದು ಅವರನ್ನೇ... ಅದಲ್ಲದೆ ಅವರು ಇದು ಆ ಪುತ್ತಾಕ ತಂದ ಜನ ಎಂದು ಭಾವಿಸಿದ್ದರು. ಅವರು ತನ್ನ ಹುಬ್ಬಿಗೆ ಕೈ ಇಟ್ಟು ಅವರನ್ನು ನೋಡುತ್ತಲೇ, ಅಧ್ಯಕ್ಷರ ಬಳಿ ಸಾಗಿ 'ಯಾರದು?' ಎಂದು ಪ್ರಶ್ನಿಸಿ ನಡುಗಿದರು. ನಿನಗೆ ಗೊತ್ತಿಲ್ಲ ಇವನೇ... ಆ ಪುತ್ತಾಕನ ಹಣೆಬರಹ ನನಗೆ ಗೊತ್ತಿಲ್ಲದ್ದಕ್ಕಾ.... ಅವ, ಮಗ ಸೌದಿಗೆ ಹೋಗಿ ಬರಲಿ ಅಂದದ್ದೇಕೆ? ಅದಲ್ಲದೆ ಅವ

ಖಾನತ್‌ಗೆ ಕೂತಾಗಲಾದರೂ ಜನ ತಂದು ದೊಡ್ಡ ರಾದ್ಧಾಂತ ಮಾಡಿಯಾನು? ಅದಕ್ಕೆ... ನಾವು ಸ್ವಲ್ಪ ಎಚ್ಚರದಿಂದಿರಬೇಕು... ಎನ್ನುತ್ತಾ ಅಧ್ಯಕ್ಷರು ನಕ್ಕರು.

ಅಂತೂ 'ನಿಖಾಹ್' ನೆರವೇರಿತ್ತು. ಇಸ್ಮಾಯಿಲ್‌ರ ಮುಖ ಹೂವಿನಂತೆ ಅರಳುತ್ತಿತ್ತು. ಸೇರಿದ್ದಾಳುಗಳ ಬಾಯಿಗಳು ಸಿಹಿಯಾದವು. ಒಂದಿಬ್ಬರು ನಗೆ ಮಾತನ್ನು ಎಲ್ಲರಿಗೂ ಉಣಬಡಿಸಿದರು. ಕೆಲವರು ಅಡ್ಡಾದಿಡ್ಡಿ ಕೂತು ಹಗರಣದ ಬಗ್ಗೆ ಮಾತೆತ್ತ ತೊಡಗಿದರು.'ಅಲ್ಲ, ಅವಳನ್ನು ಎಲ್ಲಿಗೋ ಕರಕೊಂಡು ಹೋಗ್ತಾನಂತೆ' ಒಬ್ಬ ಧ್ವನಿ ಎತ್ತಿದ.

'ಹೋಗ್ಲಿ... ಅವನ ಹೆಂಡ್ತಿಯನ್ನಲ್ವಾ' ಮತ್ತೊಬ್ಬ ನುಡಿದ.

'ನಿಲ್ಲಿ... ಈಗ ಖಾನತ್ ನಡೆದದ್ದಷ್ಟೇ... ಒಂದು ರಾತ್ರಿ ಒಟ್ಟಿಗೆ ಕೂಡದೆ ಇಂದೇ ಎಲ್ಲಿಗೋ ಕರಕೊಂಡು ಹೋಗ್ತೇನೆಂದರೆ....? ಅದಿರಲಿ, ಮದ್ವೆಯಾಗುವ ಮೊದಲು ಸೌದಿಗೆ ಹೋಗ್ತೇನೆಂದು ಹೇಳಿ ತಿರುಗಾಡುತ್ತಿದ್ದನಲ್ಲಾ? ಮತ್ತೆ, ಅದು ಈಗ ಎಲ್ಲಿಗೆ ಹೋಯ್ತು? ಇದರಲ್ಲೇನೋ ಕಿತಾಪತಿ ಇದೆ... ಸರಿಯಾಗಿ ವಿಚಾರಿಸದಿದ್ದಲ್ಲಿ, ಅವ ನಮ್ಮನ್ನು ಮಂಗ ಮಾಡಿಯಾನು....' ಮೊದಲಿನವ ಎಲ್ಲರಿಗೂ ಕೇಳುವಂತೆ ದೊಡ್ಡ ಸ್ವರ ಎಬ್ಬಿಸಿದ. ಇದನ್ನು ದೂರದಲ್ಲಿ ಆಲಿಸಿದವರೆಲ್ಲಾ ಆತನ ಬಳಿ ಬಂದು 'ಏನು'? ಎಂತ ಯಾಚಿಸಿದರು.

'ಅದ್ಯಾಕೆ...! ಅವನಿಗೆ ಇಲ್ಲಿದ್ರೆ ಏನಾಗ್ತದಂತೆ? ದೂರದ ಊರಲ್ಲಿ ಮನೆ ಮಾಡುವ ವಿಷಯವಾ ಇವನದು.... ಅಲ್ಲಾ, ಬಾವಿಗೆ ದೂಡ್ಲಿಕ್ಕಾ...., ರೈಲಿನಡಿಗೆ ತಲೆ ಇಡಿಸ್ಲಿಕ್ಕಾ...? ಅಬ್ಬಾ...! ಇಷ್ಟು ಆದದ್ದೇ ಪುಣ್ಯ...' ಎಂದು ಮಸೀದಿಯ ಆಡಳಿತ ಸಮಿತಿ ಸದಸ್ಯರೊಬ್ಬರು ನುಡಿದು ಅಲ್ಲೇ ಕೈಗಾಡಿಯಲ್ಲಿ ಕೂತಿದ್ದ ಪುತ್ತಾಕ ಹಾಗೂ ಗೋಡೆಗೊರಗಿದ್ದ ಉಬೇದ್‌ನನ್ನು ನುಂಗುವಂತೆ ನೋಡಿದರು.

'ಎಲ್ಲಿಗೆ ಕರಕೊಂಡ್ಹೋಗುತ್ತಿದ್ದೀಯಾ?' ಆನೆಯಾಕಾರದವರು ಪ್ರಶ್ನಿಸಿದರು. ಅವರು ಪ್ರಶ್ನಿಸಿದಾಗ ಉಂಟಾದ ಗೊಂದಲಮಯದಿಂದ ತತ್ತರಿಸಿದ ಇಸ್ಮಾಯಿಲ್ ಎದ್ದು ನಿಂತು ಎಲ್ಲರನ್ನೂ ಸಮಾಧಾನ ಪಡಿಸಲು ಪ್ರಯತ್ನಿಸಿದರು.

'ನಾವೆಲ್ಲಿಗಾದರೂ.... ದೂರ ಹೋಗಿ ಜೀವಿಸ್ತೇವೆ.'

'ಅದು ಯಾಕೆ...? ಈ ರಾತ್ರಿಯೇ ಕರಕೊಂಡ್ಹೋಗುವೆನೆಂದು ಹಟವಿಡಿಯುತ್ತಿದ್ದಿ.... ನಾವು ಯಾರು ಗೊತ್ತಾ...? ಎಂದು ಪ್ರಶ್ನಿಸಿ ಉಬೇದ್‌ನನ್ನು ನಾಲ್ವರೂ ಮುತ್ತಿದರು.

ಪುತ್ತಾಕ ಗಾಡಿಯಲ್ಲಿ ಕೂತು ತೊಳಲಾಡುತ್ತಿದ್ದರು.... ನಿಮಿಷಾರ್ಧದಲ್ಲಿ ಸಂತೋಷದ ಸಮಾರಂಭವೊಂದು ದುಃಖದಲ್ಲಿ ಮುಳುಗಿತ್ತು.

'ಮೊಯಿಲಾರ್ರೆ... ಬನ್ನಿ ಇತ್ತ... ತಲಾಖ್ ಹೇಳಿಕೊಡಿ' ನಾಲ್ವರೂ ಗುಡುಗಿದರು.

'ಬೇಡ... ಹಾಗೆಲ್ಲಾ ಮಾಡಿ ನನ್ನ ಮಗಳ ಬಾಳನ್ನು ಹಾಳು ಮಾಡ್ಬೇಡಿ... ಅವರಿಬ್ಬರೂ ಎಲ್ಲಿಗಾದರೂ ಹೋಗಿ ಹಾಯಾಗಿ ಜೀವಿಸಲಿ, ನನ್ನದೇನೂ ಅಡ್ಡಿಯಿಲ್ಲ... ನಿಮ್ಮೀ ಕೃತ್ಯವನ್ನು ಅಲ್ಲಾಹು ಮೆಚ್ಚಲಾರನು' ಎನ್ನುತ್ತಾ ಇಸ್ಮಾಯಿಲ್ ಪರಿಪರಿಯಾಗಿ ಬೇಡಿಕೊಂಡರು.

ಒಂದೆರಡು ತಿಂಗಳು ಕಣ್ಣಿಗೆ ಮಣ್ಣೆರೆಚಿದಂತೆ ಸುಧಾರಿಸಿ, ಮುಂದೆ ಅವಳಿಂದಲೇ 'ಖುಲಾ' ಬರೆಸುವಂತೆ ಮಾಡುವ ಕೆಲಸ ನಾವು ಮಾಡಿದರಾಯಿತು ಎಂದು ಪುತ್ತಾಕ ಈ ಮೊದ್ಲೇ ಮಗನಲ್ಲಿ ತಿಳಿಸಿದ್ದರು. ಆದರೆ ಇದೀಗ ಬಲವಾದ ಒತ್ತಡದಿಂದಾಗಿ ಉಬೇದ್ ಕಣ್ಮುಚ್ಚಿ ತಲಾಖ್ ನುಡಿದ... ಈ ಮಧ್ಯೆ ಎಲ್ಲರೂ ಅಧ್ಯಕ್ಷರೆಲ್ಲಿ?' ಎಂದು ಪ್ರಶ್ನಿಸಿ ತಮ್ಮ ಅಸಾಹಯಕತೆಯನ್ನು ವ್ಯಕ್ತಪಡಿಸುತ್ತಿದ್ದಾಗ ಅಲ್ಲೇ ಇದ್ದ ಅಧ್ಯಕ್ಷರ ಮಗ ಬಾಪನಿಗೆ ಈಗೊಂದು ಫೋನ್ ಬಂತು. ಏನೋ ಅರ್ಜೆಂಟ್ ಕೆಲಸವಿದ್ದದ್ದರಿಂದ ಮೂಡಿಗೆರೆಗೆ ಹೊರಟಿದ್ದಾರೆ' ಎಂದಾಗ ಕೋಲು ಮುಖದ ಇಸ್ಮಾಯಿಲ್ ನಿತ್ರಾಣಗೊಂಡು ಅಲ್ಲೇ ಗೋಡೆಗೊರಗಿ ತಲೆಗೆ ಕೈ ಹೊತ್ತು ಕೂತರು.

'ಮಾಪಿಳ್ಳೆ ಹಾಡು' ಹಾಡುತ್ತಾ ತಮ್ಮದೇ ಆದ ಮೇಳದಲ್ಲಿ ಮುಳುಗಿದ್ದ ಬುರ್ಖಾಗಳಿಗೆ ಯಾರೋ ಒಬ್ಬರು ವಿಷಯ ತಿಳಿಸಿದಾಗ, ತನ್ನ ಇನಿಯನ ಮುಖವನ್ನು ನೆನೆಸಿ ಕನಸು ಕಾಣುತ್ತಿದ್ದ ಜೈನಾಬು ಗರಬಡಿದವಳಂತೆ ಎಚ್ಚೆತ್ತು, 'ಜಿನ್' ಹಿಡಿದವಳಂತೆ ತಲೆಗೂದಲನ್ನು ಹಿಡಿದೆಳೆದು, ಪುಟ್ಟ ಕೈಯಲ್ಲಿ ಮದರಂಗಿಯನ್ನು ನೋಡಿ 'ಈ ಮದ್ವೆ ನಡೆಯದಿದ್ದರೇನಂತೆ? ನಾವು ಸುಖವಾಗಿರಲಿಲ್ಲವಾ? ಅದನ್ನೇಕೆ ಈ 'ಜನರು' ತಡೆಹಿಡಿದರು? ನಾವು ಎಲ್ಲಾದರೂ ಹೋಗಿ ಹಾಯಾಗಿ ಇರುತ್ತಿದ್ದೆವೆಯಲ್ಲಾ... ' ಎನ್ನುತ್ತಾ 'ಹಾಗಾದರೆ ನಾನು 'ಇದ್ದತ್' ಆಚರಿಸಬೇಕೆ? ಎಂದು ಪ್ರಶ್ನಿಸಿ ಛೇ... ನಾನೇಕೆ ಇದ್ದತ್ ಆಚರಿಸಲಿ... ಅವನನ್ನು ಅವರೆಲ್ಲಾ ಬಲಾತ್ಕರಿಸಿ ಒತ್ತಾಯದಿಂದ ತಲಾಖ್ ನುಡಿಸಿದ್ದಲ್ವಾ? ಅದು ಕಬೂಲ್ ಆಗ್ತದಾ? ಇಲ್ಲ... ನಾನಿದನ್ನು ಒಪ್ಪಲಾರೆ... ನನಗೆ ಉಬೇದ್‌ಬೇಕು...' ಎನ್ನುತ್ತಾ ತನ್ನನ್ನು ತಾನೇ ಸಮರ್ಥಿಸಿ ಕಿರುಚುತ್ತಾ ಅಂಗಳವಿಳಿದು ಮಸೀದಿಯತ್ತ ತನಗರಿವಿಲ್ಲದಂತೆ ಓಡಿ ಹೋದಳು.

ಕೇರಿಯ ಓಣಿಯನ್ನೆಲ್ಲಾ ಸುತ್ತು ಬಳಸಿ ಹುಡುಗಿಯೊಂದು ಓಡುತ್ತಿದ್ದುದನ್ನು ತಮ್ಮ ಅಂಗಳದಲ್ಲೇ ನಿಂತು ನೋಡಿದ ಬುರ್ಖಾಗಳೆಲ್ಲಾ ಮುಖಕ್ಕೆ ಕೈ ಹೊತ್ತು ಹೈರಣಾಗಿ ನಿಂತು ಬಿಟ್ಟಿದ್ದರು. ಈಗ ಅವಳಿಡುವ ಪ್ರತಿಯೊಂದು ಹೆಜ್ಜೆಯೂ, ಅದರ ಸಪ್ಪಳವೂ... ಅಂತ್ಯ ದಿನಗಳಲ್ಲಿ ಮಹಾನಷ್ಟಗಳನ್ನು ಕೊಡಲು ಬರಲು ದಜ್ಜಾಲಿ (ರಾಕ್ಷಸ)ಯು ಇಡುವ ಹೆಜ್ಜೆಯ ಸಪ್ಪಳದ ಶಬ್ದದಂತೆ ಅವರಿಗೆ ಭಾಸವಾಯ್ತು.

ಜೈನಾಬು ಓಡುತ್ತಲೇ, ತನ್ನ ಇನಿಯನಿಗೆ ಕಿರುಕುಳ ನೀಡಿದವರಿಗೆಲ್ಲಾ ಶಪಿಸುತ್ತಲಿದ್ದಳು. ಆದರೆ ಅವಳು ಉಬೇದ್‌ನ ದುರಾಲೋಚನೆಯನ್ನೂ... ಅವನ ಕುರುಡು ಪ್ರೇಮವನ್ನು ಅರ್ಥಮಾಡಿಕೊಳ್ಳಲಿಲ್ಲ. ಅಂತಹ ಶಕ್ತಿಯೂ ಅವಳಿಗಿಲ್ಲ....

'ಮಸೀದಿಯ ಅಧ್ಯಕ್ಷರು ಪುತ್ತಾಕನ ಜತೆಗೂಡಿ ' ಜನ ತಂದು' ನಾಟಕವಾಡಿದ್ದೆಂದು ಪಾಪ ಇಸ್ಮಾಯಿಲ್, ಜೈನಾಬುಗಾದರೂ ಏನು ಗೊತ್ತು?'

❖ ❖ ❖

ಮುಂಗಾರು ದೈನಿಕ **18-6-1995**

# ತೌಬಾ

'ನೋಡಿ ಉಮ್ಮಾಬಿ, ನಿನ್ನ ಮಗಳು ತಾಹಿರಾಳನ್ನು ನನ್ನ ಸೌದಿಯ ಮಗನಿಗೆ ಕೊಡಲು ನಿನಗಿಷ್ಟವಾ" ಎಂದು ಜುಲೇಖಾ ಕೇಳಿ, ನಾಡದು ಬರಲಿರುವ ಚಿಕ್ಕ ಪೆರ್ನಾಳಿಗೆ ಎರಡು ವರ್ಷವಾಗುವುದರಲ್ಲಿ ಸಂಶಯವಿಲ್ಲ. ಈ ಎರಡು ವರ್ಷ ಪೂರ್ತಿಯಾಗವುದರೊಳಗೆ ತಾಹಿರಾಳಿಗೆ ಎಷ್ಟೊಂದು ಬುದ್ಧಿ ಮಾತು ಮತ್ತು ಕೆಲಸಗಳನ್ನು ಕಲಿಸಿ ಕೊಟ್ಟಿರುವೆನೆಂದು ಸ್ವತಃ ಉಮ್ಮಾಬಿಗೂ ತಿಳಿದಿರಲಾರದು. "ನೋಡು ಮೋಳೇ, ಗಂಡನ ಮನೆ ಸೇರ್ಬೇಕಾದವಳು ನೀನು! ಎಷ್ಟೇ ಕಷ್ಟದಲ್ಲಾದರೂ ನಿನ್ನ 'ಖಾನತ್' ಮಾಡಿ ಹೊರ ಕಳಿಸುವ ಜವಾಬ್ದಾರಿ ನಿನ್ನ 'ಬಾಪಾ'ರಿಗೆ ಸೇರಿದ್ದು. ಅಲ್ಲಿಗೋದ್ಮೇಲೆ ಎಲ್ಲರೊಡನೆ ಬೆರತು ಜೀವಿಸಬೇಕಾದವಳು ನೀನು! ನಿನ್ನ ಗಂಡ, ಅತ್ತೆಯಾಗಲೀ ಏನೇ, ಅಂದುಕೊಂಡರೂ ನಿನ್ನ ಒಳ್ಳೆಯಕ್ಕೆಂದೇ ಭಾವಿಸಿ 'ಸಬೂರ್' ತೆಗೆದುಕೊಳ್ಳಬೇಕು. ನಿನ್ನ ಅತ್ತೆಯ ಬಾಯಿಯಿಂದ ನನ್ನ ಮನೆಗೆ ಕೊಳ್ಳಿ ಇಟ್ಟವಳು' ಎಂದು ಹೇಳಿಸಿಕೊಳ್ಳಬಾರದೆಂದು ತಾಹಿರಾಳಿಗೆ ಆಗಾಗ ಉಮ್ಮಾಬಿ ಟೀಚಿಂಗ್ ಮಾಡುವ ಶೈಲಿಯಿದು.

ಉಮ್ಮ ನೀಡುವ ಟೀಚಿಂಗ್‌ನ ಬಗ್ಗೆ ಮಗಳೇನು ಮುನಿಸಿಕೊಂಡವಳಲ್ಲ. ಶಾಲೆಯ ಮೆಟ್ಟಿಲು ಹತ್ತದಿದ್ದರೂ, ಮದ್ರಸದ ಉಸ್ತಾದರು ಕಲಿಸಿಕೊಟ್ಟ ಹಿತನುಡಿಗಳನ್ನೆಲ್ಲಾ ಕರಗತ ಮಾಡಿಕೊಂಡಿದ್ದಳು. ಹೃದಯದೊಳಗೊಂದು ಆಸೆ ಸ್ಫುಟಿಯುತ್ತಿದ್ದರೂ 'ನನಗೆ ಮದ್ವೆ ಬೇಡ' ಎಂದು ಆಗಾಗ ನುಡಿಯುತ್ತಾ ಹುಸಿನಗೆಯೊಂದನ್ನು ಮಾತ್ರ ಬೀರುತ್ತಿದ್ದಳು. 'ಹೌದೌದು. ಅದು ಎಲ್ಲಾ ಹುಡುಗಿಯರು ಆಡುವಂತದ್ದೇ, ನಂಗೆ ಮದ್ವೆ ಬೇಡಾ ಅಂತ ಕಡಕ್ಕಾಗಿ ಹೇಳಿ ಬಂದ್ ಆಚರಿಸಿದ್ದುಂಟಾ? ಎಂದು ಉಮ್ಮಾಬಿ ನಗೆ ಚೆಲ್ಲಿದ್ದಳೊಮ್ಮೆ.

"ನೋಡಿ, ಆ ಜುಲೇಖಾಳ ಬಳಿ ಹೋಗಿ ಮದ್ವೆಯ ವಿಷಯದ ಬಗ್ಗೆ ಮಾತ್ನಾಡಿ ಬಂದ್ರೆ ಒಳ್ಳೆಯದಲ್ವಾ? ಎಂದು ಉಮ್ಮಾಬಿ, ಹೇಳಿದಾಗಲೇ, ಗಂಡ 'ರಹೀಂ ಕಾಕ' ಜುಲೇಖಾಳ ಮನೆಗೆ ಹೆಜ್ಜೆ ಹಾಕಿದ್ದಲ್ಲದೆ, ಜೊತೆಗೆ ತನ್ನ ತಮ್ಮ ಅದ್ರಾಮನನ್ನೂ ಕೂಡಿಸಿಕೊಂಡಿದ್ದರು. ರಹೀಂಕಾಕ ಮತ್ತು ಅದ್ರಮ ಜುಲೇಖಾಳ ಮನೆಯೊಳ ಹೊಕ್ಕು ಅಡುಗೆ ಮನೆಯ ಪಕ್ಕದ ಕೋಣೆಯೊಳಗೆ ಮಣೆ ಎಳೆದು ಕೂತಾಗಲೇ "ಛೇ ಛೇ ನೀವಿಲ್ಲಿ ಕೂತ್ಕೊಳ್ಳುವುದು ಸರಿಯಾ?" ಎಂದು ಜುಲೇಖಾ ಪ್ರಶ್ನಿಸಿ ಗೋಡೆಗೊರಗಿ ನಿಂತಳು. "ನಾವೇನು ದುಬೈಯಿಂದ ಬಂದವರಾ? ಅವರಲ್ಲಿ ಕೂಲಿ ಕೆಲಸ ಮಾಡಿ ಇಲ್ಲಿ ತೋರಿಸುವ ಗತ್ತನ್ನು ನಾವು ತೋರಿಸಿದ್ರೆ ಆಗ್ತದಾ?" ಎಂದು ರಹೀಂ ಕಾಕ ನಗೆ ಚೆಲ್ಲಿ, ಬಂದ ವಿಷಯವನ್ನು ಉರುಟಾಗಿ ಬಿಡಿಸಿ ಹೇಳಿದರು. ಜುಲೇಖಾಳ ಗಂಡ ಸೀದಿ ಸಾಹೇಬರು ಮರಣ ಹೊಂದಿದ್ದೂ ಮಗ ಸೌದಿಗೆ ಹೋದದ್ದೂ, ಅವನ ಮದ್ವೆಯ ಪ್ರಸ್ತಾಪವೆತ್ತಿದ್ದೂ ಎಲ್ಲವೂ

ಒಂದೇ ತಿಂಗಳಲ್ಲಾಗಿತ್ತು. ಅಂದ್ರೆ ಶವ್ವಾಲ್ ತಿಂಗಳು ಎನ್ನಬಹುದು.

ಒಳಗಿನಿಂದ ಚಾ ತಂದು ಟೇಬಲ್ಲಿನ ಮೇಲಿಟ್ಟು, "ನೋಡಿ ಕಾಕ, ತಾಹಿರಾಳ ಫೊಟೋವನ್ನು ಅವನಿಗೆ ಕಳಿಸಿಕೊಡ್ಬೇಕಲ್ಲ. ಒಂದೆರಡು ತಿಂಗಳ ನಂತರ ಬರ್ತೇನೆ ಅಂತ ಮೊನ್ನೆ ಕಾಗದ ಕೂಡಾ ಹಾಕಿದ್ದಾನೆ" ಎಂದು ಜುಲೇಖಾ ಅಂದಾಗಲೇ, "ಎಂದ್ರೆಡಿ ಜುಲೇಖಾ, ನನ್ನ ಮಗಳನ್ನು ನೀ ನೋಡ್ಲಿಲ್ವಾ? ಸುಮ್ನೆ ಯಾಕೆ ಅವ್ನ ಫೊಟೋ" ಎಂದು ಪ್ರಶ್ನಿಸಿ ರಹೀಂಕಾಕ ಗಲಿಬಿಲಿಗೊಂಡರು. 'ಕಾಕ, ತಾಹಿರಾಳ ಫೊಟೋ ನನಗಲ್ಲ, ನನ್ಮಗನಿಗೆ! ನನ್ನ ಮಗನಿಗೆ ನಿಮ್ಮ ಮಗಳನ್ನು ಕೊಡಿ ಅಂತ ಒಂದೆರಡು ವರ್ಷಗಳ ಮುಂಚೆ ಕೇಳಿದ್ದು ನಿಜ, ಆದ್ರೆ ಈಗಿನ ಹುಡುಗರ ವಿಷಯ ಗೊತ್ತಲ್ವಾ? ಸರ್ಕೀಟು ಹೊಡೆಯುವ ಹುಡುಗಿಯರು ಬೇಕೆಂದು ಹಟ ಹಿಡಿದರೆ, ಮತ್ತೆ ನಮ್ಮ ಮಾತಿಗೆ ಬೆಲೆ ಸಿಗ್ತಾದಾ? ಅಲ್ವಾ ನಮ್ಮನ್ನು ಅವರು ಕ್ಯಾರ್ ಮಾಡ್ತಾರಾ?" ಅಂತ ಜುಲೇಖಾ ರಾಗವೆಳೆದಾಗಲೇ ಹಾಗೇನಿಲ್ಲ ಜುಲೇಖಾದ, ಅವ ಹಾಗೇ...ನಾನಿದ್ದೇನಲ್ಲ" ಎಂದು ಅದ್ರಮ ಸಮಧಾನ ನುಡಿದು ಹೊರ ನಡೆದ.

ತಾಹಿರಾಳ ಪೊಟೋ ತೆಗೆಸಲು, ಮಂಗಳೂರಿಗೆ ಕರೆತರಲು ರಹೀಂ ಕಾಕರಿಗೆ ಸುಸ್ತೋ ಸುಸ್ತು! ನೀ ಮಂಗಳೂರಿಗೆ ಹೋಗಲು ಹೆದರಿದ್ರೆ, ನಾಳೆ ನಿನ್ನ ಗಂಡ ಸೌದಿಗೆ ಬಾ ಅಂತ ಕರೆದ್ರೆ ನಾ ಬರಲ್ಲ ಅಂದ್ರೆ ಆಗ್ತದಾ? ಅನ್ನುತ್ತಾ ಉಮ್ಮಾಬಿ ಖಾರವಾದಳು. ದಿನಗುರುಳಿದವು. ಅನಿರೀಕ್ಷಿತವಾಗಿ ಜುಲೇಖಾ ಮನೆಗೆ ಬಂದದ್ದು ಯಾಕೆ ಅಂತ ಉಮ್ಮಾಬಿಗೂ ಅರ್ಥವಾಗಲಿಲ್ಲವಾದರೂ, ಬಂದ ನಂತರ ಆಡಿದ ಮಾತು, ನಡೆಸಿದ ವರ್ತನೆಗಳೆಲ್ಲವೂ ಉಮ್ಮಾಬಿಯ ಮನಕ್ಕೆ ತೃಪ್ತಿ ನೀಡಿತ್ತು. ಜುಲೇಖಾ ಮನೆಯೊಳ ಹೊಕ್ಕಾಗಲೇ, ತಾಹಿರಾ ಮೂಲೆಯೊಂದರಲ್ಲಿ ನಿಂತು ಕಣ್ಮರೆ ಯಾಗಿದ್ದಳಾದರೂ ಅವಳಿಗೆ ಕೇಳಲೆಂದೇ "ಎಲ್ಲಿದ್ದಾಳೆ ಸೌದಿಯವನ ಹೆಂಡ್ತಿ" ಅನ್ನುತ್ತಾ ರಾಗವೆಳೆದು ಮಾತುಕತೆಗೆ ಶುರು ಮಾಡಿದಳು. ಎಲ್ಲೋ ಹೋಗಿದ್ದ ರಹೀಂಕಾಕರು ಮನೆ ಸೇರಿ ನಿಮಿಷ ಎರಡಾಗಿತ್ತೋ ಏನೋ... ? ನೋಡಿ ಕಾಕ, ನಿಮ್ಮ ಮಗಳು ಅವನಿಗೆ ಹಿಡಿಸಿದೆ. ಆದಷ್ಟು ಬೇಗ ಬರ್ತಾನವ. ನೀವು ಒಂದಿಷ್ಟಾದರೂ ಕೊಡದಿದ್ದರೆ ಅವನಿಗೆ ತೃಪ್ತಿಯಾಗದು" ಅನ್ನುತ್ತಾ ಸಂಖ್ಯೆಯನ್ನೇಳಿ ಜುಲೇಖಾ ಮಾಯವಾದಳು. "ಅಲ್ಲ, ಈ ಸೌದಿಯವನಿಗೆ ಯಾಕಪ್ಪಾ ಕಾಸು-ಗೀಸು? ಇದು ಅವಳದ್ದೇ ಕಾರುಬಾರು ಆಗಿರಬೇಕು? ಆ 'ಸೀದಿ ಸಾಹೇಬರು ಇದ್ದರೆ ಇವಳದ್ದೇನು ನಡೆಯುತ್ತದೆ. ಮಣ್ಣಾ? ಅಂತ ರಹೀಂಕಾಕರು ಗೊಣಗತೊಡಗಿದರು. ಇದೆಲ್ಲಾ ಇದ್ದದ್ದಲ್ವಾ ಕಾಕ? ನಾವು ಅಷ್ಟಾದರೂ ಕೊಡದಿದ್ದರೆ ಮಗಳನ್ನು ಯಾರಾದ್ರು ತೆಗೆದುಕೊಳ್ತಾರಾ? ಇದೇನು

ಸೌದಿ ಅಂದ್ಕೊಡಿದ್ಯಾ? ಎಂದು ಅದ್ರಮ ಮೆತ್ತಗೆ ಹೆದರಿ ನುಡಿದಾಗಲೇ 'ನಿನ್ನದೊಂದು ಉಂಟಲ್ಲ ವಕಾಲತ್ತು?" ಅದೇನು ನಾನು ಏಲಕ್ಕಿ ಮಾರ್ತೇನಾ ಅನ್ನುತ್ತಾ?" ರಹೀಂ ಕಾಕರು ನಿತ್ರಾಣರಾದರು.

ಮೊಹಮ್ಮದಾಲಿ ಸೌದಿಯಿಂದ ಬಂದಾಗಲೇ "ನನ್ನ ಮಗಳನ್ನು ತೆಗೆದುಕೊಳ್ಳಿ ದಾದಾ" ಅನ್ನುತ್ತಾ ನಾಲ್ಕೈದು ಕಡೆಯುವರು ಬಂದು ರಾಗವೆಳೆದಿದ್ದರೂ, ಈ ಸಾರಿ ಅವ ಮದ್ವೆಯಾಗುವುಲ್ಲವಂತೆ" ಅನ್ನುತ್ತಾ ಜುಲೇಖಾ ಜಾರುತ್ತಿದ್ದಳು.

ಮದ್ವೆಯ ಏರ್ಪಾಡೆಲ್ಲವೂ ಎರಡೂ ಕಡೆಯಲ್ಲೂ ರಭಸದಿಂದಲೇ ಸಾಗುತಿತ್ತು. ನಾಡದು ಆದಿತ್ಯವಾರ 'ಖಾನತ್' ಎಂದು ಕಾಕರು ಅರಸ್ತಾನ ಜಮಾತರಿಗೆಲ್ಲಾ ಕರೆ ನೀಡಿದ್ದರು. ಅರಸ್ತಾನದವರೇ ಆದ ತಣಿಯ, ಚೋಮ, ನಾಗಪ್ಪ, ಗಂಗಯ್ಯರ ಮನೆಗೂ ಕರೆಹೋಗಿತ್ತು. 'ಖಾನತ್'ನ ಉಸ್ತುವಾರಿಕೆಯನ್ನು ಅರಸ್ತಾನ ಜುಮ್ಮಾ ಮಸೀದಿಯ ಮುದರ್ರಿಸ್‌ನವರು ವಹಿಸಿಕೊಂಡಿದ್ದರು. ಖಾನತ್ ವಿಜೃಂಭಣೆಯಿಂದ ನಡೆಯಿತು. ಮದ್ವೆಯಾಗಿ ಒಂದು ವಾರವೂ ಕಳೆಯಿತು.

ಮೊಹಮ್ಮದಾಲಿ 'ತಾಲ'ದ ರಾತ್ರಿಯೊಂದನ್ನು ಮಾತ್ರ ತಾಹಿರಾಳೊಡನೆ ಕಳೆದಿದ್ದ. ಅವನ 'ಅರಬಿ' ಕೆಲವೇ ದಿನಗಳ ರಜೆ ಕೊಟ್ಟಿದ್ದರಿಂದ ಮದ್ವೆಯಾದ ನಾಲ್ಕೇ ದಿನದಲ್ಲಿ ಮತ್ತೆ ವಿಮಾನದೊಡನೆ ಹಾರಿಹೋಗಿದ್ದ. " ತಾಹಿರಾ ನಿಂಗೇನು ಬೇಕೆಂದಿದ್ದರೂ ಕಾಗದ ಹಾಕು, ಯಾವುದಕ್ಕೂ ನಾಚಿಕೆ ಪಡ್ಬೇಡ. ಮುಲಾಜಿಲ್ಲದೆ ಬರೆ. ಒಂದೆರಡು ವರ್ಷದವರೆಗೆ 'ಸಬೂರ್' ತೆಗೆದುಕೋ, ಮತ್ತೆ ನಿನ್ನನ್ನು ನಾ ಅಲ್ಲಿಗೆ ಕರ್ಕೊಂಡೋಗ್ತೇನೆ ಅಂತ ಹೇಳಿಯೇ ಅವ ಇಲ್ಲಿಂದ ಕಾಲ್ತೆಗೆದಿದ್ದ.

ಮದ್ವೆಯಾದ ಹೊಸತರಲ್ಲೇ ದಂಪತಿಗಳಿಬ್ಬರು ಬೇರೆ ಬೇರೆ ಕಡೆ ಅದೆಷ್ಟು ದಿನ ಇದ್ದಾರು? ಒಂದೆರಡು ತಿಂಗಳು ಕಳೆದಾಗ್ಲೇ 'ದಯವಿಟ್ಟು ಊರಿಗೊಮ್ಮೆ ಬನ್ನಿ'ಅನ್ನುತ್ತಾ, ತಾಹಿರಾ ತನ್ನ ತಂಗಿಯ ಸಹಾಯದಿಂದ ಪತ್ರ ಬರೆಸುತ್ತಿದ್ದಳು. ತಾಹಿರಾ ಹೆಚ್ಚಾಗಿ ಅತ್ತೆ ಮನೆಯಲ್ಲೇ ದಿನದೂಡುತ್ತಿದ್ದಳು. ತನ್ಮಧ್ಯೆ ಗಂಡನ ಪತ್ರ ಬಂದಾಗಲೆಲ್ಲಾ 'ನನಗೇನು ಬೇಡ, ನೀವು ಆದಷ್ಟು ಬೇಗ ಬನ್ನಿ' ಅಂತ ತನಗೆ ಗೊತ್ತಿದ್ದ ರೀತಿಯಲ್ಲಿ ಗೀಚುತ್ತಿದ್ದಳು.

"ನೋಡು ತಾಹಿರಾ.. ನಾನೀಗ ಊರಿಗೆ ಬಂದ್ರೆ ಆಗ್ತದಾ? ಇನ್ನೊಂದು ವರ್ಷ...! ಮತ್ತೆ ಹೆಚ್ಚೇನಿಲ್ಲ. ಕೈ ತುಂಬಾ ಹಣವಿಲ್ಲದೆ ಊರಿಗೆ ಬಂದ್ರೆ ಅದೇನು ಮಾಡ್ಲಿಕ್ಕಾಗುತ್ತದೆ. ಬೀದಿ ಬೀದೀಲಿ ತಿರುಗಿ ಮರ್ವಾಯಿ ಮಾರುವುದಾ? ಅಲ್ಲಾ ಆ ಮೋನಾಕರ ಹೊಟೇಲಲ್ಲಿ

ಸಪ್ಪೈಯರ್ ಆಗಿ ನಿಲ್ಲುವುದಾ?" ಅಂತ ತನ್ನ ಅಳಲನ್ನು ತೋರ್ಪಡಿಸುತ್ತಿದ್ದ.

"ಅಲ್ಲ, ನೀವೆಷ್ಟು ವರ್ಷದ ನಂತರ ಬೇಕಾದ್ರೆ ಬನ್ನಿ, ನನಗೊಂದು ಮಗು ಕೊಟ್ಮೇಲೆ, ನಾ ಆ ಮಗುವಿನೊಡನೆ ಆಟವಾಡಿ ದಿನಕಳೆಯುತ್ತಿದ್ದೆನಲ್ಲಾ ಅಂತ ಬರೆಯುತ್ತಿದ್ದಾಗಲೂ ತಾಹಿರಾಳಿಗೆ ದುಃಖ ಉಮ್ಮಳಿಸುತ್ತಿತ್ತು. ಈ ಒಂದು ವರ್ಷದಲ್ಲಿ ತಾಹಿರಾ ಕೇವಲ ಎರಡು ಬಾರಿ ತವರು ಮನೆಗೆ ಬಂದು ಹೋಗಿದ್ದಳು.

ಆ ದಿನ ತಾಹಿರಾಳಿಗೆ ಜೋರಾಗಿ ಜ್ವರ ಬಂದಿತ್ತು. ಕಳೆದ ರಮ್ಜಾನಿನ ನೋಂಬನ್ನು 'ಕಳಾವೀಟಿ'ದ ಜುಲೇಖಾಳು ಕೂಡಾ ತುಂಬಾ ಬಳಲಿದ್ದಳು. ಇದೇ ಸಮಯಕ್ಕೆ ಸೊಸೆಯ ಆರೋಗ್ಯ ಸರಿಯಿಲ್ಲವಾದ್ದರಿಂದ ಜುಲೇಖಾಳಿಗೂ ಕಸಿವಿಸಿಯಾಯಿತು. 'ಅವಳನ್ನು ತವರು ಮನೆಗೆ ಕಳಿಸಿಕೊಡುವುದಾ? ಅಲ್ಲಾ, ಡಾಕ್ಟರರಿಂದ ಮದ್ದು ತರಿಸಿಕೊಳ್ಳುವುದೊಳ್ಳೆಯದಾ? ಒಂದು ವೇಳೆ ಅವಳನ್ನು ತವರು ಮನೆಗೆ ಕಳಿಸಿದರೆ ಉಮ್ಮಾಬಿ ಏನು ಅಪಾರ್ಥ ಭಾವಿಸಿಯಾಳು?' ಅಂತ ಜುಲೇಖಾ ಮನದಲ್ಲೇ ಗ್ರಹಿಸಿಕೊಂಡಳು.

ಮನೆಗೊಂದು ಗಂಡಸು ಇಲ್ಲದಿದ್ದರೆ ಎಂತೆಂತೆಹ ಕಷ್ಟವಾಗ್ತದೆಯೆಂದು ಜುಲೇಖಾಳಿಗೆ ಈಗ ಮನದಟ್ಟಾಯಿತಾದರೂ, ನಿರ್ವಾಹವಿಲ್ಲದೆ ಪಕದ್ಮನೆ 'ಹಬೀಬ್'ನನ್ನು ಕೂಗಿ ಕರೆದಳು. "ನೋಡು, ಹಬೀಬೇ, ತಾಹಿರಾಳಿಗೆ ಮೈ ಸರಿಯಿಲ್ಲ, ಆ ಮಾಬ್ಲ ಪಂಡಿತರಿಂದ ಅಥವಾ ಆ ಡಾಕ್ಟರರಿಂದ ಮದ್ದು ತೆಗೆಸಿಕೊಡು" ಅಂತ ಜುಲೇಖಾ ಅಂದಾಗ್ಲೇ ತಾಹಿರಾಳಿಗೆ ಇರಿಸು ಮುರಿಸಾಗಿತ್ತು. ಛೇ ಪರಪುರುಷನೊಡನೆ ಸರ್ಕೀಟು ಹೊಡೆದುದು ಗಂಡನಿಗೆ ಗೊತ್ತಾದ್ರೆ ಅವ್ರೇನು ಭಾವಿಸಿಯಾರೆಂದು ಮನ ನುಡಿದ್ರೂ, ಗತ್ಯಂತರವಿಲ್ಲದೆ ಬುರ್ಖಾ ತೊಟ್ಟು ಹೊರನಡೆದಿದ್ದಳು

ಮದ್ದು ತೆಗೆದುಕೊಂಡು ಬಂದ ತಾಹಿರಾಳಿಗೆ ಹಬೀಬ್‌ನ ಮುಖವೇ ತೇಲಿ ಬಂತು. ಆ ರಾತ್ರಿ ನಿದ್ದೆಯಿಲ್ಲ...? ಮನ ನುಡಿಯುವುದೊಂದೇ ಶಬ್ದ ಹ..ಬೀ...ಬ್... ಅಂತ! ಅಲ್ಲಾ... ನನ್ನ ಗಂಡ ಎಂಥಾ ಜನ, ಮಂಡೆ ಉಂಟಾ ಅವರಿಗೆ? ಇದ್ದರೆ ಅವರು ನನ್ನನ್ನು ನಾಲ್ಕೇ ದಿನದಲ್ಲಿ ಬಿಟ್ಟು ಹೋಗ್ತಾರಾ? ಅಲ್ಲಾ ಆ ಒಂದು ವಾರದಲ್ಲಿ ನನ್ನನ್ನು ಎಲ್ಲಿಗಾದರು ಕರ್ಕೊಂಡೋಗಿದ್ದಾರಾ? ಹಬೀಬ್ ಎಂಥಾ ಜನ, ಅವನ ಕೈಹಿಡಿಯುವವಳು ಅದೆಷ್ಟು ಭಾಗ್ಯವಂತಳು. ತಾಹಿರಳ ಹೃದಯದಲ್ಲಿ ಹಬೀಬ್ ಸಂಪೂರ್ಣ ಬೇರುಬಿಟ್ಟಿದ್ದ.

ಮತ್ತೆ ಹೇಳ್ಬೇಕಾಗಿಲ್ಲ. ಈ ಲೋಕದಲ್ಲಿ ನಡೆಯುವಂತದ್ದೇ. ಒಡೆಯನನ್ನು ಮರೆತು ಸುಖದ ಸೋಪಾನದಲ್ಲಿ ಮೆರೆದರೀರ್ವರು.

ತಾಹೀರಾಳ ಹೊಟ್ಟೆ ಉಬ್ಬುತ್ತಿದ್ದಾಗಲೇ ಜುಲೇಖಾಳಿಗೆ ಅನುಮಾನವಾಗಿತ್ತು. ಸಲ್ಲಾನತ್ತುಲ್ಲ ಪ್ಪೋ ಈಕೆ ಯಾರೊಟ್ಟಿಗೆ ಹೋದದ್ದು. ಅದೇನು ಇವಳು ರಾತ್ರಿ ಸೌದಿಗೆ ಹೋಗಿ ಬರುತ್ತಿದ್ದಾಳಾ? ಇಂತಹ ಸೈತಾನನ ಮರಿಗಳನ್ನು ಈ ಮನೆಯಲ್ಲಿಟ್ಟರೆ ನಮಗೆ ಸ್ವರ್ಗ ಸಿಗ್ಲಿಕ್ಕುಂಟಾ? ಏಕ್‌ದಂ ನಿನಗಿಲ್ಲಿ ಸೀಟಿಲ್ಲ ಅನ್ನುತ್ತಾ ಮನೆಯಿಂದ ಹೊರದಬ್ಬಿದ್ದಳು. ಮತ್ತೆ ಪುರುಸೊತ್ತುಂಟಾ? ಮಗನಿಗೆ ಕಾಗದ ಕೂಡಾ ಹೋಯ್ತು.

"ಹೌದು ತಪ್ಪು ನನ್ನದೇ ಎಷ್ಟೇ ಆಗ್ಲೀ ಅವನೊಡನೆ ಕಳಿಸಬಾರದಿತ್ತು. ಅವನ ಮೇಲಿಟ್ಟ ವಿಶ್ವಾಸವೇ ನನ್ನನ್ನು ಕೊಂದಿತ್ತು. ವಾರಕ್ಕೆರಡು ಬಾರಿ ಮೈ ಸರಿಯಿಲ್ಲ ಅಂತ ಹೇಳಿ ಸರ್ಕೀಟು ಹೊಡೆಯುವಾಗಲೂ ನಾ ಚಿಂತಿಸಬೇಕಿತ್ತು" ಅನ್ನುತ್ತಾ ಜುಲೇಖಾ ತೀವ್ರ ಸಿಟ್ಟುಗೊಂಡಳು.

'ತಾಹಿರಾ ಮನೆ ಸೇರಿದ್ದು ಯಾಕೆ?' ಅಂತ ಉಮ್ಮಾಬಿಗೆ ಮೊದಲು ಅರ್ಥವಾಗದಿದ್ದರೂ ಕ್ರಮೇಣ ಹೊಟ್ಟೆಯೇ ತಿಳಿಸುತ್ತಿತ್ತು. "ಮೋಳೇ ಯಾಕೆ ನೀ ಹೀಗೆ ಮಾಡಿದೆ? ನಿಂಗೆ ಆ 'ಜಹನ್ನಂ'ನ ಬಗ್ಗೆ ಸ್ವಲ್ಪವಾದರೂ ಭಯವಿದ್ದರೆ ಈ ರೀತಿ ಮಾಡುತ್ತಿದ್ದಿಯಾ?" ಅನ್ನುತ್ತಾ ಉಮ್ಮಾಬಿ ಖಾರವಾದಳು. ತಾಹಿರ ಈಗ ಸಂಪೂರ್ಣ ಸೋತಿದ್ದಳು. ತನ್ನ ತಪ್ಪಿನರಿವು ಆಗಿತ್ತವಳಿಗೆ. ಅವಳೆಷ್ಟು ನೊಂದಿದ್ದಾಳೋ, ಅಷ್ಟೇ ಮೊಹಮ್ಮದಾಲಿ ಕೂಡಾ ಬೆಂದಿದ್ದ. 'ನಾ ಊರವರಿಗೆ ಹೇಗೆ ಮುಖ ತೋರಿಸಲಿ' ಎಂಬುದು ಅವನ ಕೊರಗಾಗಿದ್ದರೂ ಕೂಡಾ ಮನಸ್ಸಿಲ್ಲದ ಮನಸ್ಸಿನಿಂದ ತಿಂಗಳೊಳಗೆ ಮನೆ ಸೇರಿದ್ದ. ಮಗ ಮನೆ ಸೇರಿದಾಗಲೇ ವಿಷಯವನ್ನೆಲ್ಲಾ ಎಳೆಎಳೆಯಾಗಿ ಬಿಡಿಸಿದ್ದಲ್ಲದೆ ಇನ್ನಷ್ಟು ಸೇರಿಸಿದ್ದಳು.

ಗಂಡ ಊರಿಗೆ ಬಂದು ಮುಟ್ಟಿದ್ದಾನೆಂದು ತಾಹಿರಾಳಿಗೆ ಯಾರೋ ಒಬ್ಬಳು ಊದಿದ್ದಳು. ಆದರೆ ಗಂಡನ ಮುಖ ನೋಡುವ ತಾಕತ್ತು; ಅದೂ ತ್ರಾಣ ಅವಳಲ್ಲಿರಲಿಲ್ಲ. ದಿನಗಳುರುಳಿದರೂ ಗಂಡನ ಸುಳಿವಿಲ್ಲ. ಅದೊಂದು ಬೆಳದಿಂಗಳ ರಾತ್ರಿ. ಮನೆ ಮುಂದೆ ಕಾರೊಂದು ಭರ್‍ರನೆ ನಿಂತಾಗ್ಲೆ ತಾಹಿರಾ ಮಿನಾರಿನಂತೆ ನಿಂತಳು. 'ಹೌದು ಕಾರಿನಿಂದಿಳಿದವರು!!! ತಾಹಿರ ಖಾತ್ರಿ ಪಡಿಸಿಕೊಂಡಂತೆಯೇ ಕಣ್ಣೀರು ಹೊಳೆಯಾಗಿ ಹರಿಯಿತು. ಅಳಿಯನನ್ನು ಸ್ವಾಗತಿಸಲು ರಹೀಂ ಕಾಕಾರು ನಿಶ್ಯಕ್ತರಾಗಿದ್ದರು. ಅವರು ಕೂತಲ್ಲಿಂದ ಕದಲಲಿಲ್ಲ. ಬೇರು ಬಿಟ್ಟಂತೆ, ಮರಗಟ್ಟಿದಂತೆ!!! ಮೊಹಮ್ಮದಾಲಿ ಮನೆಯೊಳಗೆ ಹೊಕ್ಕು 'ತಾಹಿರ' ಅಂತ ಕರೆದಾಗ, ಎರಡು ವರ್ಷಕ್ಕುಂಚೆ ಆ 'ತಾಲ'ದ ರಾತ್ರಿಯನ್ನು ನೆನೆದ ರಹೀಂ ಕಾಕರು ಕಣ್ಣಿಗೆ ಕೈಯಾಡಿಸಿದರು. ಆ 'ತಾಲ'ದ ಅದೇ ರೂಮಿಗೆ ಹೊಕ್ಕು ಕಣ್ಣಾಡಿಸಿದಾಗ ಅಲ್ಲೇ ತಾಹಿರ ಮುಸುಕನ್ನು ಹಾಕಿ ಗೋಡೆಗೊರಗಿ ನಿಂತಿದ್ದಳು.

ಅಳಿಯ ಬಂದ ಸಂಭ್ರಮದಲ್ಲಿ ಎಲ್ಲಾ ಹಗರಣಗಳನ್ನು ಮರೆತ ಉಮ್ಮಾಬಿ ಗೂಡಿನಿಂದ ಕೋಳಿಯೊಂದನ್ನು ಹೊರಗೆಳೆದು ಮಸೀದಿಯಲ್ಲಿ ಕೊಯಿಸಿ ತಂದು ಅದರ ಆಪರೇಶನ್ ಮಾಡಲು ಶುರುಮಾಡಿದಳು. "ನೋಡು ತಾಹಿರ, ನೀ ಪತ್ರದಲ್ಲಿ ಅದು-ಇದು ಬೇಕು ಅಂತ ಬರೆದಿದ್ದೀಯಲ್ಲ. ಅದನ್ನೆಲ್ಲಾ ಈ ಟ್ರಂಕ್‌ನಲ್ಲಿ ತುಂಬಿಸಿರುವೆ. ಬೇಸರಿಸಬೇಡ, ನೋಡು ಇದರಲ್ಲಿ ಇಪ್ಪತ್ತು ಸಾವಿರವಿದೆ. ನಿನ್ನಾಸೆ ಏನೆಲ್ಲಾ ಇದೆಯೋ ಅದೆಲ್ಲವನ್ನು ತೀರಿಸ್ಕೋ, ಮಿಕ್ಕವು ಹೊಟ್ಟೆಯೊಳಗಿನ ಮಗುವಿನ ಆರೈಕೆಗಾಗಿ ವ್ಯಯಿಸಿಕೋ" ಅನ್ನುತ್ತಾ ಎದ್ದಾಗ ತಾಹಿರ ಮುಖದ ಪರದೆಯನ್ನು ಸಂಪೂರ್ಣವಾಗಿ ಮುಚ್ಚಿದಳು.ಕ್ಷಣಕಾಲ ಮೌನ ಆವರಿಸಿತು. "ನಿಮ್ಮ ಮಸೀದಿಯ ಪ್ರೆಸಿಡೆಂಟರ ವಿಳಾಸಕ್ಕೆ ತಲಾಖ್‌ನಾಮವನ್ನು ಕಳಿಸಿರುವೆ. ನನ್ನಲ್ಲೇನೂ ತಪ್ಪಾಗಿದ್ದರೆ ಕ್ಷಮಿಸು" ಅನ್ನುತ್ತಾ ಅಲ್ಲಿಂದ ಮೆಲ್ಲನೆ ಭಾರವಾದ ಹೆಜ್ಜೆಯನ್ನು ಇರಿಸುತ್ತಾ ಹೊರಬಂದ. ಆ ಕ್ಷಣ ಕಾರು ದೂಳೆಬ್ಬಿಸಿದ್ದನ್ನು ಉಮ್ಮಾಬಿ, ರಹೀಂಕಾಕರು ನೋಡಲಾಗದೇ 'ಮೋಳೇ' ಅನ್ನುತ್ತಾ ಒಳ ನಡೆದರು.

ತಾಹಿರಳ ಗಂಡ ಬಂದು ಹೋದ ವಿಷಯವು ಅದ್ರಾಮನಿಗೆ ತಿಳಿದಾಗಲೇ ಗಲಿಬಿಲಿಗೊಂಡಿದ್ದ. ಹೇಗೋ ಆ ರಾತ್ರಿಯನ್ನು ಚಿಂತನೆಯಲ್ಲಿ ಕಳೆದ. ಸುಬಹ್ ಬಾಂಗ್ ಮೊಳಗುತ್ತಿದ್ದಂತೆಯೇ ರಹೀಂ ಕಾಕರ ಮನೆ ಸೇರಿದಾಗ ಅವರು ಅಲ್ಲೇ ಚಾಪೆಯಲ್ಲಿ ಮಲಗಿದ್ದರು. ಉಮ್ಮಾಬಿ ತಪ್ಪಿತಸ್ಥಳಂತೆ ಗೋಡೆಗೊರಗಿ ನಿಂತಿದ್ದಳು. ತಾಹಿರಾಳ ರೂಮಿನ ಬಾಗಿಲು ಸರಿಸಿ ಅದ್ರಾಮ ಒಳಹೊಕ್ಕಾಗ ತಾಹಿರ ಮುದುಡಿ ಹೋಗಿದ್ದಳು. "ಮೋಳೇ" ಅದ್ರಾಮನ ಧ್ವನಿಗೆ ಎಚ್ಚೆತ್ತು ಎದ್ದು ಕೂತ ತಾಹಿರ "ಚಿಕ್ಕಪ್ಪ, ನಾನಿನ್ನು ಜೀವಂತವಿದ್ದು ಏನು ಪ್ರಯೋಜನ? ಅನ್ನುತ್ತಾ ಮೌನವಾದಳು. "ನೋಡು ಮೋಳೇ, ನೀ ಹಾಗೆಲ್ಲಾ ಹೇಳಿದರೆ ಆಗದು. ಯಾವುದೇ ಹಗರಣ ಮನುಷ್ಯನ ಮೆದುಳನ್ನು ನಾಲ್ಕೈದು ದಿನಗಳವರೆಗೆ ಕೊರೆಯುತ್ತಲೇ ಇರುತ್ತದೆ. ಕಾಲ ಪಕ್ವಗೊಳ್ಳುತ್ತಾ ಹೋದಂತೆ ಅದು ಕೊರೆಯುವ ಶಕ್ತಿಯನ್ನು ಕಳೆಕೊಳ್ಳುತ್ತದೆ. ನೀ ಅದನ್ನೆಲ್ಲಾ ತಲೆಗೆ ಹಚ್ಚಿ ಆರೋಗ್ಯ ಹಾಳು ಮಾಡಿಕೊಳ್ಳಬೇಡ. ತೌಬಾ ನುಡಿ, ಅಲ್ಲಾಹು ಕರುಣಾಮಯಿ, ಅವ ನಮ್ಮ ಕಣ್ಣೀರನ್ನೇ ಬಯಸುವವನು. ನಾಳೆ 'ಮಾಷರಾ'ದಲ್ಲಿ ನ್ಯಾಯ ತೀರ್ಮಾನಿಸುವವನು ಅವನೇ. ಯಾರು ತಪ್ಪಿತಸ್ಥರು ಎಂದು ಅವ ಅರಿಯುವವನಾಗಿರುವನು" ಎಂದು ಅದ್ರಾಮ ಸಮಾಧಾನ ಮಾಡಿದಾಗ ತಾಹಿರಾಳಿಗೆ ಯಾವುದೋ ಒಂದನ್ನು ಗೆದ್ದಂತಾಯಿತು. ಆದರೂ ಮನವನ್ನು ಯಾವುದೋ ಒಂದು ಕ್ರಿಮಿ ಕೊರೆಯುವಂತೆ ಭಾಸವಾಯಿತು.

"ಚಿಕ್ಕಪ್ಪಾ, ಬಾಪಾ ಎಲ್ಲಿ?"

"ಮೋಳೇ ಅವ ಸ್ವಲ್ಪ ಕೋಪಿಷ್ಟ. ಕೋಪದ ಭರದಲ್ಲಿ ಏನೆಲ್ಲಾ ಹೇಳಿರಬಹುದು. ಆದರೆ ಅವ ನಿನ್ನನ್ನು ಮನೆಯಿಂದ ಹೊರದಬ್ಬಲಾರನು. ಎಷ್ಟಾದರೂ ನೀ ಅವನ ಮಗಳಲ್ಲವಾ?" ಅದ್ರಮ ಸಮಾಧಾನ ನುಡಿದ.

"ಮೋಳೇ ಏಳು, ನಮಾಜು ಮಾಡು" ಎಂದು ಉಮ್ಮಾಬಿ ಹೇಳುತ್ತಾ ಮಗಳ ಬಳಿ ಬಂದಳು. ಉಮ್ಮಾಬಿಯ ಮಾತು ರಹೀಂ ಕಾಕರಿಗೆ ಕೇಳಿಸಿತ್ತೋ ಏನೋ, ಅವರು ಚಾಪೆಯಿಂದ ಎದ್ದು ಕೂತು ನಿದ್ರೆಗಣ್ಣಿನಲ್ಲೇ 'ಯಾ ಅಲ್ಲಾಹ್' ಅನ್ನುತ್ತಿರುವುದು ತಾಹಿರಾಳಿಗೂ ಕೇಳಿಸಿತು.

❖ ❖ ❖

ಪಟ್ಟಾಂಗ ಪಾಕ್ಷಿಕ - 15-11-1994

# ಗ್ರಹಣ

ದಾನ ಧರ್ಮಗಳಿಂದ ಸರಳ ಸಜ್ಜನಿಕೆಯಿಂದ, ಪ್ರೀತಿ ವಾತ್ಸಲ್ಯದಿಂದ, ನೇರ ನುಡಿಗಳಿಂದ, ಸಹೃದತೆಯಿಂದ ಜನರ ಮನಗೆದ್ದಿದ್ದ ನನ್ನ ಮೆಚ್ಚಿನ ಗುಡನ್ ಸಾಹೇಬರಿಗೆ ಈ ಕತೆಯನ್ನು ಅರ್ಪಿಸುತ್ತೇನೆ.

## ಭಾಗ - 1

ಪೊಕೋಯಾ ದಿನಾ ಬೆಳಿಗ್ಗೆ ಎದ್ದು ತನ್ನ ಜಿನಸಿ ಅಂಗಡಿಯ ಬಾಗಿಲು ತೆರೆದು ಅಗರ್‌ಬತ್ತಿ ಹೊತ್ತಿಸಿಟ್ಟು ಕತ್ತೆತ್ತಿದರೆ ಗಿರಾಕಿಗಳನ್ನು ಎದುರು ನೋಡುತ್ತಾರೆ. ದಿನ ಬಳಕೆಯ ಎಲ್ಲಾ ಸಾಮಾನುಗಳು ಅಲ್ಲಿ ದೊರೆಯುತ್ತಿದ್ದರಿಂದ ಮತ್ತು ಅದು ಕಾಲನಿಯ ಮಧ್ಯೆ ಇದ್ದುದರಿಂದ ಅವರಿಗೆ ಎಲ್ಲಿಲ್ಲದ ವ್ಯಾಪಾರವಾಗುತ್ತಿತ್ತು.

ಹೆಚ್ಚಾಗಿ ಪೊಕೋಯಾ ತನ್ನ ಕ್ಯಾಷಿಯರ್ ಸೀಟಲ್ಲಿ ಕೂತು ಲೆಕ್ಕ-ಗಿಕ್ಕ ಬರೆದು ಕಾಸು ವಸೂಲಿ ಮಾಡುತ್ತಾರೆಯಾದರೂ ಇತ್ತೀಚೆಗೆ ಅವರ ದೃಷ್ಟಿ ಮಂದವಾದ್ದರಿಂದ ಕಣ್ಣಿಗೆ ದಪ್ಪ ಕನ್ನಡಕವನ್ನಿಟ್ಟು ವ್ಯಾಪಾರ ಮಾಡಲು ತ್ರಾಸ ಪಡುತ್ತಿದ್ದಾರೆ.

ಅಂದು ಗುರುವಾರ ಬೆಳಿಗ್ಗೆ ಪೊಕೋಯಾ ಪಳ್ಳಿಯಲ್ಲಿ ನಮಾಜು ಮಾಡಿ ಅಂಗಡಿಯ ಬಾಗಿಲು ತೆರೆದು ಟೊಪ್ಪಿ ಕಳಚಿಟ್ಟು ತನ್ನ ಸಾಣೆ ತಲೆಯನ್ನೊಮ್ಮೆ ಸವರುತ್ತಿದ್ದಂತೆಯೇ ಫೋನ್ ಕೂಗತೊಡಗಿತು. ಅವರು ರಿಸೀವರ್ ಕೈಗೆತ್ತಿ ಆಶ್ಚರ್ಯದ ಕಣ್ಣುಬಿಟ್ಟು 'ಹೌದಾ?' ಎಂದು ಉದ್ಗರಿಸಿ 'ಇನ್ನಾಲಿಲ್ಲಾಹಿ ವಇನ್ನಾ...' ಎನ್ನುತ್ತಿದ್ದಂತೆಯೇ ಅಂಗಡಿ ಮುಂದೆ ನಿಂತಿದ್ದ ಗಿರಾಕಿಗಳ ಮುಖ ಬಾಡಿಹೋಗಿತ್ತು.

'ಗುಡನ್ ಸಾಹೇಬರು ನಿಧನರಾದರಂತೆ!' ಎಂದು ಪೊಕೋಯಾ ಗಿರಾಕಿಗಳಲ್ಲಿ ವಿಷಯ ತಿಳಿಸಿದಾಗಲೇ ಕ್ಷಣಾರ್ಧದಲ್ಲಿ ಚದುರಿದ ಗಿರಾಕಿಗಳು ಎಲ್ಲೆಡೆ ಸುದ್ದಿ ಹಬ್ಬಿದರು.

ಮರಣದ ವಾರ್ತೆ 'ನೂರು ಮಹಲ್'ಗೆ ತಿಳಿದೊಡನೆ 'ಯಾ ಅಲ್ಲಾ... ನನ್ನ ಅಬ್ಬಾನನ್ನು ಎಳೆದು ಬಿಟ್ಟೆಯಾ?' ಎಂದು ಮಗಳು ನೂರ್‌ಜಹಾನ್ ಚೀರಾಡಿದಳು. ಆದರೆ ಗುಡನ್ ಸಾಹೇಬರ ಪ್ರಿಯಪತ್ನಿ ಖತೀಜಮ್ಮ ಕಣ್ಣೀರು ಸುರಿಸಲಿಲ್ಲ. ಅವರು ನಿನ್ನೆ ತಾನೆ ಕಂಕನಾಡಿ ಆಸ್ಪತ್ರೆಗೆ ತೆರಳಿ ಗಂಡನನ್ನು ನೋಡುತ್ತಲೇ ಅವರ ನರಳಿಕೆಯನ್ನು ಕಂಡು 'ಇವರ ಆಯುಸ್ಸು' ಮುಗಿದಿದೆ ಎಂದು ಮನದಲ್ಲೇ ನುಡಿದಿದ್ದರು. ಹಾಗೆ ವಿಧಿಲೀಲೆಗೊಳಗಾದ ಗಂಡನ ಜೀವಂತ ದೇಹವನ್ನು ನೆನಪಿಸಿ ದುಃಖ ತಡೆಯಲಾರದೆ ಬಚ್ಚಲು ಕೋಣೆಯಲ್ಲಿ ಮುಸುಕು ಅಡ್ಡಹಾಕಿ

ಕಣ್ಣೀರೊರೆಸಿದ್ದರು.

ಮಯ್ಯತ್ತನ್ನು ಎದುರು ನೋಡುತ್ತಾ ನೂರಾರು ಮಂದಿ ನೂರ್‌ಮಹಲ್ ಬಳಿ ಜಮಾಯಿಸಿ ನಾಲ್ಕು ಮೂಲೆಗಳಲ್ಲಿ ಕೂತು ಗುಡನ್‌ಸಾಹೇಬರ ಬಗ್ಗೆ ಗುಣಗಾನ ಮಾಡತೊಡಗಿದರು.

ಸುಮಾರು ಒಂದು ತಿಂಗಳ ಹಿಂದೆ ಎದೆ ನೋವೊಂದು ಕಾಣಿಸಿಕೊಂಡ ಗುಡನ್ ಸಾಹೇಬರನ್ನು ಆ ರಾತ್ರಿಯೇ ಆಸ್ಪತ್ರೆಗೆ ಸಾಗಿಸಲಾಯಿತ್ತಲ್ಲದೆ ಸಾವಿರಾರು ರೂಪಾಯಿಗಳ್ನು ವ್ಯಯಿಸಲಾಗಿತ್ತು.

ಆದರೆ ಅದೊಂದು ರಾತ್ರಿ ಸಾಹೇಬರನ್ನು ಉಪಚರಿಸುತ್ತಿದ್ದ ಅತ್ತೆ ಪ್ರೀತಿಯಿಂದ ತೋರಿಸುತ್ತಿದ್ದ ಮುಸಂಬಿಯನ್ನು ತಿನ್ನಲಾಗದೆ 'ನಾಳೆ ನೋಡುವ' ಎಂದಿದ್ದ ಸಾಹೇಬರು ಮರುದಿನ ಸುಬಹ್‌ಬಾಂಗ್ ಮೊಳಗುವ ಮುನ್ನವೇ ಕಣ್ಮುಚ್ಚಿದ್ದರು.

ರಾತ್ರಿ 8ರ ವೇಳೆಗೆ ನೂರ್‌ಮಹಲ್‌ನ ಮುಂದೆ ಅಂಬುಲೆನ್ಸ್ ಬಂದು ನಿಂತಾಗ ದುಃಖದ ಛಾಯೆ ಎದ್ದು ಕಾಣುತ್ತಿತ್ತು. ಶುಭ್ರ ಬಟ್ಟೆ ಧರಿಸಿ, ಲೋಕಕ್ಕೆ ವಿದಾಯ ಬಯಸಿ ಬರಿಗೈಯಲ್ಲಿ ದೇವಲೋಕಕ್ಕೆ ಸೇರುವ ಆ ಮಯ್ಯತ್‌ನ ಸುತ್ತಲೂ ಎಳೆಯರು, ಹೆಂಗಸರು ಕೂತು 'ಯಾಸೀನ್' (ಕುರಾನಿನ ಒಂದು ಅಧ್ಯಾಯ) ಪಠಿಸತೊಡಗಿದರು.

ಹಾಗೇ ನೋಡುವವರೆಲ್ಲಾ ನೋಡಿದ ನಂತರ ಮಯ್ಯತ್‌ಗೆ ಕೊನೆಯ ಸ್ನಾನ ಮಾಡಲಾಯಿತು. 'ನೋಡುವವರಿದ್ದರೆ ಬೇಗ ಬನ್ನಿ' ಎಂದು ಅಲಿಯಬ್ಬ ಗಡಿಬಡಿಯಲ್ಲಿ ಮತ್ತೊಮ್ಮೆ ನುಡಿದರು. ಅಂತಿಮ ದರ್ಶನಕ್ಕೆಂದು ಪಡಸಾಲೆಯಲ್ಲಿ ಕೂತಿದ್ದ ಪಕ್ಕದ ಶಾಲೆಯ ಲಿಂಗಮೇಷ್ಟ್ರು, ಶಾರದಾ ಟೀಚರೂರವರ ಸಹಿತ ಹಲವು ಮಂದಿ ಒಮ್ಮೆ ಕಣ್ಣೆಟ್ಟು ನೋಡಿದರು.

'ಆಯ್ತಲ್ಲ ಹೋಗುವಾ?' - ಎತ್ತರ ಸ್ವರದ ಪೊಕೋಯಾ ಧ್ವನಿ ಎತ್ತಿದಾಗ, ಅದನ್ನು ಕೇಳಿದ ಖತೀಜಮ್ಮ ಕಣ್ಣೀರಿಳಿಸತೊಡಗಿದಳು. ಹಾಗೆ ಜನಾಝಕ್ಕೆ ನಾಲ್ಕು ಮಂದಿ ಭುಜಕೊಟ್ಟರು. ಬೀರಾನ್ ಕೋಯಾರವರ 'ಲಾ ಇಲಾಹ ಇಲ್ಲಲ್ಲಾಹ್' ಎಂಬ ಧ್ವನಿಯೊಂದಿಗೆ ಮಯ್ಯತನ್ನು ಅಂಗಳದಿಂದ ದಾಟಿಸಲಾಯಿತು.

ಆ ಕ್ಷಣ ತನ್ನ ಸ್ಥಿಮಿತ ಕಳಕೊಂಡ ನೂರ್‌ಜಹಾನ್ ಚೀರಾಡುತ್ತಾ 'ನನ್ನ ಅಬ್ಬಾನನ್ನು ನೀವೆಲ್ಲಾ ಎಲ್ಲಿಗೆ ಕೊಂಡೊಯ್ಯುವಿರಿ?' ಎಂದು ಹುಚ್ಚಾಗಿ ಪ್ರಶ್ನಿಸಿದಳು. ಸೇರಿದಾಳುಗಳು ಅವಳ ಕೈರಟ್ಟೆಯನ್ನಿಡಿದು ಸಮಾಧಾನ ಪಡಿಸತೊಡಗಿದರು.

'ಇಲ್ಲ... ಇಲ್ಲ, ಅವಳಿಗೆ ಸೈತಾನನ ಕಣ್ಣು ಬಿದ್ದಿದೆ. ಮಂತ್ರಿಸಿದ ನೀರು, ನೂಲು ಕೊಡುವುದೊಳ್ಳೆಯದು' ಎಂದು ನೆರೆಮನೆಯ ಅಜ್ಜಿ ನುಡಿದು ತನ್ನನ್ನೇ ತಾನು ಸಮರ್ಥಿಸಿಕೊಂಡರು.

ಮುಂದೆ ಪಳ್ಳಿಯ ಮುಂಭಾಗದ ಆವರಣದಲ್ಲಿ ಮಯ್ಯತ್ತನ್ನು ಎದುರಿಗಿಟ್ಟು 'ಮಯ್ಯತ್ ನಮಾಜ್' ಮಾಡಲಾಯಿತು. ಹಾಗೆ ಆರಡಿ ಮಣ್ಣನಡಿ ಸಾಹೇಬರನ್ನು ದಫನ್ ಮಾಡಲಾಯಿತಲ್ಲದೆ ಸೇರಿದಾಳುಗಳೆಲ್ಲಾ ಬಿಸ್ಮಿ ಉಚ್ಚರಿಸಿ ಮೂರು ಮೂರು ಬಾರಿ ಕೈಮುಷ್ಠಿಯಲ್ಲಿ ಮಣ್ಣನ್ನು ಕಬರ್ ಗುಂಡಿಗೆ ಎಸೆದರು. ತದನಂತರ ಒಂದಿಬ್ಬರು ಹಾರೆ ಬಳಸಿ ಮಣ್ಣು ತುಂಬಿಸಿದರು. ಜಮಾಲ್ ತನ್ನ ಕೈಯಾರೆ ಕಬರ್‌ನ ತಲೆಗೆ ಹಾಗೂ ಕಾಲ್ಬುಡಕ್ಕೆ ಗಿಡ ತಂದು ನೆಟ್ಟ.

ಸಂಜೆಯಾಗುತ್ತಲೇ ಇದ್ದತ್ ಆಚರಿಸಬೇಕಾಗಿದ್ದ ಖತೀಜಮ್ಮರನ್ನು ಅಡುಗೆ ಮನೆಗೆ ತಾಗಿರುವ ಕೋಣೆಯೊಳಗೆ ನೆರೆಯ ಉಮ್ಮಾಬಿ, ಅಚ್ಚಾದ, ಮುಂತಾದವರು ಕರೆದೊಯ್ದು ದಾರಂದಕ್ಕೆ ಪರದೆ ಎಳೆದರು. ಮಸೀದಿಯ ಖತೀಬರು ಚಾವಡಿಯಲ್ಲಿ ಕೂತು ಎತ್ತರದ ಧ್ವನಿಯಲ್ಲಿ ತೌಬಾವನ್ನು ಹೇಳಿಕೊಟ್ಟು ಇದ್ದತ್ ಕೂರುವ ವಿಧಿ ಪೂರೈಸಿದರು.

ಖತೀಜಮ್ಮ 4 ತಿಂಗಳು 10 ದಿನವನ್ನು ಅನ್ಯರ ಕಣ್ಣಿಗೆ ಬೀಳದಂತೆ ಕಳೆಯ ತೊಡಗಿದರು.

## ಭಾಗ - 2

ಕಣ್ಣಾನೂರಿನ ಗುಡನ್ ಸಾಹೇಬರು ತನ್ನ 18ನೇ ವಯಸ್ಸಿನಲ್ಲಿ ಕೆಲಸ ಹುಡುಕುತ್ತಾ ಮಂಗಳೂರು ತಾಲೂಕಿನ ಪಾವೂರು ಗ್ರಾಮದ 'ಅರಸ್ತಾನ' ಎಂಬಲ್ಲಿಗೆ ಬಂದವರು ಶಂಕರ್‌ಪ್ರಭುಗಳ 'ಗಣೇಶ್ ವಿಲಾಸ'ದಲ್ಲಿ ಸಪ್ಲೈಯರಾಗಿ ಸೇರಿ, ಮುಂದಿನ 3 ವರ್ಷದ ನಂತರ ದೇರಳಕಟ್ಟೆಯ ಮರದ ವ್ಯಾಪಾರಿ ಹಮೀದಾಜಿ ಅವರ ಮಿಲ್ಲಿಗೆ ಸೇರಿ, ಅವರ ಪ್ರೀತಿಗೆ ಪಾತ್ರರಾಗಿದ್ದು ಆಶ್ಚರ್ಯಕರ.

ಸಾಹೇಬರ ಬುದ್ಧಿವಂತಿಕೆ, ಚುರುಕುತನ, ವ್ಯಾಪಾರದಲ್ಲಿ ತಾಳ್ಮೆ, ಹೀಗೆ ಪ್ರತಿಯೊಂದರಲ್ಲೂ ತೂಗಿ ನೋಡಿದ ಹಾಜಿ ತನ್ನ ಮಗಳು ಖದೀಜಾಳನ್ನು ಧಾರೆ ಎರೆದು ಇದ್ದ ಆಸ್ತಿಯೆಲ್ಲವೂ ಏಕೈಕ ಮಗಳ ಹೆಸರಲ್ಲಿ ಬರೆದು ಅಳಿಯನ ಉಸ್ತುವಾರಿಗೆ ಬಿಟ್ಟುಕೊಟ್ಟಿದ್ದರಲ್ಲದೆ ಅವರು ಕಣ್ಮುಚ್ಚಿದಂದಿನಿಂದ ಅದರ ಲಾಭ-ನಷ್ಟವನ್ನು ಸಾಹೇಬರು ತನ್ನ ತಲೆಗೆ ಹಾಕಿಕೊಂಡಿದ್ದರು.

ನೇರವಾಗಿ ತನ್ನ ಕೈಯಾರೆ ಕಾಸು ಎಣಿಸುವ ಸೌಭಾಗ್ಯ ಪಡೆದ ಸಾಹೇಬರು ಮುಂದೆ

ಮಾಡಿದ ಕಾರಬಾರಿಗೆ ಲೆಕ್ಕವಿಲ್ಲ. ಊರಿನ ಶಾಲಾ-ಮದ್ರಸದ ದುರಸ್ತಿ, ಮಕ್ಕಳಿಗೆ ಪುಸ್ತಕ ವಿತರಣೆ, ಪ್ರತಿ ರಮ್ಝಾನ್ 27ರ ರಾತ್ರಿ ಊರವರಿಗೆ ವಿಶೇಷ ಔತಣ ಕೂಟ, ವಿಧವೆಯವರಿಗೆ ಸೀರೆ-ರವಕೆ-ಕುಪ್ಪಸ ದಾನ, ತಲಾಖ್‌ನಂತಹ ಪ್ರಮುಖ ದೂರುಗಳನ್ನು ಸ್ವೀಕರಿಸಿ ನ್ಯಾಯ ಒದಗಿಸಿ ಕೊಟ್ಟದ್ದು.... ಹೀಗೆ, ಗುಡನ್ ಸಾಹೇಬರು ಅರಸ್ತಾನದ ಜನರ ಮನಗೆದ್ದಿದ್ದರು.

## ಭಾಗ - 3

ಖತೀಜಮ್ಮ ಇದ್ದತ್‌ನಿಂದ ಎದ್ದು 2 ವಾರ ಕಳೆದವು. ಸಾಹೇಬರ ಮರಣದ ನಂತರ ನೂರ್‌ಮಹಲ್‌ನಲ್ಲಿ ತೀವ್ರ ಬದಲಾವಣೆಯಾಗಿದ್ದವು. ಜಮಾಲ್ ಡಿಗ್ರಿ ಕ್ಲಾಸನ್ನು ಅರ್ಧದಲ್ಲಿ ಬಿಟ್ಟುಬಿಟ್ಟ. ನೂರ್‌ಜಹಾನ್‌ಳ ವರ್ತನೆಯಲ್ಲೂ ತೀವ್ರ ಬದಲಾವಣೆ ಕಂಡುಬಂದಿದ್ದವು. ಅಣ್ಣನಂತೆ ಹೈಸ್ಕೂಲಿಗೆ ವಿದಾಯ ಕೋರಿದಳಲ್ಲದೆ ತಂದೆಯನ್ನಗಲಿದ 5 ತಿಂಗಳ ನಂತರ 'ಉಮ್ಮಾ ನಮಗಿನ್ನಾರು ಗತಿ? ಎಂದು ಪ್ರಶ್ನಿಸುತ್ತಾ ಮಂಕಾಗಿರುತ್ತಿದ್ದಳು. ಹೊತ್ತಿಗೆ ಸರಿಯಾಗಿ ಅನ್ನ-ಪಾನೀಯ ಕೂಡಾ ತೆಗೆಯದ ಕಾರಣ ನೂರ್‌ಜಹಾನ್‌ಳ ದೇಹ ಕ್ಷೀಣಿಸಿತ್ತು.

ಮಕ್ಕಳಿಬ್ಬರ ವರ್ತನೆಯಿಂದ ಬೇಸತ್ತ ಖತೀಜಮ್ಮ ತೀವ್ರ ಬೇಸರಪಟ್ಟಳಲ್ಲದೆ ಅವರನ್ನು ಸರಿದಾರಿಗೆ ತರುವ ಪ್ರಯತ್ನ ನಡೆಸುತ್ತಲಿದ್ದರು. ತನ್ಮಧ್ಯೆ ಗಂಡ ಮಾಡಿಟ್ಟ ಆಸ್ತಿಗಳೂ ಕೂಡಾ ದಿಕ್ಕು ಪಾಲಾದಂತೆ ಆಯಿತಲ್ಲದೆ, ಆರ್ಥಿಕ ಮಟ್ಟದಲ್ಲಿ ತೀವ್ರ ಕುಸಿತ ಕಂಡುಬಂದಿತು.

ನೂರ್‌ಮಹಲ್ ತುಕ್ಕು ಹಿಡಿದ ಕಬ್ಬಿಣದಂತಿತ್ತು!

ಈ ಹಿಂದಿನಂತೆ ಜನ ಬಂದು-ಹೋಗುವ ಭರಾಟೆ ಇಲ್ಲ. ಆಡಂಭರದ, ಐಷಾರಾಮದ ಕುರುಹು ಇಲ್ಲ. 'ಆ ಮಹಲ್‌ಗೆ ಉಡ ಹೊಕ್ಕಿದೆ' ಎಂದು ನೆರೆಯವರು ಹೇಳಿದ್ದೂ ಕೂಡಾ ಖತೀಜಮ್ಮಳ ಕಿವಿಗೆ ಬಿದ್ದಿದೆ.

ಸಾಮಾನ್ಯವಾಗಿ ಸಾಹೇಬರ ಮರಣದ ನಂತರ ನೂರ್‌ಮಹಲ್‌ನ ಕೆಲವು ವಿಷಯದಲ್ಲಿ ಪೂಕೋಯಾರ ಪ್ರತ್ಯಕ್ಷ ಮತ್ತು ಪರೋಕ್ಷ ಭಾಗವಹಿಸುವಿಕೆಯೂ ಊರವರಿಗೆ ಆಶ್ಚರ್ಯವುಂಟಾಗಿತ್ತು.

'ನೋಡು ಇವಳೇ... ನಿನ್ನ ಮಗಳು ನೂರ್‌ಜಹಾನ್‌ಳಿಗೆ ಮದುವೆ ಮಾಡಿಸಿದರೆ ಹೇಗೆ?' ಎಂದು ಪೊಕೋಯಾ ಯಾಚನೆಯ ನೋಟ ಬೀರಿದಾಗ ಕೋಪಗೊಂಡ ಖತೀಜಮ್ಮ 'ನನಗೀಗ ಮಕ್ಕಳ ಆರೋಗ್ಯ ಮುಖ್ಯ' ಎಂದು ನುಡಿದಿದ್ದರಿಂದ ಪೂಕೋಯರ ನಾಲಗೆಯ ಪಸೆ ಆರಿಹೋಗಿತ್ತು.

ಆದರೆ 2 ತಿಂಗಳು ಕಳೆದರೂ ನೂರ್‌ಜಹಾನ್‌ಳಿಗೆ ಸಂಬಂಧ ಕೂಡಿ ಬರಲಿಲ್ಲ. ಅವಳ ಆರೋಗ್ಯ ಸ್ಥಿತಿಯಂತೂ ಇನ್ನಷ್ಟು ಹದಗೆಟ್ಟಿತ್ತು. ಹಾಗೇ ಅದೊಂದು ಮುಸ್ಸಂಜೆ ನೂರ್‌ಮಹಲ್‌ಗೆ ಕಾಲಿಟ್ಟ ಪೂಕೋಯಾ 'ನನ್ನನ್ನು ತಪ್ಪು ತಿಳಿದುಕೊಳ್ಳಬೇಡ. ನಿನ್ನ ಎರಡು ಮಕ್ಕಳಿಗೆ ಏನೋ ಆಗಿದೆ. ಮಂಜೇಶ್ವರದಲ್ಲಿ ಒಬ್ಬಳಿಗೆ ಜಿನ್ನ್ ಹಿಡಿಯುತ್ತದಂತೆ! ನಾವೊಮ್ಮೆ ಅಲ್ಲಿಗೆ ಹೋಗಿ ಈ ಮಕ್ಕಳನ್ನು ತೋರಿಸಿದರೆ ಹೇಗೆ? ಎಂದು ತಿಳಿಸಿದಾಗ, ಖತೀಜಮ್ಮರಿಗೆ ಅದು ಸರಿ ಎಂದು ಕಂಡಿತು.

ಸುಬಹ್ ಬಾಂಗ್ ಮೊಳಗುತ್ತಲೇ ಖತೀಜಮ್ಮ ಮಂಜೇಶ್ವರಕ್ಕೆ ಹೊರಡಲು ಸಿದ್ಧಳಾದಳು. 'ಉಮ್ಮಾ... ನನಗಿದೆಲ್ಲಾ ಇಷ್ಟವಿಲ್ಲ. ನೀವೇ ಹೋಗಿ ಬನ್ನಿ' ಎನ್ನುತ್ತಾ ಜಮಾಲ್ ಅಂಗಳವಿಳಿದು ಹೊರನಡೆದ. ನೂರ್‌ಜಹಾನ್ ಅರೆಮನಸ್ಸಿನಿಂದ ಬುರ್ಖಾತೊಟ್ಟಳು.

8 ಗಂಟೆಗೆ ಸರಿಯಾಗಿ ಪೂಕೋಯಾ, ಖತೀಜಮ್ಮ, ನೂರ್‌ಜಹಾನ್ ಮಂಜೇಶ್ವರದ "ಜಿನ್ನ್" ಹಿಡಿಯುವವಳ ಮನೆ ಸೇರಿದ್ದರು. ಈ ಹಿಂದೆ ಪೂಕೋಯಾ ಜಿನ್ನ್ ಹಿಡಿಯುವವಳಲ್ಲಿ ಮಾತನಾಡಿ ಹೋದದ್ದರಿಂದ ಇಂದು ಅವಳಿಗೆ ಅವರನ್ನು ಗುರುತಿಸಲು ಕಷ್ಟವಾಗಲಿಲ್ಲ.

ಅವಳು ನೂರ್‌ಜಹಾನ್‌ಳನ್ನು ತನ್ನ ಬಳಿ ಕರೆದು ಹತ್ತಾರು ವಿಧದಲ್ಲಿ ಪರೀಕ್ಷಿಸಿ 'ಈ ಮಂತ್ರಿಸಿದ ನೀರು ಕುಡಿ. ನಿನ್ನ ಎಲ್ಲಾ 'ರೋಗ' ವಾಸಿಯಾಗ್ತದೆ ಎನ್ನುತ್ತಾ ಒಂದು ಗ್ಲಾಸ್ ನೀರಿಗೆ 'ಬಿಸ್ಮಿ' ಉಚ್ಚರಿಸಿ 'ಪೂ' ಅಂತ ಊದಿ ಕೊಟ್ಟಳು. ನೂರ್‌ಜಹಾನ್‌ಳು ಒಂದೇ ಗುಟುಕಿಗೆ ಕುಡಿದು ಪಿಳಿಪಿಳಿ ಕಣ್ಣು ಬಿಟ್ಟಳು.

ಹಾಗೇ ಖತೀಜಮ್ಮರಲ್ಲಿ 'ನೋಡಿ... ಉಮ್ಮಾ, ಇವಳಿಗೆ ಯಾರೋ ನೀವೆಲ್ಲಾ ಏಳಿಗೆಯಾಗದಂತಹ ರೀತಿಯಲ್ಲಿ ಒಂದು ಕೆಲಸ(?) ಮಾಡಿದ್ದಾರೆ. ಎಡೆಬಿಡದೆ 3 ತಿಂಗಳ ಮದ್ದು ಮಾಡಿದಲ್ಲಿ ಗುಣ ಕಂಡುಬಂದೀತು. ಒಂದೆರಡು ವಾರ ಇವಳನ್ನು ನಮ್ಮ ಕ್ಯಾಂಪ್‌ನಲ್ಲಿ ಸೇರಿಸಬೇಕಾದೀತು.' ಎಂದು ಜಿನ್ನ್ ಹಿಡಿಯುವವಳು ನುಡಿದಳು.

'ಪರ್‍ವಾಗಿಲ್ಲ... ಅದಕ್ಕೆಷ್ಟು ಕಾಸು ಬೇಕಾದೀತು?' - ಖತೀಜಮ್ಮ ಗುಣವಾಗುವ ಆಸೆಯಿಂದ ಕೇಳಿದರು.

'ಅದೆಲ್ಲ ಮತ್ತೆ ನೋಡುವ... ಮೊದಲು ಇವಳ ರೋಗ ವಾಸಿಯಾಗಲಿ.'

'ಹಾಗಾದರೆ ಈಗ ಮದ್ದು ಕೊಡಿ ಒಂದು ವಾರದ ನಂತರ ಬರುವೆವು? ಎಂದು ಖತೀಜಮ್ಮ ನುಡಿದು ಅಲ್ಲಿಂದ ಹೊರಬಂದರು.

ಮುಂದೆ ನೂರ್‌ಜಹಾನ್ ಮನೆಗೆ ಬರುವ ದಾರಿಯಲ್ಲಿ ತಾಯಿಗೆ ತಿಳಿಯದಂತೆ ಜಿನ್ನ್ ಹಿಡಿಯುವವಳು ಕೊಟ್ಟ 'ತಾಯಿತ, ನೂಲು, ಕಷಾಯ, ಹುಡಿಯನ್ನೆಲ್ಲಾ ತೋಡಲ್ಲಿ ಹರಿಯುವ ಕೊಳಕು ನೀರಿಗೆ ಎಸೆದುಬಿಟ್ಟಳು.


ಜಮಾಲ್, ತಾಯಿ, ತಂಗಿಯನ್ನು ಛೇಡಿಸಿದ.... 'ಹೌದು ಅಣ್ಣಾ... ಜಿನ್ನ್ ಹಿಡಿದದ್ದಂತೆ ಜಿನ್ನ್! ನನಗೊಂದು ರೋಗ ಉಂಟಂತೆ! 2 ವಾರ ಅಲ್ಲಿ ಕೂತರೆ 'ಅವಳು' ವಾಸಿ ಮಾಡ್ತಾಳಂತೆ!? ಯಾರಿಗೆ ಬೇಕು ಅವಳ ಮದ್ದು ?' ಎಂದು ಸವಾಲೆಸೆದಂತೆ ನುಡಿದ ನೂರ್‌ಜಹಾನ್ ಸಂತೋಷದ ಭರ ತಡೆಯಲಾರದೆ ಜೋರಾಗಿ ನಕ್ಕುಬಿಟ್ಟಳು.

ಮಗಳ ಅನಿರೀಕ್ಷಿತ ಉಲ್ಲಾಸ ಖತೀಜಮ್ಮರಿಗೆ ಆಶ್ಚರ್ಯ ಹುಟ್ಟಿಸಿತ್ತಾದರೂ ಅವಳ ಆ ನಗುಮುಖ ನೆಮ್ಮದಿ ತಂದುಕೊಟ್ಟಿತು.

ನೂರ್‌ಜಹಾನ್‌ಳ ವರ್ತನೆಯು ಪೊಕೋಯಾರ ತಲೆಯನ್ನೇ ಕೆಡಿಸಿತು. ಛೇ... ಇವಳಿಗೆ ಏನಾಯಿತು? ನಾನೆಲ್ಲಿ ತಪ್ಪಿಬಿದ್ದೆ. ನಿಜವಾಗಿಯೂ ಈಗವಳಿಗೆ ಜಿನ್ನ್ ಹಿಡಿದದ್ದಾ.... ಅಲ್ಲಾ ಗ್ರಹಣವಾ?' ಎಂದು ತನ್ನಲ್ಲೇ ಪ್ರಶ್ನಿಸಿ ನಾಲಗೆ ಕಚ್ಚಿದರು.

❖ ❖ ❖

ಜನ ಈ ದಿನ ದೈನಿಕ - 9-1-2000



# ಅರ್ಥಕೋಶ

1. ಮಾದ - ಚಂದ್ರ
2. ನಿಯ್ಯತ್ತ್ - ಮನಸಂಕಲ್ಪ
3. ಮುಖಾಮು - ಗೋರಿ
4. ಮಿಸ್ಕೀನ್ - ಬಡವ
5. ವಲು - ಅಂಗಶುದ್ಧಿ
6. ಸಲಾತ್ ಮಜ್ಲಿಸ್ - ಜಪವೇದಿಕೆ
7. ನೇರ್ಚೆ - ಹರಕೆ
8. ಮಂಜಿಲಾಟ - ಅಣಕು ಮದ್ವೆ
9. ಮಂಜಿಲಪಾಟ್ - ಮದುವೆ ಹಾಡು
10. ಪುದಿಯಾಪ್ಲೆ - ಮದುಮಗ
11. ಪುದಿಯೆಪೆಣ್ಣ್ - ಮದುಮಗಳು
12. ಸುನ್ನತ್ - ಮುಂಜಿ
13. ಸುನ್ನತ್ ಪುದಿಯಾಪ್ಲೆ - ಮುಂಜಿಯ ಹುಡುಗ
14. ವಸ - ಮುಂಜಿ ಮಾಡುವವ
15. ನೈಚೋರು - ತುಪ್ಪದೂಟ
16. ಅತ್ತಾಳ - ಸಹರಿ ಊಟ
17. ಮಲಕ್ - ದೇವದೂತ
18. ಮೌತ್ - ಮರಣ
19. ತೌಬಾ - ಪಶ್ಚಾತ್ತಾಪ
20. ಜನಝು - ಮಯ್ಯತ್ ಮಂಚ
21. ಜಿನ್ನ್ - ಯಕ್ಷ
22. ಪಟ್ಟಿಸ ಎಲ್ಸರ - ರೇಶ್ಮೆ ಶಿರವಸ್ತ್ರ
23. ಅಬ್ಬಾ - ತಂದೆ
24. ಮಯ್ಯತ್ - ಮೃತದೇಹ

ಹಂಝ ಮಲಾರ್ (12-06-1975) ಪ್ರತಿಭಾವಂತ ಮುಸ್ಲಿಂ ಲೇಖಕ, ಪತ್ರಕರ್ತ. ಕೊಣಾಜೆ ಸಮೀಪದ 'ಅರಸ್ತಾನ' ಎಂಬ ಸಣ್ಣ ಹಳ್ಳಿಯಲ್ಲಿ ಅಬ್ದುಲ್ ಖಾದರ್ ಪಿ.ಎಂ. ಮತ್ತು ಸಾರಾಉಮ್ಮಾ ಎಂಬ ದಂಪತಿಗಳ ಪುತ್ರನಾದ ಅವರು ಬಿ.ಎ. ಪದವೀಧರರು.



21ರ ಹರೆಯದಲ್ಲೇ ಬ್ಯಾರಿ ಜನಾಂಗಕ್ಕೆ ಸಂಬಂಧಿಸಿದ ಮ್ಯೊಲಾಂಜಿ ಎನ್ನುವ ಪುಸ್ತಕ ಬರೆದಿದ್ದಾರೆ. ಅದು ದ್ವಿತೀಯ ಮುದ್ರಣವೂ ಕಂಡಿದೆ. ಮ್ಯೊಲಾಂಜಿ ಎಂಬ ಮಾಸಪತ್ರಿಕೆಯನ್ನು ಹೊರತಂದು ಅತೀ ಸಣ್ಣ ವಯಸ್ಸಿನ ಮುಸ್ಲಿಂ ಸಂಪಾದಕ ಎಂಬ ಕೀರ್ತಿಗೆ ಪಾತ್ರರಾದವರು.

ಅವರ 'ಅರಬಿ ಕಡಲಿಗೆ ಪರದೆ' ಎಂಬ ಕನ್ನಡ ಮತ್ತು 'ಬದ್‌ಕ್‌ದ ಕನ' ಎಂಬ ತುಳು ಕಾದಂಬರಿ ಇಷ್ಟರಲ್ಲೇ ಬಿಡುಗಡೆಯಾಗಲಿದೆ.

ಪ್ರಸ್ತುತ ಪತ್ರಕರ್ತನಾಗಿ ದುಡಿಯುತ್ತಿರುವ ಅವರದ್ದು ಪ್ರಾಯಕ್ಕೂ ಮೀರಿದ ಪ್ರತಿಭೆ. ಅವರ ಈ ಕಥಾ ಸಂಕಲನ ಹೊರತರಲು ನಮಗೆ ಹೆಮ್ಮೆ ಎನಿಸುತ್ತದೆ.

*-ಪ್ರಕಾಶಕರು*

---

"ತರುಣ ಲೇಖಕ, ಪತ್ರಕರ್ತ ಮಿತ್ರ ಹಂಝ ಮಲಾರ್ ತನ್ನ ವಯಸ್ಸಿಗೂ ಮೀರಿದ ಪ್ರತಿಭೆಯನ್ನು ಹೊರಗೆಡಹುತ್ತಿದ್ದಾರೆ. ಕೇವಲ ತನ್ನ 18ನೇ ಹರೆಯದಲ್ಲೇ ಮುಸ್ಲಿಂ ಸಮಾಜದ ಆಗು-ಹೋಗು, ಹುಳುಕುಗಳ ಬಗ್ಗೆ 'ಕಥೆ' ಬರೆಯುವುದೆಂದರೆ ಅದು ಸಾಮಾನ್ಯವಾದುದಲ್ಲ. ಇಂಥ ಲೇಖಕರು ಬೆಳೆಯಬೇಕೆಂಬುದೇ ನನ್ನ ಆಸೆ". ಹಾರೈಕೆಯೊಂದಿಗೆ,

ಹರಿಕೃಷ್ಣ ಪುನರೂರು, ಅಧ್ಯಕ್ಷರು, ದ.ಕ. ಜಿಲ್ಲಾ ಕ.ಸಾ.ಪ.

❖ ❖ ❖

"ಯಾವುದೇ ಕಥೆ, ಕಾದಂಬರಿ ಇತ್ಯಾದಿ ಸಾಹಿತ್ಯ ಪುಸ್ತಕಗಳ ಮೊದಲ ಪುಟವನ್ನು ನಾವು ಓದಬೇಕು. ಆ ಮೊದಲ ಪುಟಗಳು ರುಚಿಸಿದರೆ ಮುಂದೆ ಓದಿಸಿಕೊಂಡು ಹೋಗುವುದು ಸ್ವಾಭಾವಿಕ. ಅಂಥ ಒಂದು ಸೆಳೆತ ಹಂಝ ಮಲಾರ್‌ರವರ ಕಥೆಯಲ್ಲಿದೆ. ಅವರದು ವಯಸ್ಸಿಗೂ ಮೀರಿದ ಸಾಧನೆ. ಶ್ಲಾಘನಾರ್ಹ. ಅಲ್ಲಾಹು ಅವರ 'ಸಾಹಿತ್ಯ ಕೃಷಿ'ಗೆ ಮಳೆ ಸುರಿಸಲಿ".

- ಮಹಮ್ಮದ್ ಬಡ್ಡೂರ್ (ಸಾಹಿತಿ)